ಹೊಯ್ಸಳ ಮಾಲೆ - 2

# ತೀ.ನಂ. ಶ್ರೀಕಂಠಯ್ಯ



ಹೊಯ್ಸಳ ಕರ್ನಾಟಕ ಸಂಘ (ರಿ.)
3ನೇ ಅಡ್ಡರಸ್ತೆ, ಹೊಂಬೇಗೌಡನಗರ,
ಬೆಂಗಳೂರು - 560 027

# ಹೊಯ್ಸಳ ಕರ್ನಾಟಕ ಸಂಘ (ರಿ.)

3ನೇ ಅಡ್ಡರಸ್ತೆ, ಹೊಂಬೇಗೌಡನಗರ, ಬೆಂಗಳೂರು - 560 027


ಈ ಸಂಘವು ಹೊಯ್ಸಳ ಮಾಲೆ ಎಂಬ ಹೆಸರಿನಲ್ಲಿ ನಮ್ಮ ಪಂಗಡದ ಖ್ಯಾತನಾಮರನ್ನು ಕುರಿತು 64 ಪುಟಗಳಿಗೆ ಮೀರದಂತೆ ಕಿರು ಹೊತ್ತಿಗೆಗಳನ್ನು ಪ್ರಕಟಿಸಲು ಮುಂದೆ ಬಂದಿದೆ. ಇದನ್ನು ಮುಂದುವರಿಸಲು ನಮ್ಮ ಪ್ರಸಿದ್ಧ ತಾಂತ್ರಿಕೋದ್ಯಮಿಗಳಾದ ಮಾನ್ಯ ಶ್ರೀ ಎಂ.ವಿ. ಸತ್ಯನಾರಾಯಣ ಅವರು ಒಂದು ಲಕ್ಷ ರೂಪಾಯಿಗಳ ಪುದುವಟ್ಟನ್ನು ಸ್ಥಾಪಿಸಿ ಅದರ ಸಂಚಾಲಕರಾಗಿದ್ದಾರೆ. ಈ ಪುಸ್ತಕಗಳನ್ನು ಪ್ರಕಟಿಸಲು ನಮ್ಮ ಪ್ರಸಿದ್ಧ ವಿದ್ವಾಂಸರೂ ನಿಘಂಟು ತಜ್ಞರೂ ಆದ ನಾಡೋಜ ಪ್ರೊ|| ಜಿ. ವೆಂಕಟಸುಬ್ಬಯನವರ ಅಧ್ಯಕ್ಷತೆಯಲ್ಲಿ ಒಂದು ಸಂಪಾದಕರ ಮಂಡಲಿಯನ್ನು ಗೊತ್ತುಮಾಡಿದ್ದಾರೆ. ಸಂಘದ ಅಧ್ಯಕ್ಷರಾದ ಮಾನ್ಯ ಶ್ರೀ ಗೌರಿಶಂಕರ್ ಅವರು ಇದರ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತಿದ್ದಾರೆ. ಇಲ್ಲಿಯವರೆಗೆ 43 ಪುಸ್ತಕಗಳು ಪ್ರಕಟವಾಗಿವೆ. ಸದ್ಯಕ್ಕೆ 108 ಪುಸ್ತಕಗಳನ್ನು ಪ್ರಕಟಿಸುವ ಆಲೋಚನೆ ಇದೆ. ನಮ್ಮ ಬಾಂಧವರು ಅವರವರ ಮನೆತನದ ಖ್ಯಾತನಾಮರನ್ನು ಕುರಿತು ಪುಸ್ತಕಗಳನ್ನು ಬರೆದುಕೊಟ್ಟರೆ ಅದು ಸೂಕ್ತವಾಗಿ ಕಂಡಲ್ಲಿ ಪ್ರಕಟಿಸಬಹುದು. ನಮ್ಮ ಸಂಘದಲ್ಲಿ ಈ ಪುಸ್ತಕಗಳನ್ನು ದಯಮಾಡಿ ಕೊಂಡು, ಪ್ರೋತ್ಸಾಹಿಸಿ ಉತ್ತಮ ಪಡಿಸಲು ಸೂಚನೆಗಳನ್ನು ನೀಡಿದರೆ ಮುಂದಿನ ಪ್ರಕಟಣೆಗಳಿಗೆ ಅನುಕೂಲವಾಗುತ್ತದೆ.

ಈ ಪ್ರಯತ್ನವು ಸಫಲವಾಗುವಂತೆ ನಮ್ಮ ಬಾಂಧವರೆಲ್ಲ ಸಹಾಯ ಮಾಡಬೇಕು.

ಈ ಪುಸ್ತಕಗಳೆಲ್ಲವು ನಮ್ಮ ಎಲ್ಲರ ಮನೆಗಳಲ್ಲೂ ಇರಬೇಕೆಂಬುದು ನಮ್ಮ ಉದ್ದೇಶ. ಪ್ರಕಟಣೆಯ ಪ್ರಾಯೋಜಕರಾಗಲು ಎಲ್ಲರಿಗೂ ಅವಕಾಶವಿದೆ.

ದಯಮಾಡಿ ಸಹಕರಿಸಿ.

## ಹೊಯ್ಸಳ ಮಾಲೆ



ಹೊಯ್ಸಳ ಮಾಲೆ - 2

# ತೀ.ನಂ. ಶ್ರೀಕಂಠಯ್ಯ

ತೀ.ಶ್ರೀ. ನಾಗಭೂಷಣ



**ಹೊಯ್ಸಳ ಕರ್ನಾಟಕ ಸಂಘ (ರಿ.)**
3ನೇ ಅಡ್ಡರಸ್ತೆ, ಹೊಂಬೇಗೌಡನಗರ,
ಬೆಂಗಳೂರು - 560 027

ಮೊದಲ ಮುದ್ರಣ : ಮಾರ್ಚ್ 2008

ಬೆಲೆ : ರೂ. **30/-**

ಮುದ್ರಣ :
**ಜ್ವಾಲಾಮುಖಿ ಮುದ್ರಣಾಲಯ ಪ್ರೈ ಲಿ.**
ರಾಷ್ಟ್ರ ಪ್ರಶಸ್ತಿ ವಿಜೇತರು
44/1, ಕೆ.ಆರ್.ರಸ್ತೆ, ಬಸವನಗುಡಿ, ಬೆಂಗಳೂರು - 560 004
ಫೋನ್ : 080-26608090, 26617243
www.jwalamukhipress.com

# ಒಂದು ಮಾತು

ವಿಜಯನಗರ ಸಾಮ್ರಾಜ್ಯದ ರೂವಾರಿ ವಿದ್ಯಾರಣ್ಯ, ಆದಿಶಂಕರರ ಅವತಾರ ಪುರುಷರೆಂದು ಪ್ರಖ್ಯಾತರಾದ ಶ್ರೀ ಶ್ರೀ ಶ್ರೀ ಚಂದ್ರಶೇಖರೇಂದ್ರ ಸರಸ್ವತಿಯವರ ಪರಂಪರೆಯ ॥ಹೊಯ್ಸಳ ಕರ್ನಾಟಕ॥ ಬ್ರಾಹ್ಮಣ ಜನಾಂಗವು ರಾಜಕೀಯ, ಸಾಮಾಜಿಕ ಹಾಗೂ ಸಂಸ್ಕೃತಿಕ ಕ್ಷೇತ್ರಗಳಲ್ಲಿ ಸೇವೆಯನ್ನು ಸಲ್ಲಿಸಿ ದೇಶ ವಿದೇಶಗಳಲ್ಲಿ ಖ್ಯಾತಿಯನ್ನು ಪಡೆದಿದೆ. ಈ ಪಂಗಡದವರು ರಾಜಕೀಯ, ವಾಣಿಜ್ಯ, ಕೈಗಾರಿಕೆ, ವಿಜ್ಞಾನ, ಸಾಹಿತ್ಯ, ಸಂಗೀತ, ಕಲೆ, ವೈದ್ಯಕೀಯ ಹೀಗೆ ಹಲವಾರು ಕ್ಷೇತ್ರಗಳಲ್ಲಿ ಹೆಸರುವಾಸಿಯಾಗಿದ್ದಾರೆ.

ಈ ರೀತಿ ಪ್ರಸಿದ್ಧಿ ಪಡೆದ ಹಿರಿಯ ವ್ಯಕ್ತಿಗಳು ನಮ್ಮ ಯುವಪೀಳಿಗೆಗೆ ಪರಿಚಯಿಸಿ ಅವರಿಗೆ ಚೇತನ ಮತ್ತು ಸ್ಫೂರ್ತಿಯನ್ನು ತುಂಬುವುದೇ ಈ 'ಹೊಯ್ಸಳ ಮಾಲೆ ಯ ಧ್ಯೇಯ'. ಸಂಘದ ಮಾಜಿ ಅಧ್ಯಕ್ಷ ಹಾಗೂ ಹೆಸರಾಂತ ಕೈಗಾರಿಕೋದ್ಯಮಿ ಶ್ರೀ.ಎಂ.ವಿ.ಸತ್ಯನಾರಾಯಣರವರು ಒಂದು ಪುದವಟ್ಟನ್ನು ನಿರ್ಮಿಸಿ ನಮ್ಮ ಸಂಘದ ಮೂಲಕ ಈ ಪುಸ್ತಕ ಮಾಲೆಯನ್ನು ತರಬೇಕೆಂದು ಆಶಿಸಿದರು.

ಹಿರಿಯ ಸಾಹಿತಿಗಳು ಮತ್ತು ಗೌರವಾನ್ವಿತ ಪ್ರೊ. ಜಿ. ವೆಂಕಟಸುಬ್ಬಯ್ಯನವರು ಪ್ರಧಾನ ಸಂಪಾದಕರಾಗಿರುವುದು ನಮ್ಮೆಲ್ಲರ ಸುಕೃತ. ಅವರೊಡನೆ ಮಾರ್ಚ್ 1 ಮತ್ತು 2ರಂದು ಮೈಸೂರಿನಲ್ಲಿ ನಡೆಯುವ ಹೊಯ್ಸಳ ಕರ್ನಾಟಕ ಸಂಘಟನೆಯ ಶತಮಾನೋತ್ಸವ ಸಂದರ್ಭದಲ್ಲಿ ಈ ಮಾಲೆಯ ಮೊದಲ 9 ಪುಸ್ತಕಗಳು ಬಿಡುಗಡೆ ಮಾಡುತ್ತಿರುವುದು ಹೆಮ್ಮೆಯ ಸಂಗತಿ.

ಬೆಂಗಳೂರಿನ ಹೊಯ್ಸಳ ಕರ್ನಾಟಕ ಸಂಘ ಕಳೆದ 64 ವರ್ಷಗಳಿಂದ ನಮ್ಮ ಜನಾಂಗದ ಸೇವೆಯಲ್ಲಿ ತೊಡಗಿದೆ. ನಮ್ಮ ಯುವಕರ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವಂತೆ ವಿದ್ಯಾರ್ಥಿ ನಿಲಯವನ್ನು ನಡೆಸಲಾಗುತ್ತಿದೆ. ಪ್ರತಿವರ್ಷ ಪ್ರತಿಭಾವಂತ ಮತ್ತು ಆರ್ಥಿಕ ದುರ್ಬಲ ವಿದ್ಯಾರ್ಥಿಗಳಿಗೆ ವೇತನ ನೀಡಲಾಗುತ್ತಿದೆ. ವರ್ಷಂಪ್ರತಿ ನಡೆಯುವ ಸಂಘ ದಿನಾಚರಣೆಯಂದು ನಮ್ಮ ಜನಾಂಗದ ಹಿರಿಯ ವ್ಯಕ್ತಿಗಳು, ಪ್ರತಿಭಾನ್ವಿತ ವಿದ್ಯಾರ್ಥಿಗಳು ಹಾಗೂ ನಾನಾ ಕ್ಷೇತ್ರಗಳಲ್ಲಿ ಪ್ರಶಸ್ತಿ ಪಡೆದ

ವ್ಯಕ್ತಿಗಳನ್ನು ಗೌರವಿಸಲಾಗುತ್ತದೆ. ಇಂಥ ಎಲ್ಲಾ ಸಂಘಗಳೊಡನೆ ಕೂಡಿ ಸಹಕರಿಸಲು ನಮಗೆ ತುಂಬಾ ಸಂತಸ.

ನಾಡಿನ ಎಲ್ಲಾ ಹೊಯ್ಸಳ ಕರ್ನಾಟಕ ಸಂಘಟನೆಗಳೂ ಆಗಾಗ್ಗೆ ಕಲೆತು ಅನ್ಯೋನ್ಯತೆಯಿಂದ ಕೆಲಸ ಮಾಡಿ ಜನಾಂಗದ ವಿಶೇಷತೆಗಳನ್ನೂ-ಸಂಸ್ಕೃತಿಯನ್ನು ಉಳಿಸಿ, ಬೆಳೆಸುವುದು ಎಂದಿಗಿಂತ ಇಂದು ಅತ್ಯವಶ್ಯವಾಗಿದೆ.

ಸುಮಾರು 30 ಲಕ್ಷ ರೂ. ಅಂದಾಜಿನ ಈ ಮಾಲೆಯ ಪ್ರಕಟಣಾ ಕಾರ್ಯವು ಸುಸೂತ್ರವಾಗಿ ನಡೆಯಲು ಸಂಘಕ್ಕೆ ಹೊರೆಯಾಗದಂತೆ ಒಂದು ಆವರ್ತ ನಿಧಿಯನ್ನು ಸ್ಥಾಪಿಸಲು ಯೋಜಿಸಲಾಗಿದೆ.

ಒಂದು ಪುಸ್ತಕದ ಮುದ್ರಣ-ಪ್ರಕಟಣದ ವೆಚ್ಚ ಸುಮಾರು 15 ರಿಂದ 20 ಸಹಸ್ರ ರೂ.ಗಳಾಗಬಹುದು. (ನಮ್ಮ ಎಲ್ಲಾ ಬ್ರಾಹ್ಮಣ ವಿದ್ಯಾರ್ಥಿನಿಲಯಗಳಿಗೂ ಈ ಪುಸ್ತಕದ ಕೆಲವು ಪ್ರತಿಗಳನ್ನು ಉಚಿತವಾಗಿ ಕಳಿಸಲು ಯೋಜಿಸಲಾಗಿದೆ). ನಮ್ಮ ಎಲ್ಲಾ ಬಾಂಧವರೂ ಈ ಯೋಜನೆಯ ಯಶಸ್ಸಿಗೆ ಕೆಳಕಂಡಂತೆ ಸಹಾಯ ಮಾಡಬಹುದು.

1. ಒಂದು ಅಥವಾ ಹೆಚ್ಚು ಪುಸ್ತಕಕ್ಕೆ ಪ್ರಾಯೋಜಕರಾಗಬಹುದು. ಪ್ರಾಯೋಜಕರ ಹೆಸರನ್ನು ಆಯಾ ಪುಸ್ತಕಗಳಲ್ಲಿ ಪ್ರಕಟಿಸಲಾಗುವುದು.

2. ಒಂದು ಕುಟುಂಬದಿಂದ ಅಥವಾ ಇಬ್ಬರು ಮೂವರೂ ಸೇರಿ ಒಂದು ಅಥವಾ ಹೆಚ್ಚು ಪುಸ್ತಕಗಳ ಪ್ರಾಯೋಜಕರಾಗಬಹುದು.

3. ಪುಸ್ತಕಗಳನ್ನು ಕೊಂಡು ನಿಮ್ಮ ಮನೆಯಲ್ಲಿ ನಡೆಯುವ ಸಮಾರಂಭಗಳಲ್ಲಿ ಬಂಧು ಬಾಂಧವರಿಗೆ ಹಂಚುವುದು.

4. ಈ ಉದ್ದೇಶಕ್ಕಾಗಿ ದೇಣಿಗೆ ನೀಡುವುದು.

5. ಈ ಮಾಲೆಯ ಬಗ್ಗೆ ನಿಮ್ಮ ಬಂಧುಗಳಿಗೆ ತಿಳಿಸಿ ಅವರೂ ಈ ಕಾರ್ಯಗಳಲ್ಲಿ ನೆರವಾಗಲು ಪ್ರೇರೇಪಿಸುವುದು. ಪುಸ್ತಕದ ಮಾರಾಟ ಮತ್ತು ನಿಮ್ಮ ನೆರವು

ಪ್ರೋತ್ಸಾಹದಾಯಕವಾದರೆ ಸಂಘ ಪ್ರತಿ ಎರಡು ತಿಂಗಳಿಗೊಮ್ಮೆ 8 ರಿಂದ 12 ಪುಸ್ತಕಗಳನ್ನು ಪ್ರಕಟಿಸಲು ಶಕ್ತವಾಗಿದೆ ಎಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಈ ಪುಸ್ತಕ ಮಾಲೆಯನ್ನು ಮುದ್ರಿಸಲು ಅತ್ಯಂತ ಅತಿಶ್ರದ್ಧೆಯಿಂದ ಈ ಕಾರ್ಯವನ್ನು ನೆರವೇರಿಸುತ್ತಿರುವ ನಮ್ಮವರೇ ಆದ ಜ್ವಾಲಾಮುಖಿ ವಾರಪತ್ರಿಕೆಯ ಸಂಸ್ಥಾಪಕ ದಿ. ಸಿ.ಎಸ್. ಸತ್ಯ ಇವರ ಮಕ್ಕಳಾದ ಶ್ರೀಯುತ. ಶಿವಕುಮಾರ್, ರವಿಪ್ರಸಾದ್ ಮತ್ತು ಶಂಕರ್ ಇವರಿಗೆ ಸಂಘ ಆಭಾರಿಯಾಗಿದೆ.

ನಮ್ಮ ಕೋರಿಕೆಯನ್ನು ಮನ್ನಿಸಿ ವಿಷಯಗಳನ್ನು, ಉಪಯುಕ್ತಮಾಹಿತಿಗಳನ್ನು ಫೋಟೋಗಳನ್ನ ಸಂಗ್ರಹಿಸಿ ಅಂದವಾಗಿ ಈ ಪುಸ್ತಕವನ್ನು ಸಿದ್ಧಪಡಿಸಿರುವ ನಮ್ಮ ಆತ್ಮೀಯ ಲೇಖಕರಿಗೂ, ತಮ್ಮ ಬಿಡುವಿಲ್ಲದ ಕಾರ್ಯಕ್ರಮಗಳ ನಡುವೆ ದಣಿವನ್ನೂ ಲೆಕ್ಕಿಸದೆ ಉತ್ಸಾಹದ ಚಿಲುಮೆಯಾಗಿ ನಮಗೆ ಮಾರ್ಗದರ್ಶನ ಮಾಡುತ್ತಿರುವ ಪ್ರಧಾನ ಸಂಪಾದಕರಾದ ಪ್ರೋ.ಜಿ.ವೆಂಕಟಸುಬ್ಬಯ್ಯ ರವರಿಗೆ ಸಂಪಾದಕರ ಮಂಡಳಿಯ ಎಲ್ಲಾ ಸದಸ್ಯರಿಗೆ ಹಾಗೂ ಸಂಚಾಲಕರಾಗಿ ಕಾರ್ಯನಿರ್ವಹಿಸುತ್ತಿರುವ ಈ ಸಂಘದ ಮಾಜಿ ಅಧ್ಯಕ್ಷ ಶ್ರೀ.ಎಂ.ವಿ.ಸತ್ಯನಾರಾಯಣರವರಿಗೆ ನಮ್ಮ ಕೃತಜ್ಞತೆಗಳು.

**ಅರಕೆರೆ ಗೌರಿಶಂಕರ**

ಅಧ್ಯಕ್ಷರು

ಹೊಯ್ಸಳ ಕರ್ನಾಟಕ ಸಂಘ(ರಿ.)

ಬೆಂಗಳೂರು-27

# ಮುನ್ನುಡಿ

ಒಮ್ಮೆ ನಾನು ಶ್ರೀ ಎಂ.ವಿ. ಸತ್ಯನಾರಾಯಣ ಅವರೊಡನೆ ಮಾತನಾಡುತ್ತಿದ್ದಾಗ ಅವರು "ನಮ್ಮ ಹೊಯಿಸಳ ಕರ್ನಾಟಕ ಪಂಗಡದ ಹಿಂದಿನ ಹಿರಿಯ ವ್ಯಕ್ತಿಗಳಲ್ಲಿ ಪ್ರಸಿದ್ಧರಾಗಿದ್ದು ಅನೇಕ ಸಾಧನೆಗಳನ್ನು ಮಾಡಿದವರ ಬಗ್ಗೆ ಏನಾದರೂ ಚಾರಿತ್ರಿಕ ವಿವರಗಳಿವೆಯೆ?" ಎಂದು ಕೇಳಿದರು. ಈ ಬಗ್ಗೆ ನಾನು ಅನೇಕ ದಿನಗಳಿಂದ ಚಿಂತನೆ ಮಾಡುತ್ತಿದ್ದೆ. ಲಭ್ಯವಾದ ಶಾಸನಗಳ ಮತ್ತು ಪ್ರಾಚೀನ ಸಾಹಿತ್ಯದ ಆಧಾರಗಳಿಂದ ಒಂದು ಪ್ರಬಂಧವನ್ನು ಬರೆಯಬೇಕೆಂದು ಕೆಲವು ವಿಷಯಗಳನ್ನು ಸಂಗ್ರಹಿಸಿದ್ದೆ.

'ಹೊಯ್ಸಳ' ಎಂಬ ಶಬ್ದವು ದೇಶವಾಚಕವಾದದ್ದು. ಅದು 'ಪೊಯಿಸಳ' ಎಂಬ ಶಬ್ದದ ಈಗಿನ ರೂಪ. ಶಾಸನಗಳಲ್ಲಿ 'ಪೊಯಿಸಳನಾಡು' ಎಂಬ ಉಲ್ಲೇಖವಿದೆ. ಮುದ್ರಾಮಂಜೂಷವನ್ನು ರಚಿಸಿದ ಕೆಂಪುನಾರಾಯಣನು ತಾನು 'ಪೊಯಿಸಳಿಗ' ಕುಲದವನು ಎಂದು ಹೇಳಿಕೊಂಡಿದ್ದಾನೆ. ಅವನ ಕಾಲ 1830. ನಾವೆಲ್ಲ ನಮ್ಮನ್ನು ಕರ್ನಾಟಕರು, ಕನ್ನಡಿಗರು, ಕನ್ನಡ ಕುಲಕ್ಕೆ ಸೇರಿದವರು ಎಂದು ಹೇಳಿಕೊಂಡಿರುವುದಕ್ಕೆ ಆಧಾರವಿದೆ. ಈ ವಿಚಾರವನ್ನು ಹಿಂದೆ ಪ್ರಕಟವಾದ ಹೊಯ್ಸಳ ಕರ್ನಾಟಕ ಸಂಘದ ರಜತ ಮಹೋತ್ಸವ ಸಂಪುಟದಲ್ಲಿ ಪ್ರಕಟಿಸಲಾಗಿದೆ.

ಅನೇಕ ದಾನ ಶಾಸನಗಳು ಹೊಯಿಸಳ ಕರ್ನಾಟಕರ ಮನೆತನಗಳಲ್ಲಿ ಈಗಲೂ ಕಾಣಬರುತ್ತವೆ. ಈ ಗುಂಪಿನ ಜನರಲ್ಲಿ ಅನೇಕ ವಿದ್ವಾಂಸರು, ಪ್ರಸಿದ್ಧ ವೈದ್ಯರು, ಪರಿಣತರಾದ ಸಂಗೀತಗಾರರೂ, ವಾದ್ಯ ನಿಪುಣರು ಇದ್ದರು. ಈ ಬಗ್ಗೆ ಚಾರಿತ್ರಿಕವಾಗಿ ಯಾವ ದಾಖಲೆಯೂ ಆಗದೆ ಎಲ್ಲ ಕತ್ತಲೆಯಲ್ಲಿ ಮುಳುಗಿಹೋಗಿದೆ. ಸಂಶೋಧನೆ ಮಾಡಿದರೆ ಅನೇಕ ವಿಷಯಗಳು ದೊರೆಯುತ್ತವೆ. ನಾನು ಈ ಬಗ್ಗೆ ಕೆಲವು ವಿವರಗಳನ್ನು ಶ್ರೀ ಸತ್ಯನಾರಾಯಣ ಅವರಿಗೆ ನೀಡಿದೆ. ಅವರು "ಈಗಲಾದರೂ ನಾವು ನಮಗೆ ದೊರಕುವಷ್ಟು ವಿವರಗಳನ್ನು ಸಂಗ್ರಹಿಸಿ ವಿವಿಧ ವಿದ್ವಾಂಸರ, ಸಂಗೀತಗಾರರ, ವೈದ್ಯರ, ಪುರಾಣಿಕರ, ಪ್ರವಚನಕಾರರ ಬಗ್ಗೆ ಸಣ್ಣ ಸಣ್ಣ ಪುಸ್ತಕಗಳನ್ನು ಪ್ರಕಟಿಸೋಣ. ಮುಂದೆ ಸಂಶೋಧನೆಗಳಿಂದ ಹೆಚ್ಚು ವಿವರಗಳು ದೊರಕಿದರೆ ಅದನ್ನು ಪ್ರಕಟ ಮಾಡೋಣ. ಇಂಥ ಕೆಲಸಕ್ಕೆ ನಾನು ಒಂದು ಲಕ್ಷ ರೂಪಾಯಿಗಳ ಒಂದು

ದತ್ತಿಯನ್ನು ನೀಡುತ್ತೇನೆ. 'ಹೊಯ್ಸಳಮಾಲೆ' ಎಂಬ ಹೆಸರಿನಲ್ಲಿ ಈ ಪುಸ್ತಕಗಳು ಪ್ರಕಟವಾಗಲಿ. ನೀವು ಈ ಮಾಲೆಯ ಪ್ರಧಾನ ಸಂಪಾದಕರಾಗಿ ಕಾರ್ಯವನ್ನು ನಡೆಸಿಕೊಡಬೇಕು'' ಎಂದು ನಿರ್ಧಾರವಾಗಿ ಹೇಳಿಬಿಟ್ಟರು. ಈ ಕೆಲಸಕ್ಕಾಗಿ ಕೂಡಲೇ ಒಂದು ಸಂಪಾದಕ ಮಂಡಲಿಯನ್ನು ರಚಿಸಿಬಿಟ್ಟರು. ಆ ಮಂಡಲಿಯ ಸ್ವರೂಪ ಹೀಗಿತ್ತು:

1. ಪ್ರೊ. ಜಿ. ವೆಂಕಟಸುಬ್ಬಯ್ಯ, ಪ್ರಧಾನ ಸಂಪಾದಕರು
2. ಶ್ರೀ ಗರುಡನಗಿರಿ ನಾಗರಾಜ, ಸದಸ್ಯರು
3. ಶ್ರೀ ಬಿ.ಜಿ. ಶ್ರೀರಂಗಯ್ಯ, ಸದಸ್ಯರು
4. ಶ್ರೀ ಬಿ.ಎನ್. ಅನಂತನಾರಾಯಣ, ಸದಸ್ಯರು
5. ಶ್ರೀಮತಿ ಶಾರದಾ ಶಾಮಣ್ಣ, ಸದಸ್ಯರು
6. ಶ್ರೀ ಎ.ವಿ. ಸತ್ಯನಾರಾಯಣ, ಸಂಚಾಲಕರು

ಈ ಸಭೆಯು ಸೇರಿ ಒಂದು ಕಾರ್ಯಕ್ರಮವನ್ನು ನಿರ್ಧಾರ ಮಾಡಿದೆ.

ಮೊದಲಿಗೆ ಕಿಂಚಿತ್‌ಪೂರ್ವದಲ್ಲಿ ಬದುಕಿದ್ದ ಹಿರಿಯರಲ್ಲಿ ಹತ್ತು ಜನರನ್ನು ಗುರುತಿಸಿ ಅವರ ಬಗ್ಗೆ ತಿಳಿವಳಿಕೆಯುಳ್ಳವರಿಂದ 1/8 ಡೆಮ್ಮಿ 64 ಪುಟಗಳ ಪುಸ್ತಕಗಳನ್ನು ಬರೆಯಿಸಬೇಕು. ಹೀಗೆ ಈ ಮಾಲೆಗೆ ಪುಸ್ತಕಗಳನ್ನು ರಚಿಸುವವರು ತಮ್ಮ ಬರವಣಿಗೆಯಲ್ಲಿ ಸತ್ಯಕ್ಕೆ ಅಪಚಾರವಾಗದ ಹಾಗೆ, ಯಾವ ವಿರೋಧವನ್ನು ಸೃಷ್ಟಿಸಿದ ಹಾಗೆ, ಯಾವ ಅನುಮಾನಗಳಿಗೂ ಅವಮಾನಗಳಿಗೂ ಅವಕಾಶವಾಗದ ಹಾಗೆ, ಅತಿಉತ್ಪ್ರೇಕ್ಷೆಯಾಗಲಿ, ಅತಿ ಸಂಕೋಚ ಪ್ರವೃತ್ತಿಯಾಗಲಿ ಇರದಂತೆ ಬರೆಯಬೇಕು. ಅತ್ಯುಕ್ತಿಯು ಓದುಗರಿಗೆ ಬೇಸರವನ್ನುಂಟುಮಾಡುತ್ತದೆ. ಅತಿ ಸಂಕೋಚ ವ್ಯಕ್ತಿಗೆ ಅಪಚಾರವಾಗುತ್ತದೆ. ಆದುದರಿಂದ ಬರವಣಿಗೆಯು ಸುವರ್ಣ ಮಾಧ್ಯಮದಲ್ಲಿ ಪ್ರಸನ್ನತೆಯನ್ನು ಗಾಂಭೀರ್ಯವನ್ನು ಉಂಟುಮಾಡುವಂತೆ ನೋಡಿಕೊಳ್ಳಬೇಕೆಂದು ಬರಹಗಾರರಿಗೆ ತಿಳಿಸಬೇಕು. ವ್ಯಕ್ತಿಗಳ ಸಾಧನೆಯನ್ನು ಹಿರಿಮೆಯನ್ನು ಎತ್ತಿ ತೋರಿಸಬೇಕು ಎಂದು ತೀರ್ಮಾನಿಸಲಾಯಿತು.

ಇಷ್ಟೆಲ್ಲ ಪೂರ್ವಸಿದ್ಧತೆಯಿಂದ ಈಗ ಪ್ರಕಟವಾಗಿರುವ ಪುಸ್ತಕಗಳು ರಚಿತವಾಗಿವೆ. ಇವು ಹೊಯ್ಸಳ ಕರ್ನಾಟಕ ಯುವಕ ಯುವತಿಯರ ಭವಿಷ್ಯಕ್ಕೆ ಮಾರ್ಗದರ್ಶಕವಾಗಬೇಕು. ಇತರ ಉದಯೋನ್ಮುಖರಿಗೂ ಆಸಕ್ತಿಯನ್ನು ಕೆರಳಿಸುವಂತಿರಬೇಕು. ಈ ಪುಸ್ತಕಗಳನ್ನು ಓದುವವರು ಇವುಗಳ ಪ್ರಕಟಣೆಯಲ್ಲಿ

ಏನಾದರೂ ವಿಶೇಷ ವಿಷಯಗಳು ಇರಬೇಕೆಂದು ಬಯಸಿದರೆ ಆ ವಿವರಗಳನ್ನು ನಮಗೆ ತಿಳಿಸಿದರೆ ಅಂಥ ಎಲ್ಲ ಸಲಹೆಗಳಿಗೂ ಸ್ವಾಗತವಿದೆ ಎಂದು ಹೇಳಬಯಸುತ್ತೇವೆ.

'ಹೊಯ್ಸಳ ಮಾಲೆ'ಗೆ ಪುಸ್ತಕಗಳನ್ನು ರಚಿಸಿದವರಿಗೆಲ್ಲ ನಮ್ಮ ವಂದನೆಗಳು. ಈ ಮಾಲೆಯ ಪುಸ್ತಕಗಳನ್ನು ಮುದ್ರಣಕ್ಕೆ ಸಿದ್ಧಮಾಡುತ್ತಿದ್ದಾಗ ನನ್ನ ಪುಸ್ತಕ ಭಂಡಾರದಲ್ಲಿ ಎಲ್ಲೋ ಮುಚ್ಚಿಟ್ಟುಕೊಂಡಿರುವ ವಿವರಗಳನ್ನು ಹುಡುಕಿ ಸಮಯಕ್ಕೆ ಸರಿಯಾಗಿ ನನಗೆ ಸಹಾಯ ಮಾಡಿದ ನನ್ನ ಕಿರಿಯ ಮಗ ಚಿ|| ಜಿ.ವಿ. ಅರುಣನಿಗೆ ಶುಭವನ್ನು ಕೋರುತ್ತೇನೆ.

ಹೊಯಿಸಳ ಕರ್ನಾಟಕ ಬಂಧುಗಳು ಈ ಮಾಲೆಗೆ ಎಲ್ಲ ಬೆಂಬಲವನ್ನು ನೀಡಿ, ಈ ಮಾಲೆ ನೂರನ್ನು ದಾಟಲಿ ಎಂದು ಹರಸಿ ಸಹಕರಿಸಬೇಕೆಂದು ವಿನಂತಿಸುತ್ತೇನೆ.

ಜಿ. ವೆಂಕಟಸುಬ್ಬಯ್ಯ
ಸಂಪಾದಕ ಮಂಡಲಿಯ ಪರವಾಗಿ

ನಂ. 58, 31ನೇ ಕ್ರಾಸ್
7ನೇ ಬ್ಲಾಕ್, ಜಯನಗರ
ಬೆಂಗಳೂರು–560 070.
1–3–2008

# ಲೇಖಕರ ಬಿನ್ನಹ

ನಮ್ಮ ಪೂಜ್ಯ ತಂದೆಯವರಾದ ದಿವಂಗತ ಆಚಾರ್ಯ ತೀ.ನಂ. ಶ್ರೀಕಂಠಯ್ಯ(ತೀನಂಶ್ರೀ) ಅವರ ಬಗ್ಗೆ ಹೊಯ್ಸಳ ಕರ್ನಾಟಕ ಸಂಘದ ಶತಮಾನೋತ್ಸವ ಆಚರಣೆಯ ಸಂದರ್ಭದಲ್ಲಿ 'ಹೊಯ್ಸಳ ಮಾಲೆ'ಗೆ ಈ ಕಿರುಹೊತ್ತಿಗೆಯನ್ನು ಬರೆದುಕೊಡಲು ಅವಕಾಶ ಮಾಡಿಕೊಟ್ಟದ್ದಕ್ಕಾಗಿ ಸಂಘಕ್ಕೆ ಮತ್ತು ಮಾಲೆಯ ಸಂಪಾದಕ ಮಂಡಲಿಗೆ ನನ್ನ ವಂದನೆಗಳನ್ನು ಸಲ್ಲಿಸಲು ಬಯಸುತ್ತೇನೆ.

ತೀನಂಶ್ರೀಯವರ ಜನ್ಮ ಶತಮಾನೋತ್ಸವ ವರ್ಷ ಈಚೆಗೆ ತಾನೆ ಬಹು ವಿಜೃಂಭಣೆಯಿಂದ ನಡೆದಿದೆ. ಅವರ ವಿದ್ವತ್ತು, ಪಾಂಡಿತ್ಯ, ಸಹೃದಯತೆ ಮತ್ತು ಅಪೂರ್ವ ಮಾನವೀಯ ಗುಣಗಳು ನಾಡಿನಲ್ಲಿ, ಅಷ್ಟೇ ಏಕೆ ದೇಶ ವಿದೇಶಗಳಲ್ಲಿ ಸಾಕಷ್ಟು ಪ್ರಚಾರವಾಗಿವೆ. ತೀನಂಶ್ರೀಯವರು ಅಪಾರ ವಿದ್ಯಾರ್ಥಿಗಳ ಮತ್ತು ಅಭಿಮಾನಗಳ ಮನ ಮತ್ತು ಹೃದಯಗಳಲ್ಲಿ ಚಿರಸ್ಥಾನವನ್ನು ಪಡೆದಿದ್ದಾರೆ. ಈ ಪುಸ್ತಿಕೆಯಲ್ಲಿ ತೀನಂಶ್ರೀಯವರ ಬಹುಮುಖ ವ್ಯಕ್ತಿತ್ವವನ್ನು, ಸಾಹಿತ್ಯ ಮತ್ತು ಭಾಷೆಗಳಿಗೆ ಅವರ ಅಪೂರ್ವ ಕೊಡುಗೆಗಳನ್ನು ಕುರಿತು ಸಂಕ್ಷಿಪ್ತವಾಗಿ ಬರೆಯಲಾಗಿದೆ. ಈ ಪುಸ್ತಕವನ್ನು ಓದುವ ಬಂಧುಗಳು ಮತ್ತು ಸಹೃದಯರು ತೀನಂಶ್ರೀಯವರ ಜೀವನ ಮತ್ತು ಪಾಂಡಿತ್ಯಗಳ ಬೃಹತ್ ಚಿತ್ರವನ್ನು ವೀಕ್ಷಿಸಲು ಪ್ರೇರಿತರಾಗುತ್ತಾರೆ ಎಂದು ನಂಬಿದ್ದೇನೆ.

ತೀನಂಶ್ರೀಯವರ ಕೃತಿಗಳ ಬಗ್ಗೆ ಬರೆಯುವಾಗ ದಿವಂಗತ ಪ್ರೊ. ಎಚ್.ಜಿ. ಸಣ್ಣಗುಡ್ಡಯ್ಯ ಅವರ ಪುಸ್ತಕವನ್ನು ಧಾರಾಳವಾಗಿ ಬಳಸಿಕೊಂಡಿದ್ದೇನೆ. ಇದಕ್ಕಾಗಿ ಅವರನ್ನು ಕೃತಜ್ಞತೆಯಿಂದ ಸ್ಮರಿಸುತ್ತೇನೆ. ಈ ಪುಸ್ತಿಕೆಯ ಬರವಣಿಗೆಯಲ್ಲಿ ಸಹಾಯ ಮಾಡಿದ ನನ್ನ ಪತ್ನಿ ಚಿ|| ಸೌ|| ಶಾರದಾಳಿಗೆ ನನ್ನ ಪ್ರೀತಿಯ ಧನ್ಯವಾದಗಳು. ಈ ಪುಸ್ತಕದ ಪ್ರಕಟಣೆಯಲ್ಲಿ ಸಹಾಯ ಮಾಡಿದ ಎಲ್ಲರಿಗೂ ನನ್ನ ವಂದನೆಗಳು.

**- ತೀ.ಶ್ರೀ. ನಾಗಭೂಷಣ**

# ಮನೆತನ

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿಯಿಂದ ಸುಮಾರು ಹತ್ತು ಮೈಲಿಗಳ ದೂರದಲ್ಲಿ ಗುಡ್ಡಗಳ ನಡುವಣ ನೈಜವಾದ ಪರಿಸರದಲ್ಲಿದೆ ತೀರ್ಥಪುರ ಗ್ರಾಮ. ಕೆಲವು ಶತಮಾನಗಳ ಹಿಂದೆ ಇಲ್ಲಿಗೆ ಸುಮಾರು ಹದಿನೈದು ಮೈಲಿಗಳ ದೂರದಲ್ಲಿರುವ ಹಾಗಲವಾಡಿ ಸಂಸ್ಥಾನದಲ್ಲಿ ಮಂತ್ರಿಗಳಾಗಿದ್ದರು ವಸಿಷ್ಠ ಗೋತ್ರದ ನಮ್ಮ ಪೂರ್ವಜರು. ಆ ಸಂಸ್ಥಾನದ ಪಾಳೇಗಾರರು, ಆಕ್ರಮಣದಲ್ಲಿ ಸೋಲನ್ನು ಅನುಭವಿಸಿದಾಗ ನಮ್ಮ ವಂಶಜರು ಅಲ್ಲಿಂದ ಬಂದು ತೀರ್ಥಪುರದಲ್ಲಿ ನೆಲಸಿ ಮುಂದೆ ಅಲ್ಲಿಯ ಶ್ಯಾನುಭೋಗರಾದರು. ತೀರ್ಥಪುರ 1950ರ ದಶಕದವರೆಗೂ ಒಂದು ಕುಗ್ರಾಮವಾಗಿತ್ತು, ವಿದ್ಯುತ್ ಸಂಪರ್ಕವಿರಲಿಲ್ಲ, ಅನುಕೂಲವಾದ ರಸ್ತೆಗಳಿಲ್ಲದುದರಿಂದ ಹಳ್ಳಿಗೆ ಬಸ್ಸು ಮತ್ತು ಇತರ ವಾಹನಗಳ ಸಂಚಾರ ಸೌಕರ್ಯವಿರಲಿಲ್ಲ, ಚಿಕ್ಕನಾಯಕನಹಳ್ಳಿಯಿಂದ ಎತ್ತಿನಗಾಡಿಯಲ್ಲಿ ಸುಮಾರು ಮೂರು ಗಂಟೆಗಳ ಪ್ರಯಾಣವಾಗುತ್ತಿತ್ತು, ಇಲ್ಲವಾದರೆ ನಡೆದು ಬರಬೇಕಾಗುತ್ತಿತ್ತು ಮಧ್ಯದ ಕಾಡಿನಲ್ಲಿ ಹುಲಿ ಚಿರತೆಗಳ ಓಡಾಟವಿತ್ತು ನಮ್ಮ ದೊಡ್ಡಪ್ಪನವರೊಬ್ಬರು ಹುಲಿಯ ಕೈಗೆ ಸಿಕ್ಕಿ ಪಾರಾಗಿ ಬಂದ ಘಟನೆಯೂ ನಡೆದಿದೆ.

ತೀನಂಶ್ರೀಯವರ ತಾತ ಸೂರ್ಯನಾರಾಯಣಪ್ಪನವರು. ಅವರಿಗೆ ಒಬ್ಬ ಮಗ ನಂಜುಂಡಯ್ಯನವರು ಮತ್ತು ಇಬ್ಬರು ಹೆಣ್ಣುಮಕ್ಕಳು ನಂಜಮ್ಮ ಮತ್ತು ಲಕ್ಷ್ಮೀದೇವಮ್ಮನವರು. ನಂಜುಂಡಯ್ಯನವರ ಪತ್ನಿ ಬಳುವನೇರಲಿನ ಭಾಗೀರಥಮ್ಮನವರು. ಇವರ ಸುಪುತ್ರನಾಗಿ ತೀನಂಶ್ರೀಯವರು 1906ನೇ ಇಸವಿ ನವೆಂಬರ್ 26ರಂದು ತೀರ್ಥಪುರ ಗ್ರಾಮದಲ್ಲಿ ಜನ್ಮತಾಳಿದರು. ಅವರ ಒಡಹುಟ್ಟಿದವರು ಒಬ್ಬಳು ತಂಗಿ ಸಾವಿತ್ರಮ್ಮ ಮಾತ್ರ. ತೀನಂಶ್ರೀಯವರಿಗೆ 9 ವರ್ಷವಾಗಿದ್ದಾಗ ಅವರ ತಾಯಿ ಭಾಗೀರಥಮ್ಮನವರು ನಿಧನಹೊಂದಿದರು. ಆಗ ಅವರ ತಂಗಿಗೆ 6 ವರ್ಷ ಮಾತ್ರ. ಇದು ಅವಿಭಕ್ತ ಕುಟುಂಬವಾದುದರಿಂದ (ಈ ಕುಟುಂಬ ಈಚೆಗೆ ಕಾಗದದಲ್ಲಿ ಅಧಿಕೃತವಾಗಿ ಬೇರೆಯಾಗಿದ್ದರೂ ಇಂದಿಗೂ ನಾಲ್ಕೈದು ತಲೆಮಾರುಗಳ ನಂತರವೂ ಅವಿಭಕ್ತ ಕುಟುಂಬವಾಗಿ ಮುಂದುವರಿದಿದೆಯೆನ್ನುವುದು ಒಂದು ಹೆಮ್ಮೆಯ ಮತ್ತು ಸಂತೋಷದ ವಿಷಯವಾಗಿದೆ) ತೀನಂಶ್ರೀಯವರ ತಾತ ಸೂರ್ಯನಾರಾಯಣಪ್ಪನವರ ಅಣ್ಣನ ಮಗನ ಮಕ್ಕಳಾದ (ಮೊಮ್ಮಕ್ಕಳಾದ) ನಂಜುಂಡಯ್ಯ ಮತ್ತು

ಸೂರ್ಯನಾರಾಯಣಪ್ಪ ಮತ್ತು ಅವರ ಪತ್ನಿಯರುಗಳಾದ ಗೌರಮ್ಮ ಮತ್ತು ವೆಂಕಟಲಕ್ಷ್ಮಮ್ಮನವರು. ಹಿರಿಯರಾದ ನಂಜುಂಡಯ್ಯನವರ ನೇತೃತ್ವದಲ್ಲಿ ಶೀನಂಶ್ರೀಯವರನ್ನು ಚಿಕ್ಕಂದಿನಲ್ಲಿ ಲಾಲಿಸಿ, ಪಾಲಿಸಿ ಅವರ ಪೋಷಣೆ ಮತ್ತು ಬೆಳವಣಿಗೆಯನ್ನು ನೋಡಿಕೊಂಡರು. ಶೀನಂಶ್ರೀ ಮತ್ತು ನಂಜುಂಡಯ್ಯ, ಸೂರ್ಯನಾರಾಯಣಪ್ಪನವರು ಮೂರನೆಯ ತಲೆಮಾರಿನ ಸಂಬಂಧಿಗಳು (ಎರಡನೆಯ ಕಸಿನ್ಸ್). ಆದರೆ ಯಾವ ಕಾಲಕ್ಕೂ ಅವರಿಬ್ಬರು ಶೀನಂಶ್ರೀಯವರ ಸ್ವಂತ ಅಣ್ಣನಂತಿದ್ದರು. ಅವರು ಮತ್ತು ಅತ್ತಿಗೆಯರು ತೋರಿದ ಪ್ರೀತಿ ವಿಶ್ವಾಸ ಮತ್ತು ತಮ್ಮ ಅಭಿವೃದ್ಧಿಗಾಗಿ ಮಾಡಿದ ತ್ಯಾಗವನ್ನು ಶೀನಂಶ್ರೀಯವರು ಸದಾ ಕೃತಜ್ಞತೆಯಿಂದ ನೆನಸುತ್ತಿದ್ದರು.

ಶೀನಂಶ್ರೀಯವರ ತಂಗಿ ಸಾವಿತ್ರಮ್ಮನವರಿಗೆ ಸೋದರ ಸಂಬಂಧದಲ್ಲಿ ವಿವಾಹವಾಗಿದ್ದರೂ, ಅವರಿಗೆ ತಗುಲಿದ ವಾಸಿಯಾಗದ ಮಾನಸಿಕ ಖಾಯಿಲೆಯಿಂದ ಸಂಸಾರ ಜೀವನವನ್ನು ಮುಂದುವರಿಸಲಾಗಲಿಲ್ಲ. ಇದು ಶೀನಂಶ್ರೀಯವರಿಗೆ ಒಂದು ಮರೆಯಲಾಗದ ದೊಡ್ಡ ದುಃಖವಾಗಿತ್ತು. ತಂಗಿಯನ್ನು ತಮ್ಮ ಜೊತೆಯಲ್ಲಿಟ್ಟುಕೊಂಡು ಎಷ್ಟು ಪ್ರಯತ್ನ ಮಾಡಿದರೂ ಯಾವ ಚಿಕಿತ್ಸೆಯೂ ಫಲಕಾರಿಯಾಗಲಿಲ್ಲ. ತಮ್ಮ ಅಣ್ಣಂದಿರಾದ ನಂಜುಂಡಯ್ಯ ಮತ್ತು ಸೂರ್ಯನಾರಾಯಣಪ್ಪನವರ ಸಲಹೆ ಮತ್ತು ಒತ್ತಾಯದಂತೆ ಸಾವಿತ್ರಮ್ಮನವರು ಕೊನೆಯ ದಿನದವರೆಗೂ ತೀರ್ಥಪುರದಲ್ಲೇ ಕಳೆದರು. ಇವರನ್ನು ಪಾಲಿಸುವ ಪೂರ್ತಿ ಜವಾಬ್ದಾರಿಯನ್ನು ಶೀನಂಶ್ರೀಯವರ ಅಣ್ಣಂದಿರು ಅತ್ತಿಗೆಯಂದಿರು ಮತ್ತು ಸೂರ್ಯನಾರಾಯಣಪ್ಪನವರ ಮಗ ನಂಜುಂಡಯ್ಯ ಮತ್ತು ಸೊಸೆ ಸತ್ಯಭಾಮಮ್ಮ ವಹಿಸಿಕೊಂಡಿದ್ದರು. ತೀರ್ಥಪುರದಲ್ಲಿ ಇಂದಿಗೂ ಶೀನಂಶ್ರೀಯವರ ವಂಶದ ಸಂತತಿ ಸೂರ್ಯನಾರಾಯಣಪ್ಪನವರ ಇಬ್ಬರು ಗಂಡುಮಕ್ಕಳ ಮಕ್ಕಳಾದ (ಮೊಮ್ಮಕ್ಕಳಾದ) ರಾಮಸ್ವಾಮಿ, ಶ್ರೀಕಂಠ ಪ್ರಸಾದ ಮತ್ತು ಅವರ ಪತ್ನಿಯರಾದ ಕಾಮಾಕ್ಷಿ ಮತ್ತು ಭಾಗ್ಯ ಅಲ್ಲಿಯೇ ನೆಲಸುವ ಮೂಲಕ ಮುಂದುವರಿಯುತ್ತಿದೆ ಮತ್ತು ನಮ್ಮೆಲ್ಲರಿಗೂ ನಮ್ಮ ಊರು ತೀರ್ಥಪುರದ ಸತತವಾದ ಸಂಪರ್ಕವಿದೆ.

ಶೀನಂಶ್ರೀಯವರ ಸೋದರತ್ತೆ ಲಕ್ಷ್ಮೀದೇವಮ್ಮ (ನಮ್ಮೆಲ್ಲರಿಗೂ ಮೈಸೂರು ಅಜ್ಜಿ) ಚಿಕ್ಕವಯಸ್ಸಿನಲ್ಲೇ ವಿಧವೆಯಾಗಿ ತೀರ್ಥಪುರದಲ್ಲಿಯೇ ಇದ್ದರು. ಶೀನಂಶ್ರೀ 1919ರಲ್ಲಿ ಪ್ರೌಢಶಾಲೆ ವಿದ್ಯಾಭ್ಯಾಸಕ್ಕಾಗಿ ತುಮಕೂರಿಗೆ ಬಂದಾಗ ಅವರೊಡನೆ ಬಂದು ಮುಂದೆ ಅವರು ಮೈಸೂರಿನ ಕಾಲೇಜಿನಲ್ಲಿ ವ್ಯಾಸಂಗ ಮಾಡುವಾಗ

ಅವರ ಜೊತೆಗಿದ್ದು, ಅನಂತರ 1943ರಲ್ಲಿ ನಿಧನ ಹೊಂದುವವರೆಗೂ ನಮ್ಮ ಸಂಸಾರದ ಜೊತೆಯಲ್ಲಿದ್ದು ಮೈಸೂರು ಅಜ್ಜಿ ತೀನಂಶ್ರೀಯವರಿಗೆ ಸದಾ ಬೆಂಬಲವಾಗಿದ್ದರು.

ತೀನಂಶ್ರೀಯವರು 1926ರಲ್ಲಿ ಮೈಸೂರಿನಲ್ಲಿ ಮಹಾರಾಜ ಕಾಲೇಜಿನಲ್ಲಿ ಬಿ.ಎ. ಪದವಿಗೆ ವ್ಯಾಸಂಗ ಮಾಡುತ್ತಿದ್ದಾಗ ತುರುವೇಕೆರೆಯಲ್ಲಿ ಎನ್.ವಿ. ಸುಬ್ಬರಾವ್ ಮತ್ತು ಸಾವಿತ್ರಮ್ಮನವರ ಮಗಳಾದ ಜಯಲಕ್ಷ್ಮಮ್ಮನವರ (ನಮ್ಮ ತಾಯಿ) ಜೊತೆ ವಿವಾಹವಾಯಿತು. ಆಗ ತೀನಂಶ್ರೀಯವರಿಗೆ 19 ವರ್ಷ ಮತ್ತು ಜಯಲಕ್ಷ್ಮಮ್ಮನವರಿಗೆ 12 ವರ್ಷ. ಬಿ.ಎ. ಅಂತಿಮ ಪರೀಕ್ಷೆಗೆ 15 ದಿನಗಳ ಮಾತ್ರ ಬಾಕಿ ಇರುವಾಗ ತುರುವೇಕೆರೆಯಲ್ಲಿ ಒಂದು ವಾರ ಕಾಲ ಮದುವೆ ನಡೆಯಿತಂತೆ. ನಮ್ಮ ತಂದೆ ತಾಯಿಯವರದು 40 ವರ್ಷಗಳ ಕಾಲದ ಆದರ್ಶ ದಾಂಪತ್ಯ ಜೀವನ. ವಿದ್ವತ್ತು ಮತ್ತು ಆತಿಥ್ಯಗಳ ಬಹು ಅಪರೂಪವಾದ ಮಿಲನ. ಎಲ್ಲರೂ ಆಶ್ಚರ್ಯ ಮತ್ತು ಗೌರವಗಳಿಂದ ಮೆಚ್ಚಿದ ಸಾಂಸಾರಿಕ ಜೀವನ. ತೀನಂಶ್ರೀಯವರು ಜಯಲಕ್ಷ್ಮಿಯನ್ನು ಪ್ರಥಮ ದರ್ಶನ ಮಾಡಿದಾಗ ಹೀಗೆ ಬರೆಯುತ್ತಾರೆ. (ಈ ಕವಿತೆ ಅವರ 'ಒಲುಮೆ' ಪ್ರೇಮಗೀತೆ ಸಂಕಲನದಲ್ಲಿದೆ)

..............................

*ಅಂದು ತನಕ ಬಂಧಿಸಿದ್ದ*
*ನನ್ನ ಮನದ ಬಾಗಿಲು*
*ಒಂದೇ ಸಲಕೆ ತೆರೆದುಹೋಯ್ತು*
*ಅವಳು ಒಳಗೆ ಹೊಕ್ಕಳು*

*ಎಷ್ಟುಮಂದಿ ಕನ್ನೆಯರನು*
*ಹಿಂದೆ ನೋಡಲಿಲ್ಲವು!*
*ಇಷ್ಟು ಬೇಗನಿಲ್ಲಿ ಮನಸು*
*ಹಿತವನೆಂತು ಪಡೆಯಿತು?*

*ಚೆಲುವೆಯೆಂದು ನುಡಿಯಲಾರೆ;*
*ಚದುರೆಯೇನೋ ತಿಳಿಯದು.*
*ಒಲಿದು ನನ್ನ ಹೃದಯವೆಂತು*
*"ಇವಳೆ ಸಾಕು" ಎಂದಿತು!*

1926ರಲ್ಲಿ ಮದುವೆಯಾದರೂ ಜಯಲಕ್ಷ್ಮಿಯವರು ತೀನಂಶ್ರೀಯವರ ಮನೆಗೆ ಬಂದುದು 1929ರಲ್ಲಿ, ಆಗ ನಮ್ಮ ತಂದೆ ಮಹಾರಾಜ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದರು. 1930ರಲ್ಲಿ ನಮ್ಮ ತಾತ ನಂಜುಂಡಯ್ಯನವರು ನಿಧನ ಹೊಂದಿದರು. 1931ರಲ್ಲಿ ತೀನಂಶ್ರೀಯವರ ಚೊಚ್ಚಲು ಪುತ್ರಿ ವಿಶಾಲಾಕ್ಷಿ ಹುಟ್ಟಿದಳು. 1936ರಲ್ಲಿ ನನ್ನ ಅಕ್ಕ ನಾಗರತ್ನ ಮತ್ತು 1942ರಲ್ಲಿ ನಾನು ನಾಗಭೂಷಣ ಹುಟ್ಟಿದೆವು. ಈ ನಡುವಿನಲ್ಲಿ ಹುಟ್ಟಿದ ಇಬ್ಬರು ಗಂಡುಮಕ್ಕಳು ಶೈಶಾವಸ್ಥೆಯಲ್ಲೇ ನಿಧನಹೊಂದಿದರು. ಆದರೆ 1943ರಲ್ಲಿ ತಮ್ಮ ಪ್ರೀತಿಯ ಸೋದರತ್ತೆ (ಮೈಸೂರು ಅಜ್ಜಿ) ಮತ್ತು ಪ್ರೀತಿಯ ಮಗಳು ವಿಶಾಲಾಕ್ಷಿ (12 ವರ್ಷದವಳು) ಇಬ್ಬರ ವಿಯೋಗವನ್ನು ಅನುಭವಿಸುವ ಅಪಾರ ದುಃಖ ನಮ್ಮ ತಂದೆ ತಾಯಿಗಳದಾಯಿತು. ಮಗಳು ನಿಧನಹೊಂದಿದಾಗ ದುಃಖತಪ್ತರಾಗಿದ್ದ ನಮ್ಮ ತಾಯಿಯವರನ್ನು, ತಮ್ಮ ತಡೆಯಲಾಗದ ದುಃಖದ ನಡುವೆಯೂ, ನಮ್ಮ ತಂದೆಯವರು ಕಿಸಾಗೌತಮಿಯ ಕಥೆ ಹೇಳುವ ಮೂಲಕ ಸಮಾಧಾನಪಡಿಸಿದರಂತೆ.

ಈಗ ತೀನಂಶ್ರೀಯವರ ಇಬ್ಬರು ಮಕ್ಕಳು ನನ್ನ ಅಕ್ಕ ನಾಗರತ್ನ ಮತ್ತು ನಾನು ನಾಗಭೂಷಣ. ನಾಗರತ್ನ ಎಂ.ಎಸ್‌ಸ್ಸಿ (ಸಂಖ್ಯಾಶಾಸ್ತ್ರ) ಪದವೀಧರೆ ಮತ್ತು ಮಾದಾಪುರದ ಲಿಂಗಪ್ಪಯ್ಯ ಮತ್ತು ಗೌರಮ್ಮನವರ ಪುತ್ರ ಎಂ. ಚಂದ್ರಶೇಖರಯ್ಯನವರ ಪತ್ನಿ. ಬಿ.ಇ. ಪದವೀಧರರಾದ ಚಂದ್ರಶೇಖರಯ್ಯ ರಾಂಚಿಯಲ್ಲಿ ಹೆವಿ ಇಂಜನಿಯರಿಂಗ್ ಕಾರ್ಪೋರೇಷನ್‌ನಲ್ಲಿ ಇಂಜನಿಯರ್ ವ್ಯವಸ್ಥಾಪಕರಾಗಿದ್ದು ನಿವೃತ್ತಿಯನಂತರ ಇಬ್ಬರೂ ಬೆಂಗಳೂರಿನಲ್ಲಿ ನೆಲಸಿದ್ದಾರೆ. ನಾಗರತ್ನ ರಾಂಚಿಯಲ್ಲಿ ಪ್ರೌಢಶಾಲೆಯಲ್ಲಿ ಅಧ್ಯಾಪಕಿಯಾಗಿದ್ದರು. ಅವರಿಗೆ ಇಬ್ಬರು ಹೆಣ್ಣು ಮಕ್ಕಳು. ಉಮಾ ಮಾದಾಪುರ ಮತ್ತು ಸುಮಾ ಮಾದಾಪುರ. ಉಮಾ ಮಾದಾಪುರ ಮತ್ತು ಸುಮಾ ಮಾದಾಪುರ ಅವರು ಕ್ರಮವಾಗಿ ಡಾ|| ಅಜಿತ್ ಅಗರ್‌ವಾಲ್ ಮತ್ತು ಡಾ|| ಪ್ರದ್ಯುಮ್ನ ಕುಮಾರ್ ಸ್ವೇನ್ ಅವರನ್ನು ವಿವಾಹವಾಗಿದ್ದಾರೆ. ಇವರೆಲ್ಲರೂ ದೇಶ ಮತ್ತು ವಿದೇಶಗಳಲ್ಲಿ ಉನ್ನತ ಅಧ್ಯಯನ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡಿ ಅಮೆರಿಕ ದೇಶದಲ್ಲಿ ಉನ್ನತ ಹುದ್ದೆಗಳಲ್ಲಿದ್ದಾರೆ. ಉಮಾ ಮತ್ತು ಅಜಿತ್ ಅವರಿಗೆ ಒಬ್ಬಳು ಮಗಳು ಶಿಲ್ಪಾ. ಸುಮಾ ಮತ್ತು ಪ್ರದ್ಯುಮ್ನ ಅವರಿಗೆ ಸುಜಯ್ ಮತ್ತು ಸುಧೀಶ್ ಇಬ್ಬರು ಗಂಡು ಮಕ್ಕಳು.

ನಾನು ನಾಗಭೂಷಣ ಬಿ.ಇ. ಮತ್ತು ಎಂ.ಬಿ.ಎ. ಪದವೀಧರನಾಗಿ 15 ವರ್ಷಗಳ ಕಾಲ ಬೊಂಬಾಯಿ ಮತ್ತು ಬೆಂಗಳೂರಿನಲ್ಲಿ ವಿವಿಧ ಉದ್ಯಮಗಳಲ್ಲಿ

ಉನ್ನತ ಹುದ್ದೆಯಲ್ಲಿದ್ದು ಸುಮಾರು 25 ವರ್ಷಗಳ ಕಾಲ ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನಲ್ಲಿ ಪ್ರಾಧ್ಯಾಪಕನಾಗಿದ್ದು ಈಗ ನಿವೃತ್ತಿಯಾಗಿದ್ದೇನೆ. ನನ್ನ ಪತ್ನಿ ಹೊನ್ನವಳ್ಳಿಯ ಸೂರ್ಯನಾರಾಯಣ ರಾವ್ ಮತ್ತು ಸಾವಿತ್ರಮ್ಮನವರ ಮಗಳು, ಡಾ|| ಶಾರದಾ ನಾಗಭೂಷಣ ಭೌತಶಾಸ್ತ್ರದಲ್ಲಿ ಪಿಎಚ್.ಡಿ ಪದವಿ ಪಡೆದು, ಬೆಂಗಳೂರಿನ ಆಚಾರ್ಯ ಪಾಠಶಾಲೆ ಕಾಲೇಜಿನಲ್ಲಿ ಭೌತಶಾಸ್ತ್ರದ ಪ್ರಾಧ್ಯಾಪಕಿಯಾಗಿದ್ದು ಈಗ ನಿವೃತ್ತರಾಗಿರುತ್ತಾರೆ. ನಮಗೆ ಇಬ್ಬರು ಮಕ್ಕಳು. ಮಗಳು ಗಾಯತ್ರಿ ತೀರ್ಥಪುರ ಮತ್ತು ಮಗ ಡಾ|| ಶ್ರೀಕಂಠ ತೀರ್ಥಪುರ. ಗಾಯತ್ರಿಯ ಪತಿ ಸುಬ್ರಹ್ಮಣ್ಯ ಮಾದಾಪುರ ಮತ್ತು ಶ್ರೀಕಂಠನ ಪತ್ನಿ ಡಾ|| ಕೀರ್ತಿ ನಾರಾಯಣ ಸ್ವಾಮಿ. ಇವರೆಲ್ಲರೂ ದೇಶ ಮತ್ತು ವಿದೇಶಗಳ ಉನ್ನತ ಅಧ್ಯಯನ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡಿ ಸದ್ಯದಲ್ಲಿ ಅಮೆರಿಕ ದೇಶದಲ್ಲಿ ಅಧ್ಯಾಪನೆ, ಸಂಶೋಧನೆ ಮತ್ತು ಇತರ ಉನ್ನತ ಹುದ್ದೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಗಾಯತ್ರಿ ಮತ್ತು ಸುಬ್ರಹ್ಮಣ್ಯ ಅವರ ಮಗಳು ಅನುಷಾ. ಶ್ರೀಕಂಠ ಮತ್ತು ಕೀರ್ತಿ ಅವರ ಮಗ ತೇಜಸ್.

ತೀನಂಶ್ರೀಯವರಿಗೆ ನಾನು ಅಥವಾ ನನ್ನ ಅಕ್ಕ ಯಾರಾದೊಬ್ಬರು ಅವರ ಪ್ರಿಯವಾದ ಸಾಹಿತ್ಯ ಕ್ಷೇತ್ರದಲ್ಲಿ ವ್ಯಾಸಂಗ ಮುಂದುವರಿಸಲೆಂಬ ಅಭಿಲಾಷೆ ಇದ್ದಿರಬಹುದು. ಆದರೆ ಅದನ್ನು ಅವರ ಸ್ವಭಾವದಂತೆ ಎಂದೂ ನಮ್ಮ ಮೇಲೆ ಬಲವಂತ ಮಾಡಲಿಲ್ಲ. ಆದರೆ ಅವರ ಅಣ್ಣ ಸೂರ್ಯನಾರಾಣಪ್ಪನವರ ಮೊಮ್ಮಗ ಡಾ. ತೀ.ನಂ. ಶಂಕರನಾರಾಯಣ ಈ ಕ್ಷೇತ್ರದಲ್ಲಿ ಮುಂದುವರಿದು ಕುವೆಂಪು ವಿಶ್ವವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಈಗ ನಿವೃತ್ತರಾಗಿದ್ದಾರೆ.

ತೀನಂಶ್ರೀಯವರು ತೀರ್ಥಪುರ ಗ್ರಾಮದಿಂದ ಪ್ರಥಮರಾಗಿ ಹೊರಬಂದು ಮೈಸೂರು ಬೆಂಗಳೂರುಗಳಲ್ಲಿ ನೆಲಸಿದ್ದರಿಂದ ಅವರ ಮನೆ ಹಳ್ಳಿಗಳಲ್ಲಿದ್ದ ಬಂಧುಗಳ ಮಕ್ಕಳಿಗೆಲ್ಲ ತಮ್ಮ ವ್ಯಾಸಂಗ ಮುಂದುವರಿಸಲು ಒಂದು ದೊಡ್ಡ ಆಶ್ರಯ ಸ್ಥಾನವಾಯಿತು. ಜ್ಞಾನದಾನವೇ ಬಹು ಪವಿತ್ರಕಾರ್ಯವೆಂದು ಭಾವಿಸಿದ್ದ ತೀನಂಶ್ರೀಯವರಿಗೆ ಇದರ ಪ್ರೋತ್ಸಾಹ ಮತ್ತು ಯಶಸ್ಸಿಗೆ ಯಾವ ತ್ಯಾಗವೂ ಗೌಣವಾಗಿತ್ತು. ಆದ್ದರಿಂದ ಅವರ ಮನೆ ಸದಾಕಾಲಕ್ಕೂ ವ್ಯಾಸಂಗ ಮಾಡುವ ಬಂಧು ಬಳಗದವರಿಂದ ತುಂಬಿರುತ್ತಿತ್ತು. ಇದರೊಡನೆ ವಾರಕ್ಕೆ ಬರುತ್ತಿದ್ದ ಅನೇಕ ವಿದ್ಯಾರ್ಥಿಗಳು ಮತ್ತು ಮನೆಗೆ ಬಂದು ಉಳಿಯುತ್ತಿದ್ದ ಬಂಧುಗಳು, ಮಿತ್ರರುಗಳಾದ ದ.ರಾ. ಬೇಂದ್ರೆ, ರಂ.ಶ್ರೀ. ಮುಗಳಿ, ಎ.ಎನ್. ಮೂರ್ತಿರಾವ್, ಪು.ತಿ.ನರಸಿಂಹಾಚಾರ್, ಡಿ.ಎಲ್. ನರಸಿಂಹಾಚಾರ್, ಗೊರೂರು ಮುಂತಾದ


ಕನ್ನಡ ಸಾಹಿತ್ಯ ದಿಗ್ಗಜರ ಸಹವಾಸ ಮತ್ತು ಸಾಮಿಪ್ಯ ನಮಗೆ ನಮ್ಮ ಮನೆಯಲ್ಲಿ ದೊರಕಿತು. ನಮ್ಮ ಮನೆಯಲ್ಲಿ ಬೆಳೆದ ಅನೇಕ ಬಂಧುಗಳು ಮತ್ತು ವಿದ್ಯಾರ್ಥಿಗಳು ಒಳ್ಳೆಯ ಹುದ್ದೆಗಳಲ್ಲಿದ್ದು ಈಗ ನಿವೃತ್ತರಾಗಿದ್ದಾರೆ. ಇವರೆಲ್ಲರಿಗೂ ನಮ್ಮ ತಂದೆ ಮತ್ತು ತಾಯಿಯವರು ತೋರಿದ ಪ್ರೀತಿ, ವಿಶ್ವಾಸ ಮತ್ತು ಮಾಡಿದ ಸೇವೆ ಒಂದು ಆದರ್ಶವಾಗಿದೆ.

ತೀನಂಶ್ರೀಯವರು ತಮ್ಮ ಎಲ್ಲ ಕೆಲಸಗಳಿಗೂ (ಅವರು ಮನೆಯ ಯಾವ ಕೆಲಸವನ್ನು ಮಾಡುತ್ತಿರಲಿಲ್ಲವೆಂದು ನಮ್ಮ ತಾಯಿಯ ಆಕ್ಷೇಪಣೆ!) ನಗುಮುಖದಿಂದ ಪ್ರೀತಿಯಿಂದ ಪೂರಕವಾದ ಸೇವೆಗೈದವರು ನಮ್ಮ ತಾಯಿ ಜಯಲಕ್ಷ್ಮಮ್ಮನವರು. ತಾವು ಕೀಳರಿಮೆಯನ್ನು ತೊರೆದು ಹೊರಗೆ ಬರುವಂತೆ ಮಾಡಿದವರು ತೀನಂಶ್ರೀ ಮತ್ತು ಅವರ ಪತ್ನಿ ಎಂದು ಪ್ರೊ|| ದೇ. ಜವರೇಗೌಡರು ಹೇಳುತ್ತಾರೆ. ಡಾ|| ಎಂ. ಚಿದಾನಂದಮೂರ್ತಿಯವರಿಗಂತೂ ನಮ್ಮ ತಾಯಿ ಅವರ ತಾಯಿಯವರ ಸಮಾನ. ನಮ್ಮ ತಾಯಿಯವರ ಈ ಪ್ರೀತಿಯ ಮನೋಭಾವದ ವಿಷಯದಲ್ಲಿ ನಮ್ಮ ತಂದೆಯವರಿಗೆ ಅಪಾರವಾದ ಹೆಮ್ಮೆ ಇತ್ತು ಆದ್ದರಿಂದ ನಮ್ಮ ಮನೆ ತೀನಂಶ್ರೀಯವರ ವಿದ್ವತ್ತು ಮತ್ತು ನಮ್ಮ ತಾಯಿಯವರ ಆತಿಥ್ಯ ಸಮ್ಮಿಲನಕ್ಕೆ ಪ್ರಸಿದ್ಧವಾಗಿತ್ತು.

ತೀನಂಶ್ರೀಯವರು ತಮ್ಮ ಸೇವೆಯ ಕಾಲದಲ್ಲಿ ಯಾವ ಭೌತಿಕ ಆಸ್ತಿಯನ್ನು ಮಾಡಲಿಲ್ಲ. ತೀರ್ಥಪುರದಲ್ಲಿದ್ದ ತಮ್ಮ ಆಸ್ತಿಯನ್ನು ತಮ್ಮ ಅಣ್ಣಂದಿರುಗಳಿಗೆ ಅವಶ್ಯಕವೆಂದು ಬಿಟ್ಟುಕೊಟ್ಟಿದ್ದರು. ಸೇವೆಯಿಂದ ನಿವೃತ್ತಿಯಾದನಂತರ ಸ್ನೇಹಿತರುಗಳ ಒತ್ತಾಯ ಮತ್ತು ಸಹಾಯಗಳಿಂದ ವಾಸಕ್ಕೆ ಮೈಸೂರಿನಲ್ಲಿ ಒಂದು ಮನೆಯನ್ನು (ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿನದು) ಕೊಂಡುಕೊಂಡರು. ಆದರೆ ಅವರು ಬಿಟ್ಟಿರುವ ದೊಡ್ಡ ಆಸ್ತಿಯೆಂದರೆ ನಾಡಿನಾದ್ಯಂತ ಇರುವ ಅಪಾರ ಅಭಿಮಾನಿಗಳು ಮತ್ತು ತೀನಂಶ್ರೀಯವರ ವಿದ್ವತ್ತನ್ನು ಮಾದರಿಯಾಗಿಟ್ಟುಕೊಂಡು ಬೆಳಸುತ್ತಿರುವ ಅವರ ವಿದ್ಯಾರ್ಥಿಗಳು. ಮತ್ತು ಇವರೆಲ್ಲರೂ ಇಂದಿಗೂ ನಮ್ಮ ಮೇಲೆ ಧಾರೆಯೆರೆಯುತ್ತಿರುವ ಪ್ರೀತಿ ವಿಶ್ವಾಸಗಳು.




ಪತ್ನಿಯೊಡನೆ



ಪತ್ನಿಯೊಡನೆ ಶ್ರೀ ಸತ್ಯನಾರಾಯಣ ಪೂಜೆಯಲ್ಲಿ



ಪತ್ನಿ, ಮಗ, ಮಗಳು ಮತ್ತು ಅಳಿಯ ಅವರೊಡನೆ



ವ್ಯಾಸಂಗ ನಿರತ

# ಜೀವನ

1910 ಮತ್ತು 20ನೆಯ ದಶಕಗಳಲ್ಲಿ ಬಾಹ್ಯ ಆಧುನಿಕ ಪ್ರಪಂಚದ ಸಂಪರ್ಕವೇ ಇಲ್ಲದೆ ತೀರ್ಥಪುರ ಗ್ರಾಮದಿಂದ ಪ್ರಥಮರಾಗಿ ಹೊರಬಂದು ಕಷ್ಟದ ವಾತಾವರಣದಲ್ಲಿ ಸ್ವಂತ ಪ್ರತಿಭೆ ಮತ್ತು ಪ್ರಯತ್ನಗಳಿಂದ ವಿದ್ಯಾಭ್ಯಾಸಮಾಡಿ ಬಹುದೊಡ್ಡ ವಿದ್ವಾಂಸರಾಗಿ ಬಹುಗೌರವ ಪ್ರೀತಿಗೆ ಪಾತ್ರರಾಗಿ, ಪ್ರಾಧ್ಯಾಪಕರಾಗಿ, ಭಾಷಣಕಾರರಾಗಿ ಭಾರತ ಮತ್ತು ವಿದೇಶಗಳಲ್ಲಿ ಕೀರ್ತಿಯನ್ನು ಪಡೆದವರು ತೀನಂಶ್ರೀ.

ತೀನಂಶ್ರೀಯವರ ಪ್ರಾಥಮಿಕ ವಿದ್ಯಾಭ್ಯಾಸ ತೀರ್ಥಪುರದಲ್ಲಿ ಅಂದಿನಿಂದಲೂ ಇರುವ ಸರ್ಕಾರಿ ಶಾಲೆಯಲ್ಲಿ ನಡೆಯಿತು. ಮಾಧ್ಯಮಿಕ ಶಾಲೆಗೆ ಚಿಕ್ಕನಾಯಕನಹಳ್ಳಿಗೆ ಅವರ ಸೋದರಿಯ (ಸೂರ್ಯನಾರಣಪ್ಪ, ನಂಜುಂಡಯ್ಯನವರ ಅಕ್ಕ) ಮನೆಗೆ ಬಂದಿದ್ದರು. ಅಲ್ಲಿ ವ್ಯಾಸಂಗ ಮಾಡಿದಾಗ ದೊರಕಿದ ಕೆಲವು ಕನ್ನಡ ಪುಸ್ತಕಗಳಿಂದ ಕನ್ನಡ ಸಾಹಿತ್ಯದಲ್ಲಿ ತಮ್ಮ ಒಲವನ್ನು ಬೆಳಸಿಕೊಂಡರು. ಆನಂತರ 1919ರಲ್ಲಿ ಪ್ರೌಢಶಾಲೆಯ ಅಭ್ಯಾಸಕ್ಕೆ ಸರ್ಕಾರಿ ಶಾಲೆಗೆ ಜಿಲ್ಲಾ ಕೇಂದ್ರವಾದ ತುಮಕೂರಿಗೆ ಮೈಸೂರು ಅಜ್ಜಿಯೊಡನೆ ಬಂದರು. 1923ರಲ್ಲಿ ಎಂಟ್ರನ್ಸ್ ಪರೀಕ್ಷೆ ಪಾಸುಮಾಡಿದರು. ಇಂದಿನಂತೆ ಅಂದೂ ಕೂಡ ವಿಜ್ಞಾನ ವ್ಯಾಸಂಗಕ್ಕೆ ಹೆಚ್ಚುಗಾರಿಕೆಯೂ ಮೇಲಾಟವೂ ಇದ್ದರೂ ಮುಖ್ಯವಾಗಿ ಕನ್ನಡ ಮತ್ತು ಸಂಸ್ಕೃತವನ್ನು ಕಲಿಯಬೇಕೆಂಬ ಆಸೆಯಿಂದ ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಕಡೆಗೆ ನಿರ್ಧಾರಪೂರ್ವಕವಾಗಿ ಬೆನ್ನು ತಿರುಗಿಸಿ ಮೈಸೂರಿನ ದಿಕ್ಕನ್ನು ಹಿಡಿದರು. ಮಹಾರಾಜರವರ ಕಾಲೇಜಿನ ಶಾಂತವಾದ ಮಡಿಲನ್ನು ಸೇರಿದರು. ಕಣ್ಣನ್ನು ತೆರೆದು ಬುದ್ಧಿಯನ್ನು ತಿದ್ದಿ ಹೃದಯವನ್ನು ಮಿಡಿದು ಬಾಳಿನ ದಾರಿಗೆ ಬೆಳಕನ್ನು ನೀಡಿದ ಗುರುವರೇಣ್ಯರನ್ನು ಕಂಡು ತಮ್ಮ ಜೀವನವನ್ನು ಸಫಲ ಮತ್ತು ಸಾರ್ಥಕ ಗೊಳಿಸಿಕೊಂಡರು.

ತೀನಂಶ್ರೀಯವರ ಗುರುವರೇಣ್ಯರಲ್ಲಿ ಎಂ. ಹಿರಿಯಣ್ಣ, ಬಿ.ಎಂ. ಶ್ರೀಕಂಠಯ್ಯ ಮತ್ತು ಟಿ.ಎಸ್. ವೆಂಕಣ್ಣಯ್ಯನವರು ಸೇರುತ್ತಾರೆ. ತೀನಂಶ್ರೀ ಇದ್ದಷ್ಟು ಕಾಲವೂ ಅವರ ಅಧ್ಯಯನ ಕೊಠಡಿಯಲ್ಲಿ ಈ ಮೂರು ಮಹನೀಯರ ಛಾಯಾಚಿತ್ರಗಳು ಮರೆಯಾಗಲಿಲ್ಲ. ಇದಲ್ಲದೆ ಎ.ಆರ್. ಕೃಷ್ಣಶಾಸ್ತ್ರಿ, ಎನ್.ಎಸ್. ಸುಬ್ಬರಾವ್, ಎ.ಆರ್. ನಾಡಿಯಾ, ಜೆ.ಸಿ. ರೋಲೋ ಮುಂತಾದವರನ್ನು

ಗುರುಗಳನ್ನಾಗಿ ಪಡೆಯುವ ಭಾಗ್ಯ ತೀನಂಶ್ರೀಯವರದಾಗಿತ್ತು. "ತಸ್ಯ ಮೇ ಸರ್ವಶಿಷ್ಯಸ್ಯ ನೋಪದೇಶದರಿದ್ರತಾ" ("ಅಂತು ಸರ್ವರ ಶಿಷ್ಯನಾದ ನನಗೆ ಉಪದೇಶಭಾಗದಲ್ಲಿ ಇಲ್ಲ ಕೊರತೆ") ಎಂದು ತೀನಂಶ್ರೀ ತೃಪ್ತಿಯಿಂದ ಹೇಳುತ್ತಿದ್ದರು.

1926ರಲ್ಲಿ ತೀನಂಶ್ರೀಯವರು ಬಿ.ಎ. ಪರೀಕ್ಷೆಯಲ್ಲಿ ಆರು ಸುವರ್ಣ ಪದಕಗಳು ಮತ್ತು ಒಂದು ಬಹುಮಾನದೊಂದಿಗೆ ಉತ್ತೀರ್ಣರಾದರು. ಘಟಿಕೋತ್ಸವದಲ್ಲಿ ಇವುಗಳನ್ನು ತೀನಂಶ್ರೀಗೆ ಪ್ರದಾನ ಮಾಡಿದವರು ಬಹು ಗಾಂಭೀರ್ಯಕ್ಕೆ ಪ್ರಸಿದ್ಧರಾಗಿದ್ದ ಅಂದಿನ ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು. ಆದರೆ ಈ ಮಹತ್ಸಾಧನೆಯನ್ನು ಕಂಡು ಅವರು ನಕ್ಕಾಗ ಆ ಸಭೆಗೆ ದಿಗ್ಭ್ರಾಂತಿಯಾಯಿತಂತೆ! ಈ ಘಟಿಕೋತ್ಸವದಲ್ಲಿ ನಮ್ಮ ತಾತ ನಂಜುಂಡಯ್ಯನವರೂ ವೀಕ್ಷಕರಾಗಿದ್ದರು. ಆಗ ಅವರ ಪಕ್ಕದಲ್ಲಿ ಕುಳಿತಿದ್ದವರು "ಈ ಹುಡುಗ ಯಾವ ಪುಣ್ಯವಂತರ ಮಗನೋ" ಎಂದು ಉದ್ಗರಿಸಿದಾಗ, ತಮ್ಮಂತಹ ಹಳ್ಳಿಯವರ ಮಗನೆಂದು ತಿಳಿಸಲು ಇಚ್ಛಿಸದೆ "ಹೌದು, ಹೌದು ಇವನ ತಂದೆ ಎಷ್ಟು ಪುಣ್ಯವಂತನೋ" ಎಂದು ಅವರೂ ದನಿಗೂಡಿಸಿದರಂತೆ! ಬಿ.ಎ. ತರಗತಿಯಲ್ಲಿ ಅವರ ಸಹಪಾಠಿಗಳಾಗಿದ್ದವರು ಮುಂದೆ ಅವರ ಆಪ್ತಮಿತ್ರರುಗಳಾದ ವರಕವಿ ಪು.ತಿ. ನರಸಿಂಹಾಚಾರ್, ಸಂಸ್ಕೃತ ಪ್ರಾಧ್ಯಾಪಕ ನಂ. ಶಿವರಾಮಶಾಸ್ತ್ರಿ ಮತ್ತು 'ಕಾವ್ಯಾಲಯ' ಪ್ರಕಾಶನದ ಕೂಡಲಿ ಚಿದಂಬರಂ ಅವರುಗಳು 1926ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಎಂ.ಎ. ಅಧ್ಯಯನ ಪ್ರಾರಂಭವಾಗಿಲ್ಲದುದರಿಂದ (ಅದು ಪ್ರಾರಂಭವಾಗಿದ್ದು 1927ರಲ್ಲಿ) ತೀನಂಶ್ರೀ ಇಂಗ್ಲಿಷ್ ಎಂ.ಎ. ತರಗತಿಗೆ ಸೇರಿದರು. ಆದರೆ 1928ರಲ್ಲಿ ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆ (ಎಂ.ಸಿ.ಎಸ್)ಗೆ ಕುಳಿತು ಮೂರನೆಯ ಸ್ಥಾನ ಪಡೆದರು. ಆದ್ದರಿಂದ ಶ್ರೀರಂಗಪಟ್ಟಣದಲ್ಲಿ ಪ್ರೊಬೇಶನರಿ ಅಮಲ್ದಾರ್ ಆಗಿ ನೇಮಕವಾದರು. ಆದರೆ ಈ ಕೆಲಸ ಅವರಿಗೆ ಎರಡು ತಿಂಗಳಲ್ಲೇ ಬೇಸರ ತಂದಿತು. ಅದೂ ಅಲ್ಲದೆ ಬತ್ತದ ಜ್ಞಾನದಾಹದ ಸೆಳೆತ, ಬಿ.ಎಂ.ಶ್ರೀ ಮತ್ತು ಟಿ.ಎಸ್.ವಿ., ಅವರ ಆಕರ್ಷಣೆ ಮತ್ತು ಅವರ ಒತ್ತಾಯದ ಸಲಹೆಯಂತೆ ಮೈಸೂರಿನಲ್ಲಿ ಇಂಟರ್‌ಮೀಡಿಯಟ್ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ಸೇರಿದರು. 1929ರಲ್ಲಿ ಇಂಗ್ಲಿಷ್ ಎಂ.ಎ. ಮತ್ತು 1931ರಲ್ಲಿ ಕನ್ನಡ ಎಂ.ಎ. ಪರೀಕ್ಷೆಗಳಲ್ಲಿ ಪ್ರಥಮ ದರ್ಜೆ ಮತ್ತು ಪ್ರಥಮ ಸ್ಥಾನದಲ್ಲಿ ತೇರ್ಗಡೆಯಾಗಿ ಮತ್ತೆ ಮೂರು ಸುವರ್ಣ ಪದಕಗಳನ್ನು ಪಡೆದರು.

1929ರಲ್ಲಿ ಮಹಾರಾಜ ಕಾಲೇಜಿಗೆ ವರ್ಗವಾಗಿ 1943ರವರೆಗೂ ಅಲ್ಲಿ ಕನ್ನಡ ಅಧ್ಯಾಪಕರಾಗಿದ್ದರು. ಅದೊಂದು ಸುವರ್ಣಕಾಲವೆಂದು ಎ.ಎನ್. ಮೂರ್ತಿರಾಯರು ವರ್ಣಿಸುತ್ತಾರೆ. ಇವರು ಇಲ್ಲಿದ್ದಾಗ ಅವರ ಅನೇಕ ಗುರುಗಳು ಇನ್ನೂ ಸೇವೆಯಲ್ಲಿದ್ದು ಅವರ ಪ್ರೋತ್ಸಾಹ, ಮಾರ್ಗದರ್ಶನ ತೀನಂಶ್ರೀ ಅವರಿಗೆ ನಿರಂತರವಾಗಿರುತ್ತಿತ್ತು. ಮತ್ತು ಪ್ರಿಯ ಸ್ನೇಹಿತರುಗಳು ಹಾಗೂ ಸಹೋದ್ಯೋಗಿಗಳಾಗಿದ್ದ ಎ.ಎನ್. ಮೂರ್ತಿರಾವ್. ಸಿ. ಶಿವರಾಮ ಶಾಸ್ತ್ರಿ, ಡಿ.ಎಲ್. ನರಸಿಂಹಾಚಾರ್. ಟಿ.ಎಸ್. ಕೇಶವನ್. ಜಿ. ಹನುಮಂತರಾವ್ ಅವರ ಒಡನಾಟವಾಯಿತು. ಇದೂ ಅಲ್ಲದೆ ಮುಂದೆ ಕನ್ನಡ ಮತ್ತು ಇಂಗ್ಲಿಷ್ ಸಾಹಿತ್ಯ ಮತ್ತು ಇತರ ವಿಷಯಗಳಲ್ಲಿ ಮತ್ತು ಕ್ಷೇತ್ರಗಳಲ್ಲಿ ಹೆಸರು ಮಾಡಿದ ಅನೇಕ ಪ್ರತಿಭಾವಂತರು ತೀನಂಶ್ರೀಯವರಿಗೆ ವಿದ್ಯಾರ್ಥಿಗಳಾಗಿದ್ದು ಇವರ ಪಾಠ ಪ್ರವಚನಗಳಲ್ಲಿ ಅಪಾರ ಆಸಕ್ತಿಯನ್ನು ತೋರಿಸಿದರು. ಈ ಎಲ್ಲವೂ ತೀನಂಶ್ರೀಯವರಿಗೆ ತಮ್ಮ ಕ್ಷೇತ್ರದ ಕೆಲಸಗಳಲ್ಲಿ ತುಂಬಾ ಸಂತೋಷವನ್ನುಂಟು ಮಾಡಿತು. ಅವರಿಂದ ಅಮೂಲ್ಯವಾದ ಸಂಶೋಧನೆಗಳು ನಡೆದು ಕೆಲವು ಮೌಲಿಕವಾದ ಕೃತಿಗಳು ಲೇಖನಗಳು ಮೂಡಿಬರಲು ಸಾಧ್ಯವಾಯಿತು. ಆಗ ಅಲ್ಲಿ ಅಧ್ಯಾಪಕರುಗಳೊಡನೆ ಕಾಮನ್ ರೂಮಿನಲ್ಲಿ ಮತ್ತು ವಿದ್ಯಾರ್ಥಿಗಳೊಡನೆ ಸಭೆಗಳಲ್ಲಿ, ಸಭಿಕರೊಡನೆ ವಿಶ್ವವಿದ್ಯಾನಿಲಯದ ವಿಸ್ತರಣ ಭಾಷಣ ಕಾರ್ಯಕ್ರಮಗಳಲ್ಲಿ ಗಂಭೀರವಾದ ಚರ್ಚೆಗಳು, ಹಾಸ್ಯದ ಚರ್ಚೆಗಳು ಸದಾ ನಡೆಯುತ್ತಿದ್ದವು. ಆಗ ತಾವೆಲ್ಲರೂ ಮನೆಯನ್ನೇ ಮರೆಯುವಂತಾಗಿತ್ತು ಎಂದು ಎ.ಎನ್. ಮೂರ್ತಿರಾಯರು ತಿಳಿಸುತ್ತಾರೆ. ಈ ಅಧ್ಯಾಪಕರುಗಳನ್ನೆಲ್ಲ ಮನೆಗೆ ಹೇಗೆ ಕಳಿಸುವುದು ಎಂದು ಪ್ರಿನ್ಸಿಪಾಲ್ ಜೆ.ಸಿ. ರೋಲೋ ಅವರಿಗೆ ಸದಾ ಚಿಂತೆಯಾಗಿತ್ತಂತೆ. ಈ ಪರಿಸರ ತೀನಂಶ್ರೀಯವರಂತ ಅನೇಕ ಮಹನೀಯರುಗಳ ವ್ಯಕ್ತಿತ್ವವನ್ನು ಜೀವನಪಥವನ್ನು ರೂಪಿಸಲು ಕಾರಣವಾಯಿತು.

1943ರಲ್ಲಿ ಬಡ್ತಿಯ ಮೇಲೆ ತೀನಂಶ್ರೀಯವರು ಬೆಂಗಳೂರಿನ ಇಂಟರ್‌ಮೀಡಿಯಟ್ ಕಾಲೇಜಿಗೆ ಕನ್ನಡದ ಉಪಪ್ರಾಧ್ಯಾಪಕರಾಗಿ ವರ್ಗವಾಗಿ ಬಂದರು. ತಮ್ಮ ಪ್ರೀತಿಯ ಮೈಸೂರನ್ನು ಬಿಟ್ಟು ಬಂದುದು, ಸೋದರತ್ತೆ ಮತ್ತು ಪ್ರೀತಿಯ ಮಗಳ ನಿಧನಗಳು, ಮೊದಲಿಗೆ ಬೆಂಗಳೂರು ಅಷ್ಟು ಸುಖವನ್ನು ತರಲಿಲ್ಲ. ಆದರೆ ಇಲ್ಲಿ ಮತ್ತೆ ಎ.ಎನ್. ಮೂರ್ತಿರಾವ್ ಅಲ್ಲದೆ ಪು.ತಿ. ನರಸಿಂಹಾಚಾರ್. ವಿ. ಸೀತಾರಾಮಯ್ಯ. ಜಿ.ಪಿ. ರಾಜರತ್ನಂ ಎಂ.ಆರ್. ಶ್ರೀನಿವಾಸಮೂರ್ತಿ. ಡಾ. ಎಂ.ವಿ. ಗೋವಿಂದಸ್ವಾಮಿ. ಡಾ|| ಕೆ. ರಾಮರಾವ್.

ಟಿ.ಪಿ. ಕೃಷ್ಣರಾವ್, ಆರ್.ಎಲ್. ನರಸಿಂಹಯ್ಯನವರುಗಳ ನಿಕಟವಾದ ಸ್ನೇಹ ಮತ್ತು ಮಾಸ್ತಿ, ಡಿ.ವಿ.ಜಿ. ಅಂತಹ ಹಿರಿಯರ ಸಾಮೀಪ್ಯ, ಕನ್ನಡ ಸಾಹಿತ್ಯ ಪರಿಷತ್ತಿನ ಸಂಪರ್ಕ ಮತ್ತು ಬೆಂಗಳೂರಿನ ಇತರ ಸಾಂಸ್ಕೃತಿಕ ಮತ್ತು ಸಾಹಿತ್ಯ ಸಂಘಗಳ ಸಂಪರ್ಕ ಮತ್ತೆ ತೀನಂಶ್ರೀಯವರಲ್ಲಿ ಉತ್ಸಾಹ ಮೂಡಿಸಿದವು ಮತ್ತು ತಮ್ಮ ಹೆಚ್ಚಿನ ಚಿಂತನೆಗಳಿಗೆ ಅನುಕೂಲವಾದವು. ಅವರಿದ್ದುದು ಕಲೆ ಮತ್ತು ವಿಜ್ಞಾನದ ಇಂಟರ್‌ಮೀಡಿಯೆಟ್ ಕಾಲೇಜಾಗಿದ್ದುದರಿಂದ, ಇಲ್ಲಿ ಸಹಸ್ರಾರು ವಿದ್ಯಾರ್ಥಿಗಳು ಕನ್ನಡವನ್ನು ದ್ವಿತೀಯ ಭಾಷೆಯಾಗಿ ತೀನಂಶ್ರೀಯವರಿಂದ ಕಲಿತವರು ಎಂದಿಗೂ ತೀನಂಶ್ರೀ ಅವರ ವ್ಯಕ್ತಿತ್ವ ಮತ್ತು ಅವರ ಪಾಠವನ್ನು ಮರೆಯಲಿಲ್ಲ. ಅವರಲ್ಲಿ ಅನೇಕರು ಸರ್ಕಾರಿ ಅಧಿಕಾರಿಗಳಾಗಿ, ಇಂಜಿನಿಯರುಗಳಾಗಿ, ಡಾಕ್ಟರುಗಳಾಗಿ ಮತ್ತು ಇತರ ವೃತ್ತಿಗಳಲ್ಲಿ ಪ್ರಸಿದ್ಧಿ ಪಡೆದಿದ್ದಾರೆ. ನಮ್ಮ ರಾಜ್ಯದ ಪ್ರಸಿದ್ಧ ವೈದ್ಯರೊಬ್ಬರು ನನಗೆ ಹೇಳಿದ್ದರು ''ತೀನಂಶ್ರೀಯವರ 'ಶಾಕುಂತಲ' ಪಾಠದಿಂದ ನಾನು ಎಷ್ಟು ಪ್ರಭಾವಿತನಾಗಿದ್ದೆನೆಂದರೆ, ನಾನು ಡಾಕ್ಟರಾಗುವ ಬದಲು ಕನ್ನಡ ಸಾಹಿತ್ಯ ವ್ಯಾಸಂಗವನ್ನು ಮುಂದುವರಿಸಬೇಕೆಂದು ಯೋಚನೆಮಾಡಿದೆ. ಆದರೆ ಮನೆಯವರ ಒತ್ತಾಯದಿಂದ ಹೀಗಾಗಲಿಲ್ಲ'' ಎಂದು. ಒಂದು ಸಮಾರಂಭದಲ್ಲಿ ಅಕಸ್ಮಾತ್ತಾಗಿ ನನಗೆ ಈಚೆಗೆ ಸಿಕ್ಕಿದ್ದ ಬೆಂಗಳೂರಿನ ಪ್ರಸಿದ್ಧ ಇಂಜಿನಿಯರ್ ಮತ್ತು ಕಟ್ಟಡ ನಿರ್ಮಾಪಕರೊಬ್ಬರು – ಕೋಟ್ಯಾಂತರ ರೂಪಾಯಿ ವ್ಯವಹಾರ ಮಾಡುವವರು – ಸಂದರ್ಭೋಚಿತವಾಗಿ ತೀನಂಶ್ರೀ ವಿಷಯ ಬಂದಾಗ, ತಾವು 50 ವರ್ಷಗಳ ಹಿಂದೆ ಅವರ ಶಿಷ್ಯರಾಗಿದ್ದನ್ನು ನೆನಸಿಕೊಂಡು ಅವರು ಪಾಠಮಾಡಿದ್ದ ಪಂಪನ ಪದ್ಯ ಇಂದಿಗೂ ಮರೆತಿಲ್ಲವೆಂದು ನನಗೆ ಅಲ್ಲಿಯೇ ಹೇಳಿ ತೋರಿಸಿದರು. ವೃತ್ತಿ ಜೀವನದಲ್ಲಿ ತೀನಂಶ್ರೀಯವರು ಗಳಿಸಿದ್ದು ಹಣವನ್ನಲ್ಲ, ಅದಕ್ಕಿಂತ ಹೆಚ್ಚಾಗಿ ಶಿಷ್ಯರನ್ನು.

ತೀನಂಶ್ರೀಯವರ ಪಾಠ ಪ್ರವಚನ ಮತ್ತು ಭಾಷಣಗಳಿಗೆ ಮಾರುಹೋಗದವರೇ ಇಲ್ಲವೆಂದು ಕಾಣುತ್ತದೆ. ತೀನಂಶ್ರೀಯವರು ನಿಧನ ಹೊಂದಿದಾಗ ಅಂದಿನ 'ಪ್ರಜಾವಾಣಿ' ಸಂಪಾದಕರಾಗಿದ್ದ ಟಿ.ಎಸ್. ರಾಮಚಂದ್ರರಾಯರು ಸಂಪಾದಕೀಯದಲ್ಲಿ ಹೀಗೆ ಬರೆದಿದ್ದಾರೆ.

> ''ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಪ್ರಾಧ್ಯಾಪಕರೂ ಕನ್ನಡ ಸಾರಸ್ವತ ಲೋಕಕ್ಕೆ ಆಚಾರ್ಯ ಸಮಾನರೂ ಆಗಿದ್ದ ಪ್ರೊ|| ತೀ.ನಂ. ಶ್ರೀಕಂಠಯ್ಯನವರ ನಿಧನ ಇಡೀ ಕನ್ನಡನಾಡಿಗೆ ಒಂದು ದುರ್ಭರವಾದ ನಷ್ಟ. ತೀನಂಶ್ರೀಯವರು ಎಷ್ಟುದೊಡ್ಡ ವಿದ್ವಾಂಸರೋ ಅಷ್ಟೇ ದೊಡ್ಡ ಶಿಕ್ಷಕರೂ

ಆಗಿದ್ದರು. ಕನ್ನಡ ಇಂಗ್ಲೀಷ್ ಹಾಗೂ ಸಂಸ್ಕೃತಗಳಲ್ಲಿ ನಿಷ್ಕೃಷ್ಟವೂ, ನಿರ್ದುಷ್ಟವೂ ಆದ ಪಾಂಡಿತ್ಯವನ್ನು ಪಡೆದಿದ್ದ ಅವರ ಬೋಧನಾಕ್ರಮ ಅದ್ವಿತೀಯ, ಅನನುಕರಣೀಯ. ಕಾವ್ಯ, ನಾಟಕಾದಿ ವಿಷಯಗಳನ್ನು ಕಿಕ್ಕಿರಿದು ತುಂಬಿದ ತರಗತಿಗಳಿಗೆ ಸ್ವಾರಸ್ಯವಾಗಿ ಬೋಧಿಸುವುದಿರಲಿ, ವ್ಯಾಕರಣ ಮತ್ತು ಛಂದಸ್ ಶಾಸ್ತ್ರಗಳನ್ನು ಕೂಡ ಅಷ್ಟೇ ಸ್ವಾರಸ್ಯವಾಗಿ, ಕೇಳುತ್ತಿರುವವರಿಗೆ ಕಾಲದ ಪರಿವೆಯೇ ಇಲ್ಲದಂತೆ ಗಂಟೆಗಟ್ಟಲೆ ಪಾಠಮಾಡುತ್ತಿದ್ದ ಆಚಾರ್ಯ ಪುರುಷರೊಬ್ಬರು ಇದ್ದರು ಎಂದರೆ ಮುಂದಿನ ಪೀಳಿಗೆ ನಂಬೀತೋ ಇಲ್ಲವೋ? ತೀನಂಶ್ರೀಯವರ ವಿದ್ವತ್ಪೂರ್ಣ ವಾಗ್ವೈಖರಿ ಅಂಥದು''

ತೀನಂಶ್ರೀಯವರಿಗೆ ತರಗತಿಯ ಬೋಧನೆಯಲ್ಲಿ ಎಷ್ಟು ಶ್ರದ್ಧೆಯೆಂದರೆ ಒಮ್ಮೆ ಅವರು ಕಾಲೇಜಿಗೆ ಬಂದಿದ್ದರೂ, ತರಗತಿಗೆ ಸಿದ್ಧತೆ ಮಾಡಿಕೊಂಡಿಲ್ಲವೆಂದು, ತರಗತಿ ತೆಗೆದುಕೊಳ್ಳದೆ ಅಂದು ಕಾಲೇಜಿಗೆ ರಜೆ ಹಾಕಿದ್ದರು. ಅವರು ಮಾಡಬೇಕಾಗಿದ್ದ ಪಾಠ ಅವರಿಗೆ ಕರತಲಾಮಲಕವಾಗಿದ್ದ 'ಭಾರತೀಯ ಕಾವ್ಯಮೀಮಾಂಸೆ'!

1954ರಲ್ಲಿ ಬಿಜಾಪುರದ ವಿಜಯ ಕಾಲೇಜಿನಲ್ಲಿ ಕಿಕ್ಕಿರಿದು ತುಂಬಿದ್ದ ಸುಮಾರು ಎರಡು ಸಹಸ್ರ ವಿದ್ಯಾರ್ಥಿಗಳು ಮತ್ತು ಶ್ರೋತೃಗಳ ಮಧ್ಯೆ ಸೂಜಿ ಬಿದ್ದರೂ ಕೇಳುವಂತಹ ನಿಶ್ಶಬ್ದವಾದ ಸಭೆಯಲ್ಲಿ ತೀನಂಶ್ರೀಯವರು 'ಪಂಪ'ನ ಬಗ್ಗೆ ಮಾತನಾಡುತ್ತಿದ್ದಾಗ, ಒಂದು ನಿಮಿಷ ಧ್ವನಿವರ್ಧಕ ಕೈಕೊಟ್ಟಾಗ 'ಅಯ್ಯೋ' ಎಂದು ಎಲ್ಲರೂ ಒಟ್ಟಾಗೆ ನಿಟ್ಟುಸಿರು ಬಿಟ್ಟಿದ್ದು ನನಗೆ ಇಂದಿಗೂ ನೆನಪಿದೆ.

ತೀನಂಶ್ರೀಯವರ ವಾಗ್ವೈಖರಿಯನ್ನು ಈ ಕೆಳಗಿನ ಒಂದು ಬಾಷಣದ ಪ್ರಾರಂಭದಲ್ಲಿಯೇ ನೋಡಬಹುದು.

''ಮಿತ್ರರೇ,

ಈ ದಿನ ನನ್ನನ್ನು ಕಾಳಿದಾಸನನ್ನು ಕುರಿತು ಮಾತನಾಡುವುದಕ್ಕೆ ಕರಿಸಿದ್ದೀರಿ. ನಾನು ಸಂತೋಷದಿಂದ ಒಪ್ಪಿ ಬಂದಿದ್ದೇನೆ. ಹತ್ತು ಹದಿನೈದು ದಿನಗಳ ಹಿಂದೆ ಕಾರ್ಯಕರ್ತರು ಬಂದು, ನನ್ನನ್ನು ಆಹ್ವಾನಿಸಿ ಹೋದಮೇಲೆ, ಯಾವುದೋ ಕೆಲಸದಲ್ಲಿ ನಿರತನಾಗಿದ್ದೆ. ಮೊನ್ನೆ ಆಹ್ವಾನಪತ್ರಿಕೆ ಕೊಟ್ಟು, ಈ ದಿನದ ಕಾರ್ಯಕ್ರಮವನ್ನು ಜ್ಞಾಪಿಸಿಹೋದರು. ನಿನ್ನೆ ರಾತ್ರಿ ಕುತೂಹಲಕ್ಕಾಗಿ ಕಾಳಿದಾಸನ ಕೆಲವು ಕೃತಿಗಳನ್ನು ಮತ್ತೆ ತಿರುವಿ ಹಾಕಿದೆ. ನನ್ನ ಇದುವರೆಗಿನ ಕಾಲುಶತಮಾನಕ್ಕೂ ಮೀರಿದ ಅಧ್ಯಾಪಕ ಅವಧಿಯಲ್ಲಿ ಕಾಳಿದಾಸ ಕವಿಯ ಒಂದಲ್ಲ ಒಂದು ಕಾವ್ಯವನ್ನು ವಿಶ್ವವಿದ್ಯಾಲಯದ ಒಂದಲ್ಲ ಒಂದು ತರಗತಿಗೆ

ಪಾಠ ಹೇಳಿದ್ದೇನೆ. ಇಂತಹ ಸಾರ್ವಜನಿಕ ಸಮಾರಂಭದಲ್ಲಿ ಕಾಳಿದಾಸನ ಕೃತಿಗಳ ಶ್ರೇಷ್ಠತೆ ಮತ್ತು ಕವಿ ಪ್ರತಿಭೆ ಕುರಿತು ಮಾತನಾಡಿದ್ದೇನೆ. ವಿಚಾರಗೋಷ್ಠಿಗಳಲ್ಲಿ ಅವನನ್ನು ಕುರಿತು ಪ್ರಬಂಧಗಳನ್ನು ಮಂಡಿಸಿದ್ದೇನೆ. ಪಂಡಿತ ಮಂಡಲಿಗಳಲ್ಲಿ ಚರ್ಚಿಸಿದ್ದೇನೆ. ಆಕಾಶವಾಣಿಯಲ್ಲಿ ಪ್ರಸಾರ ಭಾಷಣ ಮಾಡಿದ್ದೇನೆ. ಈ ಎಲ್ಲ ಸಂದರ್ಭಗಳಲ್ಲೂ ಹೊಳೆಯದಿದ್ದ ಒಂದೆರಡು ವಿಷಯಗಳು, ನಿನ್ನೆ ಕವಿಯ ಕೃತಿಯನ್ನು ತಿರುವಿ ಹಾಕಿದಾಗ ಗೋಚರವಾದವು! ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ ಯಾವ ಕೃತಿ ಕಾಲ ಕಳೆದಂತೆ, ವಯಸ್ಸು ಇಳಿದಂತೆ, ಮನಸ್ಸು ತೂಗಿದಂತೆ, ಅರಿವು ತಿಳಿಗೊಂಡಂತೆ, ವಿಮರ್ಶೆ ಮೊನೆಚಾದಂತೆ, ವಿವೇಕ ಪ್ರಜ್ವಲಿಸಿದಂತೆ, ಲೋಕಾನುಭವ ವಿಸ್ತಾರವಾದಂತೆ ಹೊಸ ವಿಚಾರಗಳನ್ನು ತೆರೆಯುತ್ತಾ ಹೋಗುತ್ತದೆಯೋ ಅದು ಶ್ರೇಷ್ಠ ಕೃತಿ; ಅದನ್ನು ರಚಿಸಿದವನು ಶ್ರೇಷ್ಠ ಕವಿ. ಈ ದೃಷ್ಟಿಯಿಂದ ಕಾಳಿದಾಸ ವಿಶ್ವಮನ್ನಣೆಗೆ ಪಾತ್ರನಾದ ಮಹಾಕವಿ!''

ತೀನಂಶ್ರೀಯವರು ಬೆಂಗಳೂರಿನಲ್ಲಿ ಇಂಟರ್‌ಮೀಡಿಯಟ್ ಕಾಲೇಜಿನಲ್ಲಿದ್ದ ಸಮಯದ ನಡುವೆ ಕೆಲವು ತಿಂಗಳ ಕಾಲ ದಾವಣಗೆರೆ ಮತ್ತು ಕೋಲಾರ ಇಂಟರ್‌ಮೀಡಿಯಟ್ ಕಾಲೇಜಿನ ಸೂಪರಿಂಟೆಂಡೆಂಟ್ ಆಗಿ ಮತ್ತು ಮೈಸೂರು ಸಂವಿಧಾನ ಪರಿಷತ್ತಿನಲ್ಲಿ ಭಾಷಾಂತರಕಾರರಾಗಿ ಸೇವೆ ಸಲ್ಲಿಸಿ ಬಂದರು.

1952ರಲ್ಲಿ ತೀನಂಶ್ರೀಯವರು ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಪ್ರಥಮ ಕನ್ನಡ ಪ್ರಾಧ್ಯಾಪಕರಾಗಿ ತೆರಳಿದರು. ಆಗ ನಾವು ಧಾರವಾಡದಲ್ಲಿ ಐದು ವರ್ಷಗಳ ಕಾಲ ಇದ್ದವು. ಅಲ್ಲಿ ದ.ರಾ.ಬೇಂದ್ರೆ, ವಿ.ಕೃ. ಗೋಕಾಕ್, ರಂ.ಶ್ರೀ. ಮುಗಳಿ, ವಿ.ಜಿ. ಕುಲಕರ್ಣಿ ಮತ್ತು ಇನ್ನೂ ಅನೇಕರ ಸಂಪರ್ಕ ನಿಕಟವಾಯಿತು. ಅಲ್ಲಿ ಕನ್ನಡ ಕವಿ ಚೆನ್ನವೀರ ಕಣವಿ ತೀನಂಶ್ರೀಯವರ ಶಿಷ್ಯರಲ್ಲೊಬ್ಬರು. ಧಾರವಾಡದಲ್ಲಿದ್ದಾಗ ತೀನಂಶ್ರೀಯವರಿಗೆ ತಮ್ಮ ಭಾಷಾಶಾಸ್ತ್ರ ಪಾಂಡಿತ್ಯಕ್ಕೆ ಪುಟ ಕೊಡುವಂತೆ ಪುಣೆಯ ಡೆಕ್ಕನ್ ಕಾಲೇಜಿನ ಸಂಪರ್ಕ ಇನ್ನೂ ಹೆಚ್ಚು ನಿಕಟವಾಯಿತು. ಆ ಕಾಲದಲ್ಲಿ ಅದು ಭಾರತದಲ್ಲಿ ಭಾಷಾಶಾಸ್ತ್ರಕ್ಕೆ ಬಹು ಪ್ರಸಿದ್ಧ ಅಧ್ಯಯನ ಕೇಂದ್ರವಾಗಿತ್ತು. ಅಲ್ಲಿ ತೀನಂಶ್ರೀಯವರಿಗೆ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪ್ರಸಿದ್ಧ ಭಾಷಾ ವಿಜ್ಞಾನಿಗಳಾದ ಸುನೀತಿ ಕುಮಾರ್ ಛಟರ್ಜಿ, ಎಸ್.ಎಂ. ಕತ್ರೆ, ಸುಕುಮಾರ ಸೇನ್, ಎಂ.ಬಿ. ಎಮಿನೋ ಹನಿಗ್ಸ್‌ವಾಲ್ಡ್ ಮುಂತಾದವರ ಸಂಪರ್ಕ ಹೆಚ್ಚು ಬೆಳೆಯಿತು. ಈ ಕೇಂದ್ರದ ಮೂಲಕ ಭಾರತದಲ್ಲಿ ಭಾಷಾಶಾಸ್ತ್ರ ವ್ಯಾಸಂಗಕ್ಕೆ ಯೋಜನೆಗಳನ್ನು ತಯಾರಿಸುವ ಮತ್ತು ಅದರ ಅಭಿವೃದ್ಧಿಗೆ ಸಹಕಾರಿಯಾಗುವ ಸಮಿತಿಗಳಲ್ಲಿ ತೀನಂಶ್ರೀಯವರು ಬಹು

ಮುಖ್ಯ ಸದಸ್ಯರಾಗಿ ತಮ್ಮ ಜ್ಞಾನವನ್ನು ವೃದ್ಧಿಗೊಳ್ಳುವ ಒಳ್ಳೆಯ ಅವಕಾಶ ದೊರೆಯಿತು. ಡೆಕ್ಕನ್ ಕಾಲೇಜು ದೇಶದ ವಿವಿಧ ಭಾಗಗಳಲ್ಲಿ ಮತ್ತು ಪೂನೆಯಲ್ಲಿ ನಿರ್ವಹಿಸುತ್ತಿದ್ದ ಬೇಸಿಗೆ ಮತ್ತು ಛಳಿಗಾಲದ ಶಾಲೆಗಳಲ್ಲಿ ತೀನಂಶ್ರೀಯವರು ದ್ರಾವಿಡ ಭಾಷಾವಿಜ್ಞಾನದ ಮುಖ್ಯ ಪ್ರಾಧ್ಯಾಪಕರಾದರು. ಇವುಗಳ ಪರಿಣಾಮವಾಗಿ ಅಮೆರಿಕದ ರಾಕಿಫೆಲ್ಲರ್ ಪ್ರತಿಷ್ಠಾನದ ಗೌರವ ಫೆಲೋಶಿಪ್‌ನ ಮೇಲೆ ತೀನಂಶ್ರೀಯವರು 1955–56ರಲ್ಲಿ 10 ತಿಂಗಳುಕಾಲ ವಿದೇಶ ಪ್ರಯಾಣ ಮಾಡಿದರು. ಅದರಲ್ಲಿ ಮೊದಲು 8 ತಿಂಗಳು ಕಾಲ ಅಮೆರಿಕದಲ್ಲಿ ಮಿಷಿಗನ್, ಪೆನ್ಸಿಲ್ವೇನಿಯಾ ಮತ್ತು ಇತರ ವಿಶ್ವವಿದ್ಯಾನಿಲಯಗಳಲ್ಲಿ ಕಳೆದು ಅಲ್ಲಿಯ ವಿದ್ವಾಂಸರುಗಳೊಡನೆ ಚರ್ಚೆ ನಡೆಸಿದರು. ಆ ಸಮಯದಲ್ಲಿ ರಾಕಿಫೆಲ್ಲರ್ ಪ್ರತಿಷ್ಠಾನದ ಅಧಿಕಾರಿಗಳಾದ ಗಿಲ್‌ಪ್ಯಾಟ್ರಿಕ್ ಅವರು ಮೈಸೂರಿಗೆ ಕೂಡಲಿ ಚಿದಂಬರಂ ಅವರಿಗೆ ಬರೆದ ಪತ್ರದಲ್ಲಿ "As you can imagine Professor Sreekantaiya is making a real hit with all the American scholars who meet him" ಎಂದು ಬರೆದಿದ್ದಾರೆ. ಅನಂತರ ಒಂದು ತಿಂಗಳುಕಾಲ ಇಂಗ್ಲೆಂಡಿನಲ್ಲಿ ಇನ್ನೊಂದು ತಿಂಗಳು ಕಾಲ ಫ್ರಾನ್ಸ್, ಹಾಲೆಂಡ್, ಸ್ವಿಟ್ಸರ್ಲೆಂಡ್ ಮತ್ತು ಇಟಲಿಯಲ್ಲಿ ಪ್ರವಾಸ ಮಾಡಿ ಅಲ್ಲಿಯ ವಿದ್ವಾಂಸರನ್ನು ಭೇಟಿ ಮಾಡಿ ಎಲ್ಲ ಕಡೆ ಪ್ರೇಕ್ಷಣೀಯ ಸ್ಥಳಗಳನ್ನು ಕಂಡು ಬಂದರು. ಆಗ ಅವರು ಅಲ್ಲಿಂದ ಸ್ನೇಹಿತರುಗಳಿಗೆ ಮತ್ತು ಮನೆಯವರಿಗೆ ಬರೆದ ಪತ್ರಗಳು ಸಾಹಿತ್ಯ ದಾಖಲೆಗಳಾಗಿವೆ. ತೀನಂಶ್ರೀಯವರ ಈ ಪ್ರವಾಸದಿಂದಾಗಿ ಭಾಷಾವಿಜ್ಞಾನದಲ್ಲಿ ಮೈಸೂರಿನ ಕೀರ್ತಿ ವಿದೇಶಕ್ಕೂ ಹರಡಿತು. ತೀನಂಶ್ರೀಯವರ ನಿಧನದ ನಂತರ ಡಾ|| ಎಂ. ಚಿದಾನಂದಮೂರ್ತಿಯವರು ಅಮೆರಿಕಕ್ಕೆ ಹೋಗಿದ್ದಾಗ ಪ್ರಸಿದ್ಧ ಭಾಷಾವಿಜ್ಞಾನಿ ಡಾ. ಎಂ.ಬಿ. ಎಮಿನೋ ಅವರನ್ನು ಭೇಟಿಯಾಗಿ ಅವರು ಮತ್ತೆ ಮೈಸೂರಿಗೆ ಬರುವುದಿಲ್ಲವೆ ಎಂದು ಕೇಳಿದಾಗ "Why should I come to Mysore? Is not my friend Sreekantaiya there?" ಎಂದು ತಿಳಿಸಿದರಂತೆ. ತೀನಂಶ್ರೀಯವರು ನಿಧನ ಹೊಂದಿದಾಗ ಅದು ಭಾಷಾವಿಜ್ಞಾನ ಕ್ಷೇತ್ರದಲ್ಲಿ ಇಡೀ ವಿಶ್ವಕ್ಕೆ ಆದ ನಷ್ಟ ಎಂದು ಡಾ|| ಎಸ್.ಎಂ. ಕತ್ರೆಯವರು ಬರೆದಿದ್ದಾರೆ.

ಅನಂತರ 1957ರಲ್ಲಿ ತೀನಂಶ್ರೀಯವರು ತಮ್ಮ ಮಾತೃಶಾಲೆಯಾದ ಮೈಸೂರಿನ ಮಹಾರಾಜ ಕಾಲೇಜಿಗೆ ಕನ್ನಡ ಪ್ರಾಧ್ಯಾಪಕರಾಗಿ ಓಲಗ, ತೋರಣಗಳ ಸ್ವಾಗತದೊಡನೆ ಹಿಂತಿರುಗಿದರು. ಇಲ್ಲಿ ತಮ್ಮ ಆಪ್ತಸ್ನೇಹಿತ

ತಿ.ಎಲ್. ನರಸಿಂಹಾಚಾರ್ ಸಹೋದ್ಯೋಗಿ ಪ್ರಾಧ್ಯಾಪಕರಾಗಿದ್ದರು. ಇವರಿಬ್ಬರೂ ಕನ್ನಡಕ್ಕೆ ಹಿಂದೆ ಟಿ.ಎಸ್. ವೆಂಕಣ್ಣಯ್ಯ ಮತ್ತು ಎ.ಆರ್. ಕೃಷ್ಣಶಾಸ್ತ್ರಿಗಳಿದ್ದಂತೆ ಮತ್ತೆ ಕನ್ನಡದ ಅಶ್ವಿನಿ ದೇವತೆಗಳೆಂದು ಖ್ಯಾತಿ ಪಡೆದಿದ್ದರು. ಆದ್ದರಿಂದ ಅಪಾರ ಉತ್ಸಾಹದಿಂದ ತೀನಂಶ್ರೀಯವರ ಕೆಲಸ ಮುಂದುವರಿಯಿತು. 1960ರಲ್ಲಿ ಮಾನಸಗಂಗೋತ್ರಿಗೆ ಕನ್ನಡ ಸ್ನಾತಕೋತ್ತರ ವಿಭಾಗಕ್ಕೆ ಪ್ರಾಧ್ಯಾಪಕರಾಗಿ ಹೋದರು. ಈ ಸಮಯದಲ್ಲಿ ಸಾಹಿತ್ಯ, ಭಾಷಾಶಾಸ್ತ್ರ ಮತ್ತು ಶಿಕ್ಷಣಗಳ ವಿಷಯದಲ್ಲಿ ತೀನಂಶ್ರೀಯವರು ತಮ್ಮ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದ ವಿದ್ವಾಂಸರುಗಳು ಮತ್ತು ಸಮಿತಿಗಳ ಸಂಪರ್ಕದಿಂದಾಗಿ ಸ್ನಾತಕೋತ್ತರ ಅಧ್ಯಯನದಲ್ಲಿ ಬಹು ಉಪಯುಕ್ತವಾದ ಹೊಸ ದಿಕ್ಸೂಚಿಗಳನ್ನೇ ನೀಡಿದರು. ಪ್ರಥಮ ಬಾರಿಗೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಆಧುನಿಕ ಭಾಷಾವಿಜ್ಞಾನದ ಅಧ್ಯಯನಕ್ಕೆ ತಕ್ಕ ಪರಿಸರ ನಿರ್ಮಾಣ ಮಾಡಿ ಇದರ ಬೆಳವಣಿಗೆಗೆ ಭದ್ರವಾದ ಬುನಾದಿಯನ್ನು ಹಾಕಿದರು. 1962ರಲ್ಲಿ ತಮ್ಮ 55ನೆಯ ವಯಸ್ಸಿನಲ್ಲಿ ತೀನಂಶ್ರೀಯವರು ಸೇವೆಯಿಂದ ನಿವೃತ್ತರಾದರು.

ಅನಂತರವೂ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಯು.ಜಿ.ಸಿ. ಸಂದರ್ಶಕ ಪ್ರಾಧ್ಯಾಪಕರಾಗಿ ತಮ್ಮ ಸಂಶೋಧನೆ ಮತ್ತು ಗೌರವ ಪ್ರವಚನಗಳನ್ನು ಮುಂದುವರಿಸಿದರು. ದೆಹಲಿ ವಿಶ್ವವಿದ್ಯಾನಿಲಯದಿಂದ ಭಾಷಾವಿಜ್ಞಾನದ ಪ್ರಥಮ ಪ್ರಾಧ್ಯಾಪಕರ ಹುದ್ದೆಗೆ ಆಹ್ವಾನ ಬಂದಾಗ, ಕೆಲವು ವೈಯಕ್ತಿಕ ಕಾರಣಗಳಿಂದ ಅದನ್ನು ನಿರಾಕರಿಸಿದರು. ಆದರೆ ಕನ್ನಡ ನಿಘಂಟಿನ ನಿರ್ದೇಶನ ಮತ್ತು ಕನ್ನಡ ಮತ್ತು ಭಾಷಾಶಾಸ್ತ್ರಗಳ ಸಂಶೋಧನೆ ಕಾರ್ಯ ಮುಂದುವರಿಯಿತು.

ನಿವೃತ್ತಿ ಜೀವನದಲ್ಲಿ ಮೈಸೂರಿನಲ್ಲಿ ತಮ್ಮ ಸ್ವಂತ ಮನೆಯಲ್ಲಿ ಪತ್ನಿ, ಮಗ ಮತ್ತು ಆಗಾಗ್ಗೆ ಬರುತ್ತಿದ್ದ ಮಗಳು, ಅಳಿಯ, ಮೊಮ್ಮಗಳು ಮತ್ತು ಪ್ರಿಯ ಸ್ನೇಹಿತರು ಮತ್ತು ಮನೆಗೆ ಬರುತ್ತಿದ್ದ ಬಂಧುಗಳು ಶಿಷ್ಯರುಗಳೊಡನೆ ಕೆಲವು ಕಾಲವನ್ನು ತೀನಂಶ್ರೀಯವರು ಸುಖವಾಗಿ ಕಳೆದರು.

1966ರ ಆಗಸ್ಟ್ ತಿಂಗಳಿನಲ್ಲಿ ದೆಹಲಿಯ ಶಿಕ್ಷಣ ಮಂತ್ರಾಲಯದ ಭಾಷಾವಿಜ್ಞಾನಕ್ಕೆ ಸಂಬಂಧಪಟ್ಟ ತಜ್ಞರ ಸಮಿತಿಯ ಸಭೆಗೆ ತೀನಂಶ್ರೀಯವರಿಗೆ ಕರೆ ಬಂದಿತು. ನಮ್ಮ ತಂದೆಯವರು ವಿದೇಶಕ್ಕೆ ಹೋದಾಗ ನಮ್ಮ ತಾಯಿಯವರನ್ನೂ ಕರೆದುಕೊಂಡು ಹೋಗಲು ಅವಕಾಶವಿತ್ತು, ಆದರೆ ನನಗೆ ಮತ್ತು ನನ್ನ ಅಕ್ಕನಿಗೆ ತೊಂದರೆಯಾಗುತ್ತದೆಂದು ನಮ್ಮ ತಾಯಿಯವರು ಹೋಗಿರಲಿಲ್ಲ. ನಮ್ಮ

ತಾಯಿಯವರಿಗೆ ತಾಜ್‌ಮಹಲ್ ತೋರಿಸಬೇಕೆಂದು ನಮ್ಮ ತಂದೆಯವರಿಗೆ ಮೊದಲಿನಿಂದಲೂ ಪ್ರಬಲವಾದ ಮಹಾದಾಶೆಯಿತ್ತು. ಹಿಂದೆ ಒಂದೆರಡು ಸಾರಿ ಕರೆದುಕೊಂಡು ಹೋಗಬೇಕೆಂದಿದ್ದರೂ ಅದು ಸಾಧ್ಯವಾಗಿರಲಿಲ್ಲ. ತಾಜ್‌ಮಹಲ್ ದಾಂಪತ್ಯ ಜೀವನದ ಅಪಾರ ಪ್ರೇಮದ ಸಂಕೇತವೆಂದು ನಮ್ಮ ತಂದೆಯವರ ಭಾವನೆಯಾಗಿತ್ತು. ಆದ್ದರಿಂದ ಈ ಸಭೆಯ ಕರೆ ಮತ್ತೆ ತೀನಂಶ್ರೀಯವರಲ್ಲಿ ಆಸೆಯನ್ನು ಮರುಕಳಿಸಿತು. ಆಗ ತೀನಂಶ್ರೀಯವರ ಆರೋಗ್ಯ ಅಷ್ಟು ಸರಿ ಇಲ್ಲದುದರಿಂದ ನಮ್ಮ ತಾಯಿಯವರಿಗೆ ಈ ಪ್ರಯಾಣವನ್ನು ಕೈಗೊಳ್ಳಲು ಅಷ್ಟು ಉತ್ಸಾಹವಿರಲಿಲ್ಲ. ತಮ್ಮ ಆರೋಗ್ಯ ಸರಿಯಾಗಿದೆಯೆಂದು ಸಂಬಂಧಪಟ್ಟ ಡಾಕ್ಟರುಗಳನ್ನೆಲ್ಲ ಭೇಟಿ ಮಾಡಿ ತೀನಂಶ್ರೀ ದೃಢಪಡಿಸಿಕೊಂಡರು. ಪ್ರಯಾಣ ಪ್ರಾರಂಭವಾಯಿತು. ದೆಹಲಿಯಲ್ಲಿ ತೀನಂಶ್ರೀಯವರ ಸ್ನೇಹಿತರಾದ ಲೋಕಸಭೆಯ ಉಪಸ್ಪೀಕರ್ ಎಸ್.ವಿ. ಕೃಷ್ಣಮೂರ್ತಿರಾಯರಲ್ಲಿ ಅತಿಥಿಗಳಾಗಿದ್ದರು. ಅಲ್ಲಿ ಪ್ರಿಯ ಸ್ನೇಹಿತರುಗಳಾದ ನಿಟ್ಟೂರು ಶ್ರೀನಿವಾಸರಾವ್, ಬಿ.ಎಸ್. ಕೇಶವನ್, ಎಸ್. ದೇಶಿಕಾಚಾರ್ ಎಲ್ಲರ ಮನೆಯ ಪ್ರೀತಿಯ ಆತಿಥ್ಯಗಳೂ ಆದವು. ದೆಹಲಿಯನ್ನು ತೋರಿಸುತ್ತಾ ಇದ್ದಾಗ ಅಲ್ಲಿ ಗೋರಿಗಳ ದರ್ಶನವೇ ಜಾಸ್ತಿ ಎಂದು ನಮ್ಮ ತಾಯಿ ತೀನಂಶ್ರೀಯವರಿಗೆ ತಿಳಿಸಿದ್ದರಂತೆ! ಅನಂತರ ನಮ್ಮ ತಾಯಿಯವರಿಗೆ ಆಗ್ರಾದಲ್ಲಿ ತಾಜ್‌ಮಹಲ್ ದರ್ಶನ ಮಾಡಿಸಿದ್ದಾಯಿತು. ಇದರಿಂದ ತಮ್ಮ ಬಹುದಿನದ ಒಂದು ಆಸೆ ಕೈಗೂಡಿತೆಂದು ನಮ್ಮ ತಂದೆಯವರಿಗೆ ಸಮಾಧಾನ. ಇವರಿಬ್ಬರೂ ತಾಜ್‌ಮಹಲ್ ಎದುರಿಗೆ ನಿಂತಿದ್ದಾಗ, ಫೋಟೋ ತೆಗೆಯುತ್ತೇನೆಂದು ಬಂದವರಿಗೆ, ಅದು ಬೇಡ, ತಾಜ್‌ಮಹಲ್‌ಗೆ ಅಪಚಾರವಾಗುತ್ತದೆಂದು ನಿರಾಕರಿಸಿದರಂತೆ. ಅಲ್ಲಿದ್ದಾಗಲೇ ನಮ್ಮ ತಾಯಿಯವರೊಡನೆ ಮಾತನಾಡುತ್ತಾ "ನೋಡು ಈಗ ನನಗೆ ನಿಜವಾದ ಸಂಶೋಧನೆ ಎಂದರೆ ಏನು ಎಂದು ಸ್ವಲ್ಪ ಅರ್ಥವಾಗುತ್ತಿದೆ. ಈ ಸಾರಿ ಮೈಸೂರಿಗೆ ಹಿಂತಿರುಗಿದ ನಂತರ ನಾನು ಬಹಳ ದಿನದಿಂದ ಯೋಚನೆ, ಸಿದ್ಧತೆ ಮಾಡುತ್ತಿರುವ 'ಕನ್ನಡ ಭಾಷಾ ಚರಿತ್ರೆ' ಗ್ರಂಥವನ್ನು ಪಟ್ಟಾಗಿ ಕುಳಿತು ಮುಗಿಸಬೇಕು ಎಂದು ತಿಳಿಸಿದರಂತೆ.

ಅನಂತರ ದೆಹಲಿಯಿಂದ ರಾಂಚಿಗೆ ಬಂದು ಒಂದು ವಾರ ಮಗಳು, ಅಳಿಯ ಮತ್ತು ಮೂರು ವರ್ಷದ ಮೊಮ್ಮಗಳು ಉಮಾಳೊಡನೆ ಸಂತೋಷವಾಗಿ ಕಾಲ ಕಳೆದರು. ಈ ಸಂಸಾರ ಒಂದು ವರ್ಷದಿಂದ ಮೈಸೂರು ಕಡೆ ಬಂದಿರಲಿಲ್ಲ. ಆಗ ನಾನು ಕಲ್ಕತ್ತದಲ್ಲಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನಲ್ಲಿ

ಸ್ನಾತಕೋತ್ತರ ಪದವಿಯ ವಿದ್ಯಾರ್ಥಿಯಾಗಿದ್ದೆ, ಆದ್ದರಿಂದ ನನ್ನನ್ನು ನೋಡಲು ಇಬ್ಬರೂ ಸೆಪ್ಟೆಂಬರ್ ತಿಂಗಳ 6 ರಂದು ಕಲ್ಕತ್ತೆಗೆ ಬಂದು ನಮ್ಮ ಹಳೆಯ ಪ್ರಿಯ ಸ್ನೇಹಿತರಾದ ಮತ್ತು ಅಲ್ಲಿ ಆದಾಯ ತೆರಿಗೆ ಅಧಿಕಾರಿಗಳಾಗಿದ್ದ ಜಿ.ಎಸ್. ಸಂಪತ್ ಅವರ ಆಹ್ವಾನದಂತೆ ಅವರ ಮನೆಯಲ್ಲಿದ್ದರು. ನಾನು ಕಲ್ಕತ್ತದಲ್ಲಿದ್ದಾಗ ನಮ್ಮ ತಂದೆತಾಯಿಯವರನ್ನು ಅಲ್ಲಿಗೆ ಕರಿಸಿಕೊಳ್ಳಬೇಕೆಂಬ ಸಂಪತ್ ಅವರ ಅಭಿಲಾಷೆಯಾಗಿತ್ತು, ಅಂದು ನಮ್ಮೆಲ್ಲರೊಡನೆ ಸಂತೋಷದಿಂದ ಕಳೆದರು. ''ನಿಮ್ಮಿಬ್ಬರ 'ಮಧುಚಂದ್ರ' ಹೇಗಿತ್ತು?'' ಎಂದು ಕೇಳಿದಾಗ, ''ಚೆನ್ನಾಗಿತ್ತು ಆದರೆ 40 ವರ್ಷ ತಡವಾಯಿತು!'' ಎಂದು ತಿಳಿಸಿದರು. ಸೆಪ್ಟೆಂಬರ್ 7ನೆಯ ತಾರೀಖು ಬೆಳಗ್ಗೆ 8.15ಕ್ಕೆ ನಮ್ಮೊಡನೆ ಮಾತನಾಡುತ್ತಿದ್ದಾಗ ತೀನಂಶ್ರೀಯವರು ತೀವ್ರ ಹೃದಯಾಘಾತಕ್ಕೊಳಗಾಗಿ ಕೂಡಲೆ ಇಹಲೋಕವನ್ನು ತ್ಯಜಿಸಿದರು. ನಾವು ತೀನಂಶ್ರೀಯವರಿಲ್ಲದೆ ಸೆಪ್ಟೆಂಬರ್ 10 ರಂದು (ಅವರು ಹಿಂತಿರುಗಬೇಕಾಗಿದ್ದ ದಿನವೇ) ಮೈಸೂರಿಗೆ ಹಿಂತಿರುಗಿದೆವು. ಅನಂತರ ಸುಮಾರು ಎರಡು ತಿಂಗಳುಗಳ ಕಾಲ ವೃತ್ತಪತ್ರಿಕೆಗಳು, ನಿಯತಕಾಲಿಕಗಳು ಎಲ್ಲದರಲ್ಲೂ ತೀನಂಶ್ರೀ ಬಗ್ಗೆ ನಾಡಿನಾದ್ಯಂತ ಮತ್ತು ದೇಶದ ವಿವಿಧೆಡೆಗಳಲ್ಲಿ ನಡೆದ ಸಂತಾಪಸೂಚಕ ಸಭೆಗಳ ವಿವರ, ಅವರ ಬಗ್ಗೆ ಬರೆದ ಲೇಖನಗಳಿಂದ ತುಂಬಿದ್ದವು. ತೀನಂಶ್ರೀಯವರ ಪ್ರಿಯ ಶಿಷ್ಯರಾಗಿದ್ದ ಪ್ರೊ|| ದೇ. ಜವರೇಗೌಡರು ತಮ್ಮ ಗುರುಗಳಿಗೆ ಶ್ರದ್ಧಾಂಜಲಿ ರೂಪದಲ್ಲಿ ''ತೀನಂಶ್ರೀ: ವ್ಯಕ್ತಿತ್ವ ಮತ್ತು ಜೀವನ'' ಎಂಬ ಪುಸ್ತಕವನ್ನೇ ಬರೆದು ಪ್ರಕಟಿಸಿದರು. ತೀನಂಶ್ರೀಯವರ ಅಂತಿಮದರ್ಶನ ಕನ್ನಡನಾಡಿಗೆ ದೊರೆಯಲಿಲ್ಲವೆಂದು ಈಗಲೂ ಕೊರಗುವ ಅನೇಕರು ಇದ್ದಾರೆ.


> ''ಕೀರ್ತಿ ಪದವಿಗಳಿಂದ ದೂರ ಇರಲು ಬಯಸಿದ ತೀನಂಶ್ರೀ ಅವರ ಬಳಿ ಇವು ಸುಳಿಯುವ ಮೊದಲೇ ವಿಧಿ ಅವರನ್ನು ಆಹ್ವಾನಿಸಿತು. ಅದೂ ಎಲ್ಲಿ? ಅಂತಿಮ ಯಾತ್ರೆಯ ವೈಭವವೂ ದಕ್ಕಬಾರದಂತಹ ದೂರದ ಕಲಕತ್ತೆಯಲ್ಲಿ! ಕೀರ್ತಿ, ಪದವಿಗಳ ಆಶೆಯಿಂದ ಮುಕ್ತರಾದ ಹಿರಿಯ ಜೀವ ಇಡೀ ಆಯುಷ್ಯದ ನಿಸ್ವಾರ್ಥ ಸಾಹಿತ್ಯ ಸೇವೆಯ ಚಿತ್ರವನ್ನು ವಿಧಿ ಪೂರ್ಣಗೊಳಿಸೀತೇನೋ ಅನ್ನಿಸುತ್ತೆ''

ಎಂದು ಆ ಸಮಯದಲ್ಲಿ ಸಿ.ಎಚ್. ಪ್ರಹ್ಲಾದರಾವ್ ಬರೆದಿದ್ದಾರೆ.

ತೀನಂಶ್ರೀಯವರು ಬಹು ಸತ್ಯವಂತರಾದ ವ್ಯಕ್ತಿ, ತಮ್ಮ ಜೀವನದಲ್ಲಿ ಒಂದು ಪೈಸೆ ಕೂಡ ಆದಾಯ ತೆರಿಗೆಯನ್ನು ಕಮ್ಮಿ ಕೊಟ್ಟವರಲ್ಲ ಮತ್ತು ಬಾಕಿ ಉಳಿಸಿಕೊಂಡವರಲ್ಲ. ಆದ್ದರಿಂದ ತೀನಂಶ್ರೀಯವರಿಗೆ ತೋರಿಸುವ

ಗೌರವಪೂರ್ವಕ ಶ್ರದ್ಧಾಂಜಲಿಯಂತೆ ಕಲ್ಕತ್ತೆಯಲ್ಲಿ ಸೆಪ್ಟೆಂಬರ್ 7ರ ಮಧ್ಯಾಹ್ನವೇ ಹೂಗ್ಲಿ ನದಿಯ ದಡದಲ್ಲಿ ನಡೆದ ಅವರ ಅಂತ್ಯಕ್ರಿಯೆಯಲ್ಲಿ ಸಂಪತ್ ಅವರ ಸ್ನೇಹಿತರುಗಳಾದ ಆದಾಯ ತೆರಿಗೆ ಅಧಿಕಾರಿಗಳ ಒಂದು ದೊಡ್ಡ ತಂಡವೇ ನೆರೆದಿತ್ತು

ತೀನಂಶ್ರೀ ಅವರು ನಿಧನ ಹೊಂದಿದುದು ಶ್ರಾವಣ ಬಹುಳ ಸಪ್ತಮಿ ದಿನ. ಅಂದು ಸಂಜೆ ಗೋಕುಲಾಷ್ಟಮಿ. ಈ ವಿಷಯ ತಿಳಿದಾಗ ಅವರ ಆಪ್ತಮಿತ್ರ ಮತ್ತು ಶ್ರೀಕೃಷ್ಣನ ಮಹಾಭಕ್ತ ಪುತಿನ ಅವರು ಹೇಗಾದರೂ ಮಾಡಿ ಕಲ್ಕತ್ತೆಗೆ ಬಂದು ತಮ್ಮ ಪ್ರಿಯ ಮಿತ್ರನ ಕೊನೆಯ ದರ್ಶನ ಪಡೆಯಬೇಕೆಂದು ಪ್ರಯತ್ನಿಸಿದರು. ಆಗ ಯಾರೋ ಒಬ್ಬರು ಅವರಿಗೆ ಕೃಷ್ಣನ ಪೂಜೆಯ ನೆನಪು ಮಾಡಿದಾಗ ''ನನ್ನ ಪ್ರಿಯ ಮಿತ್ರನನ್ನೇ ಕಸಿದುಕೊಂಡ ಕೃಷ್ಣನ ಪೂಜೆಯನ್ನು ನಾನು ಇನ್ನೇಕೆ ಮಾಡಬೇಕು'' ಎಂದು ದುಃಖಿಸಿದರಂತೆ.



ಅಮೇರಿಕೆಯಲ್ಲಿ



ಭಾಷಣಕಾರರಾಗಿ

# ವ್ಯಕ್ತಿತ್ವ

ನಾಡಿನಾದ್ಯಂತ ತೀ.ನಂ.ಶ್ರೀ. ಎಂದೇ ಖ್ಯಾತರಾಗಿರುವ ಪ್ರೊ. ತೀ.ನಂ. ಶ್ರೀಕಂಠಯ್ಯನವರದು ದೊಡ್ಡ ವ್ಯಕ್ತಿತ್ವ. ಅನನ್ಯ ಪ್ರತಿಭೆ. ಇಂದಿಗೆ ಸುಮಾರು 80 ವರ್ಷಗಳ ಹಿಂದೆ ದೊರಕಿದ್ದ 'ತಾಲ್ಲೂಕಿನ ದೊರೆ' ಅಮಲ್ದಾರ ಹುದ್ದೆಯನ್ನು ನಿರಾಕರಿಸಿ, ಸ್ವಇಚ್ಛೆಯಿಂದ ಆಯ್ಕೆ ಮಾಡಿದ ಅಧ್ಯಾಪನ ಹುದ್ದೆಯಲ್ಲಿ ಉತ್ತುಂಗದ ಸಾಧನೆಗಳನ್ನು ಮಾಡಿದವರು ತೀನಂಶ್ರೀ. ''ನೀವು ಅಮಲ್ದಾರ್ ಹುದ್ದೆಯಲ್ಲೇ ಮುಂದುವರಿದಿದ್ದರೆ ರಾಜ್ಯದ ಮುಖ್ಯ ಕಾರ್ಯದರ್ಶಿಯಾಗಿ ನಿವೃತ್ತಿಯಾಗುತ್ತಿದ್ದಿರಲ್ಲವೆ?'' ಎಂದು ಯಾರಾದರೂ ಪ್ರಶ್ನಿಸಿದರೆ, ''ಆಗುತ್ತಿದ್ದೆ ಎಂದು ಕಾಣುತ್ತದೆ. ಆದರೆ ಇಷ್ಟು ಸುಖವಾಗಿರುತ್ತಿದ್ದೆನೇ ಹೇಳಿ'' ಎಂದು ಕೇಳುತ್ತಿದ್ದರು. ಆ ಕಾಲಕ್ಕೆ ಅಮಲ್ದಾರ್ ಹುದ್ದೆಯನ್ನು ತ್ಯಜಿಸಿದ್ದಕ್ಕೆ ನಮ್ಮ ತಾತನವರಿಗೆ ತಮ್ಮ ಮಗನ ಮೇಲೆ ಅಪಾರವಾದ ಕೋಪ ಬಂದಿತ್ತಂತೆ!

ಅದು ಏನೇ ಇರಲಿ, ಆಡಳಿತ ಕ್ಷೇತ್ರಕ್ಕೆ ಆದ ನಷ್ಟ ಕನ್ನಡ ಸಾಹಿತ್ಯ, ಭಾಷಾವಿಜ್ಞಾನ ಮತ್ತು ಇತರ ವಿದ್ವತ್ ಮತ್ತು ಸಂಶೋಧನೆ ಕ್ಷೇತ್ರಗಳಿಗೆ ಅಪಾರವಾದ ಲಾಭವೆಂದು ಅವರ ಶಿಷ್ಯರು, ವಿದ್ವಾಂಸರು ಮತ್ತು ಅಭಿಮಾನಿಗಳು ಹಿಗ್ಗಿ ಸಂತೋಷಪಡುತ್ತಾರೆ. ತೀನಂಶ್ರೀಯವರು ತಾವು ಕೈಯಾಡಿಸಿದ ಸೃಜನ, ಭಾಷೆ, ಶಾಸ್ತ್ರ, ಸಂಪಾದನೆ ಮತ್ತು ವಿಮರ್ಶೆ ಕ್ಷೇತ್ರಗಳಲ್ಲಿ ಸದಾ ಕಾಲಕ್ಕೂ ಭದ್ರವಾಗಿ ನಿಲ್ಲುವ ಮರೆಯಲಾಗದ ಅಪೂರ್ವವಾದ ಮೌಲಿಕ ಕೊಡುಗೆಗಳನ್ನು ನೀಡಿದ್ದಾರೆ ಮತ್ತು ತಮ್ಮದೇ ಆದ ಛಾಪನ್ನು ಒತ್ತಿದ್ದಾರೆ.

ತೀನಂಶ್ರೀಯವರದು ಬಹುಮುಖ ವ್ಯಕ್ತಿತ್ವ. ವಿದ್ಯಾರ್ಥಿಯಾಗಿ ಗುರುವಾಗಿ, ವಿದ್ವಾಂಸನಾಗಿ, ಸಂಶೋಧಕನಾಗಿ, ಪತಿಯಾಗಿ, ತಂದೆಯಾಗಿ, ಬಂಧುವಾಗಿ, ಭಾಷಣಕಾರನಾಗಿ, ಸಹೃದಯನಾಗಿ, ಹೃದಯವಂತನಾಗಿ ತಮ್ಮ ಸುಮಧುರವಾದ ವ್ಯಕ್ತಿತ್ವವನ್ನು ತೋರಿಸಿದ್ದಾರೆ. ಅವರ ಜೀವನ ತೆರೆದ ಪುಸ್ತಕ. ಅಲ್ಲಿ ಪ್ರಶ್ನೆಪತ್ರಿಕೆಗಳು ಮುಂತಾದ ಅಧಿಕೃತವಾಗಿ ಅವಶ್ಯವಾದ ಗೌಪ್ಯ ವಿಷಯಗಳನ್ನು ಬಿಟ್ಟರೆ ಉಳಿದೆಲ್ಲವೂ ಎಲ್ಲರಿಗೂ ಗೊತ್ತಿರುವ ವಿಷಯ. ತರಗತಿಗಳಲ್ಲಿ ಪಾಠ ಮಾಡುವಾಗ, ತಮಗೆ ಗೊತ್ತಿಲ್ಲದ ಯಾವುದಾದರೂ ಸಮಸ್ಯೆ ಬಂದರೆ ಅವರು ಹೇಳುತ್ತಿದ್ದುದು ''ಈ ವಿಷಯ ನನಗೆ ಇನ್ನೂ ಪೂರ್ತಿ ಸ್ಪಷ್ಟವಾಗಿಲ್ಲ. ನಾನೂ ಯೋಚನೆ ಮಾಡುತ್ತೇನೆ. ನೀವೂ ಯೋಚನೆ ಮಾಡಿ ಗೊತ್ತಾದರೆ ನನಗೆ ತಿಳಿಸಿ''. ಯಾವುದಾದರೂ ವಿದ್ಯಾರ್ಥಿ ಅದಕ್ಕೆ ಸೂಕ್ತವಾದ ಸ್ಪಷ್ಟನೆಯನ್ನು ಸೂಚಿಸಿದರೆ

ಅದನ್ನು ಮನಸಾರೆ ಮೆಚ್ಚಿ ತಮ್ಮ ಲೇಖನದಲ್ಲಿ ಆ ವಿಷಯವನ್ನು ಉಲ್ಲೇಖಿಸಿದರೆ, ಆ ವಿದ್ಯಾರ್ಥಿಗೆ ಅಲ್ಲಿ ತಮ್ಮ ಕೃತಜ್ಞತೆಯನ್ನು ತಪ್ಪದೆ ಸಲ್ಲಿಸುತ್ತಿದ್ದರು.

ತೀನಂಶ್ರೀಯವರ ವಿದ್ವತ್ತು ಮತ್ತು ವ್ಯಕ್ತಿತ್ವದ ಮೇಲೆ ನೂರಾರು ಲೇಖನಗಳು, ಕವಿತೆಗಳು ಮತ್ತು ಕೆಲವು ಪುಸ್ತಕಗಳು ಪ್ರಕಟವಾಗಿವೆ. ಅದರಲ್ಲಿ ಕೆಲವನ್ನು ಇಲ್ಲಿ ಉದಾಹರಿಸಲಾಗಿದೆ.

ರಾಷ್ಟ್ರಕವಿ ಡಾ|| ಜಿ.ಎಸ್. ಶಿವರುದ್ರಪ್ಪನವರು ತೀನಂಶ್ರೀಯವರ ನೇರವಾದ ಶಿಷ್ಯರಾಗಿರಲಿಲ್ಲ. ಆದರೆ ಜಿಎಸ್ಎಸ್ ಅಧ್ಯಾಪಕರಾದ ಮೇಲೆ ಎರಡು ವರ್ಷಗಳ ಕಾಲ ಎಂ.ಎ. ತರಗತಿಯ ವಿದ್ಯಾರ್ಥಿಗಳೊಡನೆ, ''ಭಾರತೀಯ ಕಾವ್ಯಮೀಮಾಂಸೆ'' ತರಗತಿಯಲ್ಲಿ ಕುಳಿತು, ''ತೀನಂಶ್ರೀಯವರ ಶಿಷ್ಯತ್ವವನ್ನು ಗಿಟ್ಟಿಸಿಕೊಂಡೆ'' ಎಂದು ಹೆಮ್ಮೆಯಿಂದ ತಿಳಿಸುತ್ತಾರೆ! ಇದು ತೀನಂಶ್ರೀಯವರ ಬಗ್ಗೆ ಅವರು ಬರೆದ ಕವಿತೆ.

*ನೋಡಿದರೆ, ನೋಡಿದಷ್ಟೂ ಇಷ್ಟ*
*ಮಾತೂ ಮಿತ, ಖಚಿತ, ನಿಷ್ಕೃಷ್ಟ*

*ಅಚ್ಚುಕಟ್ಟಿನ, ಸ್ವಚ್ಛತೆಯ ಸಂಕೇತ*
*ಮೂಡಿದೊಂದೊಂದು ಕೃತಿಯ ಕೃತಾರ್ಥ*

*ಪರಿಪೂರ್ಣತೆಯ ಅತೃಪ್ತ ಅನ್ವೇಷಕ*
*ಪ್ರತಿಭೆ ಪಾಂಡಿತ್ಯಗಳ ಹದವಾದ ಪಾಕ*

*ಸಂಶಯದ ಕಡಲಲ್ಲಿ ಗೋಪುರದ ದೀಪ*
*ಸದ್ವಿರದ ಸಾಧನೆಗೆ ಜೀವಂತ ರೂಪ*

*ಇನ್ನಾರು ಬೆಳೆದಾರು ನಿಮ್ಮ ಎತ್ತರಕೆ?*
*ಕನ್ನಡದ ಕೊರಳಲ್ಲಿ ಶ್ರೀಕಂಠಿಕೆ*

ವರಕವಿ ದ.ರಾ. ಬೇಂದ್ರೆಯವರು ತಮ್ಮ ಪ್ರಿಯ ಸ್ನೇಹಿತ ತೀನಂಶ್ರೀಯ ಬಗ್ಗೆ ಬರೆದ ಒಂದು ಪದ್ಯ ಹೀಗಿವೆ.

*ಶ್ರೀಕಂಠದಾ ಗಂಟೆ ಪೂಜೆ ನಡೆಸಿರುವಾಗ*
*ಆ ನಿನಾದವು ಹಬ್ಬಿ, ಆ ಭಾಗ ಈ ಭಾಗ*
*ಒಂದೆಂಬ ತೆರದಲಿ ತಾನೆ ಕಂಪನಗೊಂಡು*
*ರೂಪಿಸಿತು ಝುಗ್ಗನೆ ತನ್ನತಾನೇ ಕಂಡು*

[illegible]
ಯಾವ [illegible] ಬಯಲೆಲ್ಲ [illegible]
[illegible]
ಆ ಜಾಣ, ಆ ಛಾನ, [illegible]

[illegible]
[illegible]
[illegible]
ಕನ್ನಡದ [illegible]

ಆ ಚೆಲುವ ಹೂ- ನಗೆಯು [illegible]
ನೀಲ [illegible]

ಕನ್ನಡದ ಪ್ರಸಿದ್ಧ ಸಾಹಿತಿ ಪ್ರೊ|| ಎಲ್.ಎಸ್. ಶೇಷಗಿರಿರಾಯರು ತೀನಂಶ್ರೀಯವರ ವಿದ್ಯಾರ್ಥಿಯಲ್ಲದಿದ್ದರೂ ಸದಾಕಾಲಕ್ಕೂ ತೀನಂಶ್ರೀಯವರನ್ನು ತಮ್ಮ ಗುರುಗಳೆಂದೇ ಭಾವಿಸಿದ್ದಾರೆ. ಅವರು ಬರೆಯುತ್ತಾರೆ: "Not buildings or libraries or laboratories make a university; the teachers make university what it is. Professor T.N. Sreekantaiya was a teacher of whom Oxford, Cambridge or Harvard would have been proud.... You can't help but use superlatives while talking about TNS.... He was a genius uncommon".

ತೀನಂಶ್ರೀಯವರ ಮಾರ್ಗದರ್ಶನದಲ್ಲಿ ಪಿಎಚ್.ಡಿ. ಪದವಿಗೆ ನೋಂದಾಯಿಸಿದ ಅನೇಕ ವಿದ್ಯಾರ್ಥಿಗಳಲ್ಲಿ ಸಂಶೋಧನೆಯ ಕೆಲಸವನ್ನು ಪೂರ್ತಿ ಮುಗಿಸಿ ಪಿಎಚ್.ಡಿ. ಪದವಿಗೆ ನಿಬಂಧವನ್ನು ಅರ್ಪಿಸಿದವರು ಇಬ್ಬರು ಮಾತ್ರ. ಒಬ್ಬರು ಇಂಗ್ಲಿಷ್ ಪ್ರಾಧ್ಯಾಪಕ ಎನ್. ಅನಂತನಾರಾಯಣ ಅವರು. ಅವರ ''ಹೊಸಗನ್ನಡ ಕವಿತೆಯ ಮೇಲೆ ಇಂಗ್ಲಿಷ್ ಕಾವ್ಯದ ಪ್ರಭಾವ'' ನಿಬಂಧಕ್ಕೆ ಅದರ ಪರೀಕ್ಷಕರೊಬ್ಬರ ವೈಯಕ್ತಿಕ ಕಾರಣಗಳಿಂದ ಪಿಎಚ್.ಡಿ ಪದವಿ ಪ್ರದಾನವಾಗಲಿಲ್ಲ. ಇನ್ನೊಬ್ಬರು ಕನ್ನಡದ ಸುಪ್ರಸಿದ್ಧ ವಿದ್ವಾಂಸ ಎಂ. ಚಿದಾನಂದಮೂರ್ತಿ ಅವರು. ಇವರು ಬರೆದ ''ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ'' ನಿಬಂಧಕ್ಕೆ ಪಿಎಚ್.ಡಿ. ಪದವಿ ಪ್ರದಾನವಾಗಿ ಅವರಿಗೆ, ತೀನಂಶ್ರೀಯವರ ''ಸಂಶೋಧಕ ಪುತ್ರ'' ಎಂದು ನಾಮಕರಣವಾಯಿತು ಮತ್ತು ''ನಾನು ಬಂಜೆಯಾಗಲಿಲ್ಲ''

ಎಂದು ತೀನಂಶ್ರೀಯವರು ಉದ್ಗಾರ ಮಾಡುವಂತಾಯಿತು. (ಚಿದಾನಂದಮೂರ್ತಿಯವರು ಇಂದಿಗೂ ನಮ್ಮ ಸಂಸಾರದ ಹಿರಿಯಣ್ಣನ ಸ್ಥಾನದಲ್ಲಿರುವುದು ನಮಗೆ ಹೆಮ್ಮೆಯ ವಿಷಯ). ಈ ಎರಡು ನಿಬಂಧಗಳು ಮುದ್ರಿತವಾಗಿ ಒಂದೊಂದು ಪುಸ್ತಕವೂ ಐದಾರು ಮುದ್ರಣಗಳನ್ನು ಕಂಡು, ಮುಂದಿನ ಅನೇಕ ಸಂಶೋಧನ ನಿಬಂಧಗಳಿಗೆ ಮಾದರಿಯಾಗಿದ್ದು ನಲ್ವತ್ತು ವರ್ಷಗಳ ನಂತರ ಇಂದಿಗೂ ಸದಾ ಬೇಡಿಕೆಯಲ್ಲಿರುವುದರಿಂದ ಇವುಗಳ ಮೌಲ್ಯವನ್ನು ಬೇರೆ ವಿವರಿಸಬೇಕಾಗಿಲ್ಲ. ಎಂ. ಚಿದಾನಂದಮೂರ್ತಿಯವರು ತಿಳಿಸುವಂತೆ ''ತೀನಂಶ್ರೀಯವರು 20ನೆಯ ಶತಮಾನದಲ್ಲಿ ನಮ್ಮ ಭಾರತ ದೇಶ ಕಂಡ ಶ್ರೇಷ್ಠ ಸಂಶೋಧಕ ಮತ್ತು ಪ್ರಾಧ್ಯಾಪಕರಲ್ಲೊಬ್ಬರು''

ಮಹಾರಾಜ ಕಾಲೇಜಿನಲ್ಲಿ ತೀನಂಶ್ರೀ ಅಧ್ಯಾಪಕರಾಗಿದ್ದಾಗ ಅಂದಿನ ಯುವರಾಜರಾಗಿದ್ದ ಶ್ರೀ ಜಯಚಾಮರಾಜ ಒಡೆಯರ್ ಅವರು ಅವರ ಶಿಷ್ಯರಾಗಿದ್ದರು ಮತ್ತು ತೀನಂಶ್ರೀ ಅವರಿಗೆ ಮೂರು ವರ್ಷಗಳ ಕಾಲ ಖಾಸಗಿ ಟ್ಯೂಟರ್ ಕೂಡ ಆಗಿದ್ದರು. ಈ ಮಹಾರಾಜರಿಗೆ ತೀನಂಶ್ರೀಯವರ ಮೇಲೆ ಅಪಾರ ಗೌರವವಿತ್ತು. ತೀನಂಶ್ರೀ ನಿಧನ ಹೊಂದಿದ ದಿನವೇ ನಮ್ಮ ತಾಯಿಯವರಿಗೆ ತಂತಿ ಸಂದೇಶ ಕಳಿಸಿ "Deeply grieved to learn about the sad deminsie of Prof. T.N. Sreekantaiya who was my personal tutor during college days. Pray God to give you and your family and strength to bear this irrepairable loss." ಎಂದು ಸ್ಮರಿಸಿದ್ದಾರೆ.

ತೀನಂಶ್ರೀಯವರ ಪ್ರಭಾವ ಯಾವ ಕ್ಷೇತ್ರದಲ್ಲಿ ಮತ್ತು ಯಾವ ವ್ಯಕ್ತಿಗಳ ಮೇಲಾಗಿತ್ತು ಎನ್ನುವುದನ್ನು ಹೇಳುವುದು ಸುಲಭವಲ್ಲ. ಅಷ್ಟೊಂದು ಜನ ಪ್ರಭಾವಿತರಾಗಿದ್ದಾರೆ. ನನ್ನ ಅಕ್ಕ ನಾಗರತ್ನ, ತನ್ನ ಲೇಖನದಲ್ಲಿ ಬರೆದಿರುವ ವಿಷಯ ಇದು:

> ''ನಾವು ಧಾರವಾಡದಲ್ಲಿದ್ದಾಗ ಒಂದು ಸಲ ಅಣ್ಣಿಗೇರಿಯಲ್ಲಿ ತೀನಂಶ್ರೀ ಅವರ ಭಾಷಣ ಏರ್ಪಾಡಾಗಿದ್ದಿತು. ಅದು ಪುರಂದರದಾಸರ ಜಯಂತಿಯಂದು ನನ್ನ ನೆನಪು ಸುಪ್ರಸಿದ್ಧ ಸಂಗೀತಗಾರ ಶ್ರೀ ಮಲ್ಲಿಕಾರ್ಜುನನ ಮನ್ಸೂರ್ ಅವರ ಗಾಯನವೂ ಏರ್ಪಾಡಾಗಿತ್ತು. ನಮ್ಮ ತಂದೆಗೆ ಮನ್ಸೂರ್ ಅವರ ಸಂಗೀತವೆಂದರೆ ತುಂಬಾ ಮೆಚ್ಚಿಕೆ. ಅದರಲ್ಲೂ ಅವರು ತಾಳದ ಆಡಂಬರವಿಲ್ಲದೆ ಭಾವಪೂರಿತವಾಗಿ ಹಾಡುತ್ತಿದ್ದ ವಚನಗಳೆಂದರೆ ತುಂಬಾ ಇಷ್ಟ. ಆ ದಿನ

**ಸಮಾರಂಭ ಹಿಂದೂಸ್ತಾನಿ ಸಂಗೀತ ಪದ್ಧತಿಯಂತೆ ರಾತ್ರಿ 9 ಗಂಟೆಗೆ ಪ್ರಾರಂಭವಾಗಿ ಬೆಳಗಿನ ಜಾವ ಮೂರು ಗಂಟೆಯವರೆಗೂ ನಡೆಯಿತು. ನದೀ ತೀರದಲ್ಲಿ ನಿರ್ಮಿಸಿದ ಮಂಟಪದಲ್ಲಿ ರಾತ್ರಿಯ ತಂಗಾಳಿಯಲ್ಲಿ ಸಮಾರಂಭ. ಒಳ್ಳೆ ಹಿತಕರವಾದ ಶಾಂತ ವಾತಾವರಣ. ಆ ದಿನ ಮನ್ಸೂರ್ ಅವರ ಗಾಯನವೂ ಬಹಳ ಮಧುರವಾಗಿ ಹಿತವಾಗಿತ್ತಂತೆ. ಅವರು ಪುರಂದರದಾಸರ ಒಂದು ಗೀತೆ (''ಈಗಲೋ, ಇನ್ನಾವಾಗಲೋ.... ಹರಿ ನಿನ್ನ ದರುಶನ'')ಯನ್ನು ಹಾಡಿದ ಮೇಲೆ ಮಧ್ಯಂತರ ಕಾಲದಲ್ಲಿ ನಮ್ಮ ತಂದೆಯವರ ಭಾಷಣವಿತ್ತಂತೆ. ಇವರು ತಮ್ಮ ಭಾಷಣದಲ್ಲಿ ಸಂಗೀತಕ್ಕೆ ಮೆಚ್ಚುಗೆಯನ್ನು ಸೂಸುತ್ತ ''ಈಗಲೋ, ಇನ್ನಾವಾಗಲೋ.... ಎಂದು ಮನಸ್ಸೂರ್ ಹಾಡಿದ್ದಾರೆ. ಈಗೇನೋ ಈ ಸಂಗೀತಸುಧೆಯನ್ನು ಸವಿದಿದ್ದಾಯಿತು. ಆದರೆ ಮನ್ಸೂರ್ ಅವರ ಈ ದಿವ್ಯ ಸಂಗೀತವನ್ನು ಕೇಳುವ ಯೋಗ ನಮಗೆ ಇನ್ನಾವಾಗ ಬರುತ್ತದೋ'' ಎಂದು ಮುಂತಾಗಿ ಹೇಳಿದರಂತೆ. ಆ ದಿನ ಬೆಳಗಿನ ಜಾವ 2 ಗಂಟೆಯಲ್ಲಿ ನದಿಯೊಳಕ್ಕೆ ತೇಲಿಬಿಟ್ಟ ತಮ್ಮ ಭಾಷಣವೂ ಅವರ ಮನಸ್ಸಿಗೆ ಬಹಳ ತೃಪ್ತಿಯಾಗುವಂತೆ ಬಂದಿತೆಂದು ನಮ್ಮ ತಂದೆಯವರೇ ಹೇಳುತ್ತಿದ್ದರು. ಇವರ ಭಾಷಣದ ನಂತರ ಮತ್ತೆ ಮನ್ಸೂರ್ ಗಾಯನ–ತಕ್ಷಣ ಅವರು ಬಸವಣ್ಣನವರ ''ನುಡಿದರೆ ಮುತ್ತಿನ ಹಾರದಂತಿರಬೇಕು....'' ಎಂದು ವಚನವನ್ನು ಹಾಡಿದರಂತೆ. ಅದು ನಮ್ಮ ತಂದೆಯವರ ಭಾಷಣವನ್ನು ಕುರಿತು ಹಾಡಿದ್ದೆಂದು ಮತ್ತೆ ಹೇಳಬೇಕಾಗಿಲ್ಲ. ವಾಗ್ಮಿಗಳು ತಮ್ಮ ವಾಕ್ಸುಧೆಯ ಮೂಲಕ ಮೆಚ್ಚುಗೆ ಸೂಸಿದರೆ ಸಂಗೀತಗಾರರು ಸಂಗೀತದ ಮೂಲಕ ಮೆಚ್ಚುಗೆ ವ್ಯಕ್ತಪಡಿಸಿದರು.''**

ತೀನಂಶ್ರೀಯವರಿಗೆ ಅವರ ಜೀವಿತ ಕಾಲದಲ್ಲಿ ಯಾವ ಪ್ರಶಸ್ತಿ ಸನ್ಮಾನಗಳೂ ಬರಲಿಲ್ಲ.

ತೀನಂಶ್ರೀ ತಮ್ಮ ಶಿಷ್ಯರುಗಳಿಗೆ ಪಿತೃಪ್ರೇಮವನ್ನು ಧಾರೆ ಎರೆದರು. ಅನೇಕ ವಿದ್ಯಾರ್ಥಿ, ವಿದ್ಯಾರ್ಥಿನಿಯರು ತಮ್ಮ ವೈಯಕ್ತಿಕ ಸಮಸ್ಯೆಗಳೊಂದಿಗೆ ಬಂದು, ತಮ್ಮ ಗುರುಗಳಲ್ಲಿ ಅದನ್ನು ನಿವೇದಿಸಿಕೊಂಡು, ಪಿತೃವಿನ ಸಹಾನುಭೂತಿಯ ಮಾತುಗಳನ್ನು ಕೇಳಿ ಮಾರ್ಗದರ್ಶನ ಪಡೆದು ಸಮಾಧಾನದಿಂದ ಹಿಂತಿರುಗುತ್ತಿದ್ದರು. ಅದೇ ರೀತಿ ತೀನಂಶ್ರೀ ನನಗೆ ಮತ್ತು ನನ್ನ ಅಕ್ಕನಿಗೆ ಗುರುವಿನ ಮಾರ್ಗದರ್ಶನವನ್ನು ನೀಡಿದರು. ನಮ್ಮ ತಪ್ಪುಗಳನ್ನು ಮೃದುವಾಗಿ ತೋರಿಸುತ್ತಿದ್ದರು. ನಮಗೆ ತಮ್ಮ ಯಾವ ನಿರ್ಧಾರವನ್ನು ಬಲವಂತವಾಗಿ ಹೊರಿಸದೆ ಅದರ ಪರ ಮತ್ತು ವಿರೋಧಗಳನ್ನು ತಿಳಿಸಿ ನಮ್ಮ ನಿರ್ಧಾರಕ್ಕೆ ಬಿಡುತ್ತಿದ್ದರು. ನಮಗೆ ಅವರೊಡನೆ ಹಿರಿಯ ಸ್ನೇಹಿತನ ಸಲುಗೆ ಇದ್ದುದರಿಂದ

(ಅವರನ್ನು ನಾವು ಸಂಬೋಧಿಸುತ್ತಿದ್ದುದು ಏಕವಚನದಲ್ಲಿ!) ಎಲ್ಲಾ ವಿಷಯಗಳ ಚರ್ಚೆಗಳು ತುಂಬಾ ಮುಕ್ತವಾಗಿರುತ್ತಿದ್ದವು.

ತೀನಂಶ್ರೀಯವರಿಗೆ ಪು.ತಿ.ನರಸಿಂಹಾಚಾರ್, ಡಿ.ಎಲ್. ನರಸಿಂಹಾಚಾರ್, ಎ.ಎನ್. ಮೂರ್ತಿರಾವ್, ನಂ. ಶಿವರಾಮಶಾಸ್ತ್ರಿ, ದ.ರಾ.ಬೇಂದ್ರೆ, ರಂ.ಶ್ರೀ. ಮುಗಳಿ, ವಿ.ಕೃ.ಗೋಕಾಕ್, ಕೂಡಲಿ ಚಿದಂಬರಂ, ಟಿ.ಪಿ. ಕೃಷ್ಣಾಚಾರ್ ಆರ್.ಎಲ್. ನರಸಿಂಹಯ್ಯ, ಎಂ.ವಿ. ಗೋವಿಂದಸ್ವಾಮಿ ಅವರುಗಳೆಲ್ಲ ಆಪ್ತಮಿತ್ರರಾಗಿದ್ದರು. ನಮ್ಮ ಮನೆಯಲ್ಲಿ ಇವರೊಡನೆ ನಡೆಯುತ್ತಿದ್ದ ಸರಸ ಸಲ್ಲಾಪಗಳಲ್ಲಿ, ಗಂಭೀರ ಚರ್ಚೆಗಳಲ್ಲಿ ಕುಳಿತಿರಲು ನನ್ನನ್ನು ಮತ್ತು ನನ್ನ ಅಕ್ಕನನ್ನು ಕರೆಯುತ್ತಿದ್ದರು. "ಪಾಶ್ಚಾತ್ಯರಲ್ಲಿ 'Children should be seen, not heard' ಎಂಬ ಮಾತಿದೆ. ಆದರೆ ತೀನಂಶ್ರೀಯ ಮನೆಯಲ್ಲಿ ಮಕ್ಕಳು ಅತಿಥಿಗಳ ಜೊತೆಗೇ ಊಟಕ್ಕೆ ಕುಳಿತು ಹಾಸ್ಯ ವಿನೋದಗಳಲ್ಲಿ ಭಾಗಿಗಳಾಗುವ ಪದ್ಧತಿ ಇತ್ತು" ಎ.ಎನ್. ಮೂರ್ತಿರಾವ್ ಎಂದು ಬರೆಯುತ್ತಾರೆ. ಇದಲ್ಲದೆ ತೀನಂಶ್ರೀಯವರ ಪ್ರಿಯ ಶಿಷ್ಯ ಮಿತ್ರರುಗಳಾದ ದೇ. ಜವರೇಗೌಡ, ಎಚ್.ಎಂ. ಶಂಕರ ನಾರಾಯಣರಾವ್, ಎಸ್.ವಿ. ಪರಮೇಶ್ವರ ಭಟ್ಟ, ಎಂ. ಚಿದಾನಂದಮೂರ್ತಿ ಮುಂತಾದವರೊಡನೆ ಮಾಡುತ್ತಿದ್ದ ಸರಸಸಲ್ಲಾಪಗಳಲ್ಲೂ ನಾವು ಭಾಗವಹಿಸುತ್ತಿದ್ದೆವು. ಈ ಸಂದರ್ಭಗಳಲ್ಲಿ ನಮಗೆ ದೊರೆತ ಸಾಹಿತ್ಯದ ತಿಳಿವಳಿಕೆ, ಲೋಕ ಜ್ಞಾನ ನಾವು ನೂರಾರು ಪುಸ್ತಕಗಳನ್ನು ಅಭ್ಯಾಸ ಮಾಡಿದರೂ ಬರುತ್ತಿರಲಿಲ್ಲವೆಂದು ಕಾಣುತ್ತದೆ. ಪುತಿನ ಅವರಂತೂ ಈ ಸ್ನೇಹಿತರುಗಳ ಸಹವಾಸದಲ್ಲಿ ತಾವು ಸಾವಿರ ವರ್ಷ ಬೇಕಾದರೂ ಬದುಕುತ್ತೇನೆಂದು ಹೇಳಿದ್ದರು. ಇವರೆಲ್ಲರ ನಡುವಿನ ಪತ್ರ ವ್ಯವಹಾರಗಳಲ್ಲಿ ಚರ್ಚಿತವಾಗಿರುವ ವಿಷಯಗಳು ಒಂದು ಜ್ಞಾನಕೋಶದಂತಿದೆ.

ತೀನಂಶ್ರೀಯವರಿಗೆ ನಂಬಿದ್ದ ಪವಿತ್ರ ತತ್ವಗಳಲ್ಲಿ ಯಾವ ಹೊಂದಾಣಿಕೆಗೂ ಒಪ್ಪಿದವರಲ್ಲ. ಜೀವನದಲ್ಲಿ ಅವರು ಹಣಕ್ಕೆ ಕೊಟ್ಟ ಸ್ಥಾನ ಯಾವಾಗಲೂ ಎರಡನೆಯದೇ ಹೊರತು ಮೊದಲನೆಯದಲ್ಲ. ಮೊದಲನೆಯ ಸ್ಥಾನ ಮೌಲಿಕವಾದ ಕಾರ್ಯಾಚರಣೆಗಳಿಗೆ ಮೀಸಲಾಗಿತ್ತು. ತೀನಂಶ್ರೀಯವರು 1957ರಲ್ಲಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಪ್ರಾಧ್ಯಾಪಕರಾಗಿ ಹಿಂತಿರುಗಿದಾಗ ಅಲ್ಲಿಯ ಪಠ್ಯಪುಸ್ತಕ ಸಮಿತಿಯ ಅಧ್ಯಕ್ಷರಾದರು. ಆ ವರ್ಷವೇ ಪ್ರಿಯೂನಿವರ್ಸಿಟಿ ಪ್ರಾರಂಭವಾಯಿತು. ಆಗ ಇಂಟರ್‌ಮೀಡಿಯಟ್ ಪರೀಕ್ಷೆಗೆ ನಿಯಮಿಸಿದ್ದ ಪಠ್ಯಪುಸ್ತಕಗಳನ್ನು ಪ್ರಿಯೂನಿವರ್ಸಿಟಿ ತರಗತಿಗೆ ಅಳವಡಿಸಬೇಕಾಯಿತು. ಇದು

ಕೇವಲ ಒಂದು ಔಪಚಾರಿಕವಾದ ತೀರ್ಮಾನವಾಗಿತ್ತು, ಆ ವೇಳೆಗಾಗಲೇ (ತೀನಂಶ್ರೀಗೆ ಸಂಬಂಧವಿರದಿದ್ದ) ಹಿಂದಿನ ಸಮಿತಿಯಿಂದ ಅವರ 'ರಾಕ್ಷಸನ ಮುದ್ರಿಕೆ' ಇಂಟರ್‌ಮಿಡಿಯೆಟ್ ತರಗತಿಗೆ ಪಠ್ಯಪುಸ್ತಕವಾಗಿ ನಿಯಮಿತವಾಗಿತ್ತು. ಆದರೆ ತೀನಂಶ್ರೀಯವರು ತಾವು ಪಠ್ಯಪುಸ್ತಕ ಸಮಿತಿಯ ಅಧ್ಯಕ್ಷರಾಗಿದ್ದ ಕಾಲದಲ್ಲಿ ತಾವು ಬರೆದ ಯಾವ ಪುಸ್ತಕಗಳನ್ನು ಯಾವ ತರಗತಿಗೂ ಪಠ್ಯಪುಸ್ತಕವನ್ನಾಗಿ ಪರಿಗಣಿಸಬಾರದೆಂದು ಖಡಾಖಂಡಿತವಾಗಿ ಸಮಿತಿಯಲ್ಲಿ ತಿಳಿಸಿದರು. ಉಳಿದ ಸಮಿತಿಯ ಸದಸ್ಯರು 'ರಾಕ್ಷಸನ ಮುದ್ರಿಕೆ'ಯದು ಹಳೆಯ ಸಮಿತಿಯ ತೀರ್ಮಾನ, ಇದರಲ್ಲಿ ಈ ಸಮಿತಿಯ ಯಾವ ನಿರ್ಣಯವೂ ಇಲ್ಲ ಎಂದು ವಾದಿಸಿದರೂ ಪ್ರಯೋಜನವಾಗದೆ ಈ ಪುಸ್ತಕ ಪಠ್ಯಪುಸ್ತಕಗಳ ಪಟ್ಟಿಯಿಂದ ಹಿಂದೆ ಸರಿಯಿತು. ಇದರಿಂದ ಇದರ ಪ್ರಕಟಣೆಗೆ ಮೊದಲೇ ವ್ಯವಸ್ಥೆ ಮಾಡಿಕೊಂಡಿದ್ದ ಅವರ ಮಿತ್ರ ಕಾವ್ಯಾಲಯದ ಕೂಡಲಿ ಚಿದಂಬರಂ ಅವರಿಗೆ ನಷ್ಟವೂ ಆಯಿತು. (ಆದರೆ ಚಿದಂಬರಂ ಅವರಿಗೆ ತೀನಂಶ್ರೀಯವರ ಸ್ನೇಹ ಮತ್ತು ಅವರು ನಂಬಿದ ತತ್ವಗಳಲ್ಲಿ ಇವೆಲ್ಲಾ ಅಪ್ರಕೃತ.) ಇದರಂತೆ ತೀನಂಶ್ರೀಯವರು 1962ರಲ್ಲಿ ಸೇವೆಯಿಂದ ನಿವೃತ್ತರಾಗುವ ತನಕ, 5 ವರ್ಷಗಳ ಕಾಲವೂ ಅವರ ಬರೆದ ಯಾವ ಪುಸ್ತಕವೂ ಈ ಸಮಿತಿಯ ಪರಿಗಣನೆಗೆ ಬರಲಿಲ್ಲ.

ತೀನಂಶ್ರೀಯವರ ನಿಧನಹೊಂದಿದ ನಂತರ ನನಗೆ ತಿಳಿದುಬಂದ ವಿಷಯ. ನಾನು ಪಿ.ಯು.ಸಿ. ಪರೀಕ್ಷೆಗೆ ಕುಳಿತಿದ್ದ ವರ್ಷ ನಮ್ಮ ತಂದೆ ಪ್ರಾಧ್ಯಾಪಕ ಅಧಿಕಾರದ ಮೇಲೆ ಕನ್ನಡ ಪರೀಕ್ಷಕರ ಮಂಡಳಿಯ ಅಧ್ಯಕ್ಷರಾಗಿದ್ದರೂ ಆ ಸಭೆಯಲ್ಲಿ ಭಾಗವಹಿಸಲಿಲ್ಲ. ನಾನು ಪರೀಕ್ಷೆ ಮುಗಿಸಿಕೊಂಡು ಬಂದು ಅವರಿಗೆ ಪ್ರಶ್ನೆಪತ್ರಿಕೆಯನ್ನು ತೋರಿಸಿದಾಗಲೇ ಅವರು ಮೊದಲನೆಯ ಬಾರಿಗೆ ಅದನ್ನು ನೋಡಿದ್ದು. ಅದನ್ನು ಓದಿ ಪ್ರಶ್ನೆ ಪತ್ರಿಕೆ ತುಂಬಾ ಚೆನ್ನಾಗಿದೆ ಎಂದು ಹರ್ಷ ವ್ಯಕ್ತಪಡಿಸಿದ್ದರು ಅಷ್ಟೆ. ನಾನು ಬೆಂಗಳೂರಿಗೆ ಹಿಂತಿರುಗಿದನಂತರ ನನಗೆ ಒಮ್ಮೆ ಜಿ.ಪಿ. ರಾಜರತ್ನಂ ಸಿಕ್ಕಿದಾಗ ನನಗೆ ಹೇಳಿದರು "ನಾಗಭೂಷಣ, ನಿನಗೆ ಗೊತ್ತಿರುವುದಿಲ್ಲ. ಏಕೆಂದರೆ ನಿನ್ನ ಅಪ್ಪ ನಿನಗೆ ಈ ವಿಷಯ ಹೇಳಿರುವುದಿಲ್ಲವೆಂದು ನನಗೆ ಗೊತ್ತು. ನೀನು ಪಿ.ಯು.ಸಿ. ಪರೀಕ್ಷೆಗೆ ಕುಳಿತ ವರ್ಷ ನಾನು ಕನ್ನಡದ ಪ್ರಶ್ನೆಪತ್ರಿಕೆ ಕೊಟ್ಟಿದ್ದೆ. ನಾನು ಅದೇ ಮೊದಲ ಬಾರಿಗೆ ಪಿ.ಯು.ಸಿ ಪ್ರಶ್ನೆಪತ್ರಿಕೆ ಸಿದ್ಧ ಮಾಡುತ್ತಿದ್ದುದರಿಂದ ತೀನಂಶ್ರೀ ಸ್ನೇಹಿತರೆಂದು ಅವರ ಬಳಿಗೆ ಹೋಗಿ 'ನಿಮ್ಮ ಹತ್ತಿರ ಪ್ರಶ್ನೆಗಳನ್ನು ಹೇಳುವುದಿಲ್ಲ. ಆದರೆ ಪ್ರಶ್ನೆಪತ್ರಿಕೆಯ ಸಾಮಾನ್ಯ ಸ್ವರೂಪ ಹೇಗಿರಬೇಕೆಂದು ಸಲಹೆ ಕೊಡುತ್ತೀರಾ' ಎಂದು ಕೇಳಿದಾಗ ತೀನಂಶ್ರೀ

ಹೇಳಿದ್ದರು. 'ರಾಜರತ್ನಂ ನಿಮಗೇ ತಿಳಿದಿರುವಂತೆ ಈ ವರ್ಷ ನಾಗಭೂಷಣನೇ ಪಿಯುಸಿ ಪರೀಕ್ಷೆಗೆ ಕುಳಿತಿದ್ದಾನೆ. ಆದ್ದರಿಂದ ಅದರ ಸ್ಥೂಲಸ್ವರೂಪ ಹೇಗಿರಬೇಕೆಂದು ನಿಮ್ಮೊಡನೆ ಚರ್ಚಿಸಿದರೂ ಕೂಡ ಆ ಪ್ರಶ್ನೆಪತ್ರಿಕೆಯ ಬಗ್ಗೆ ನನಗೆ ಸ್ವಲ್ಪ ತಿಳಿವಳಿಕೆ ಬಂದಂತಾಗುತ್ತದೆ. ಅದು ಸರಿಯಲ್ಲ ಕ್ಷಮಿಸಿ' ಎಂದು. ಅನಂತರ ನಾನು ನಮ್ಮ ಶ್ರೀಕಂಠಯ್ಯನೇ ನನಗೆ ಹೇಳದಿದ್ದ ಮೇಲೆ ಯಾರನ್ನು ಕೇಳುವ ಅಗತ್ಯವಿಲ್ಲವೆಂದು ನಾನೇ ಪ್ರಶ್ನೆಪತ್ರಿಕೆ ತಯಾರಿಸಿದೆ.''

ತೀನಂಶ್ರೀಯವರಿಗೆ ಜೀವನದಲ್ಲಿ ಅಪಾರವಾದ ಪ್ರೀತಿ. ತಮ್ಮ ಆಪ್ತಮಿತ್ರ ವರಕವಿ ದ.ರಾ. ಬೇಂದ್ರೆಯವರ ಈ ಕೆಳಗಿನ ಸಾಲುಗಳು ಅವರಿಗೆ ತುಂಬಾ ಪ್ರಿಯವಾಗಿದ್ದವು.

ರಸವೆ ಜನನ
ವಿರಸ ಮರಣ
ಸಮರಸವೇ ಜೀವನ

ಜೀವನದಲ್ಲಿ ಈ ಸಮರಸದ ಸಾಧನೆಯೇ ಅವರ ಸದಾ ಗುರಿಯಾಗಿತ್ತು. ಅಭಿಮಾನಿಗಳು ಯಾರಾದರೂ ತೀನಂಶ್ರೀಯವರ ಹಸ್ತಾಕ್ಷರ ಕೇಳಿದಾಗ ಮೇಲಿನ ಸಾಲುಗಳನ್ನು ದ.ರಾ. ಬೇಂದ್ರೆಯವರ ಹೆಸರಿನೊಡನೆ ಉಲ್ಲೇಖಿಸಿ, ತಮ್ಮ ಸಹಿ ಹಾಕಿಕೊಡುತ್ತಿದ್ದರು.

ತೀನಂಶ್ರೀ ಅಪಾರ ಪುಸ್ತಕ ಪ್ರೇಮಿ. ಅವರು ಓದು ಪ್ರಾರಂಭಿಸಿ ಮಗ್ನರಾದರೆ, ಅವರಿಗೆ ಊಟ, ತಿಂಡಿ, ನಿದ್ದೆ ಅಷ್ಟೇಕೆ ಸಂಸಾರದ ಪರಿವೇ ಇರುತ್ತಿರಲಿಲ್ಲ! ಇದನ್ನೆಲ್ಲ ಸಹನೆಯಿಂದ ನಿಭಾಯಿಸಿದವರು ನಮ್ಮ ತಾಯಿ. ಇದರ ಬಗ್ಗೆ ತೀನಂಶ್ರೀಯವರೇ ಹೀಗೆ ಬರೆದಿದ್ದಾರೆ.

> ''ಒಮ್ಮೊಮ್ಮೆ ಪುಸ್ತಕಗಳ ಸಾಲುಗಳನ್ನು ನೋಡಿದರೆ ಬೇಸರವೂ ಬರಲು ತೊಡಗಿದೆ. ಕೈಯಲ್ಲಿ ಪುಸ್ತಕವಿದ್ದರೆ ಸಾಕು, ಇವನಿಗೆ ಊಟ, ನಿದ್ದೆ, ಮಾತುಕಥೆ ಏನೂ ಬೇಡ ಎಂದು ಮನೆಯವರು ಅರ್ಧಸರಸವಾಗಿ ಹಂಗಿಸುವ ಮಾತು ಮನಸ್ಸನ್ನೂ ಹೊಗತೊಡಗಿದೆ. ಆದರೆ ಇದೆಲ್ಲ ಕ್ಷಣಿಕ! ಮತ್ತೆ ಪುಸ್ತಕದ ಕಡೆಗೇ ಕಣ್ಣು ಹೊರಳುತ್ತದೆ. ಬರವಣಿಗೆಯಾದರೂ ನಿತ್ಯ ಕ್ರಮವಾಗಿದ್ದರೆ ಪುಸ್ತಕಗಳನ್ನು ದೂರ ನೂಕಬಹುದಾಗಿತ್ತು, ಓದಿ ಓದಿ ಮರುಳಾದ್ದೇನೋ ನಿಜ. ಆದರೆ 'ನಡುವಂತರ'ದಲ್ಲಿ ಅದನ್ನೂ ತೊರೆದುಬಿಟ್ಟರೆ ಜೀವನಕ್ಕೆ ಬೇರೆ ಯಾವ ಅವಲಂಬನ! ಈ ಜನ್ಮಕ್ಕೆ ಓದು ಗಂಟು!''

ತೀನಂಶ್ರೀಯವರ ಸ್ವಂತ ಪುಸ್ತಕ ಭಂಡಾರದಲ್ಲಿ ಸುಮಾರು ಐದು ಸಹಸ್ರ ಗ್ರಂಥಗಳಿದ್ದವು. ಅವರು ಜೀವಮಾನಪೂರ್ತಿ ತಮ್ಮ ಸಂಬಳದಲ್ಲಿ ಸರಾಸರಿ ಸುಮಾರು ಶೇಕಡ 20–25ರಷ್ಟನ್ನು ಪುಸ್ತಕಗಳ ಖರೀದಿಗಾಗಿ ವ್ಯಯ ಮಾಡುತ್ತಿದ್ದರು. ಅವರು ಇದ್ದಾಗ ಇವನ್ನು ಯಾವುದಾದರೂ ಗ್ರಂಥ ಭಂಡಾರಗಳಿಗೆ ಕೊಡಬೇಕೆಂದು ಒಂದೆರಡು ಸಾರಿ ಹೇಳಿದ್ದರು. ಅವರ ಇಚ್ಛೆಯನ್ನು ತಿಳಿದಿದ್ದ ನಾನು ತೀನಂಶ್ರೀಯವರ ನಿಧನದನಂತರ, ಅವರ ನೆನಪಿಗಾಗಿ ನಮಗೆ ಉಪಯುಕ್ತವಾದ ಕೆಲವು ಪುಸ್ತಕಗಳನ್ನು ಇಟ್ಟುಕೊಂಡು ಸುಮಾರು ನಾಲ್ಕು ಸಹಸ್ರ ಪುಸ್ತಕಗಳನ್ನು ಮೈಸೂರು ಮತ್ತು ಕುವೆಂಪು ವಿಶ್ವವಿದ್ಯಾನಿಲಯಗಳು, ಕನ್ನಡ ಸಾಹಿತ್ಯ ಪರಿಷತ್ತು ಚಿಕ್ಕನಾಯಕನಹಳ್ಳಿಯ ಸ್ಥಳೀಯ ಪ್ರೌಢಶಾಲೆ, ಮಿಥಿಕ್ ಸೊಸೈಟಿ ಮತ್ತು ಇತರ ಸಂಘ ಸಂಸ್ಥೆಗಳಿಗೆ ತೀನಂಶ್ರೀಯವರ ಸ್ಮಾರಕವಾಗಿ ದಾನ ಮಾಡಿದೆನು. ವ್ಯಾಸಂಗ ಮಾಡುವ ವಿದ್ವಾಂಸರು ಮತ್ತು ವಿದ್ಯಾರ್ಥಿಗಳು ಇಲ್ಲಿಯ ಅಪೂರ್ವ ಪುಸ್ತಕಗಳ ಜೊತೆ ಈ ಪುಸ್ತಕಗಳ ಪುಟಗಳ ಅಂಚಿನಲ್ಲಿ ತೀನಂಶ್ರೀಯವರು ಮಾಡಿರುವ ವಿದ್ವತ್ಪೂರ್ಣ ಟಿಪ್ಪಣಿಗಳ ಲಾಭವನ್ನೂ ಪಡೆಯುತ್ತಿದ್ದಾರೆ.

1949ರಲ್ಲಿ ತೀನಂಶ್ರೀಯವರು ದೆಹಲಿಯಲ್ಲಿ ಭಾರತ ಸಂವಿಧಾನ ಪರಿಷತ್ತಿನಲ್ಲಿ ಪ್ರತಿನಿಧಿಯಾಗಿ ಭಾಗವಹಿಸಿದಾಗ, ದೇಶದ ಮುಖ್ಯಸ್ಥರಿಗೆ ಇವರು ಸೂಚಿಸಿದ "ರಾಷ್ಟ್ರಪತಿ" ಎನ್ನುವ ಪದವೇ ಒಮ್ಮತದಿಂದ ಅಂಗೀಕಾರವಾಗಿ ಆ ಸ್ಥಾನಕ್ಕೆ "ರಾಷ್ಟ್ರಪತಿ" ಎಂದು ನಾಮಕರಣವಾಯಿತು.

ತೀನಂಶ್ರೀಯವರಿಗೆ ದೇವರು, ಮತಗಳು, ಜಾತಿ ಮುಂತಾದ ವಿಷಯಗಳಲ್ಲಿ ಹೆಚ್ಚು ನಂಬಿಕೆ ಇರಲಿಲ್ಲ, ಆದರೆ ಇತರರ ನಂಬಿಕೆಗಳಿಗೆ ಎಂದೂ ಅಡ್ಡಪಡಿಸಿದವರಲ್ಲ. ಮತ್ತು ಎಲ್ಲ ಹಬ್ಬ ಹರಿದಿನಗಳ ಆಚರಣೆ, ಅವಶ್ಯವಾದಾಗ ದೇವರ ಪೂಜೆ ಮತ್ತು ಕ್ಲುಪ್ತವಾಗಿ ಅವರ ತಂದೆತಾಯಿಯವರ ವಾರ್ಷಿಕ ಶ್ರಾದ್ಧ ಇವನ್ನು ಶ್ರದ್ಧೆಯಿಂದ ಆಚರಿಸುತ್ತಿದ್ದರು.

ದೇವರ ವಿಷಯದಲ್ಲಿ ತಮ್ಮ ಭಾವನೆ ಏನು? ಎಂದು ತೀನಂಶ್ರೀಯವರು ತಮ್ಮನ್ನೇ ಪ್ರಶ್ನಿಸಿಕೊಂಡು ಹೀಗೆ ಬರೆಯುತ್ತಾರೆ:

*"ಕರಾರವಿಂದೇನ ಪದಾರವಿಂದಂ*
*ಮುಖಾರವಿಂದೇ ವಿನಿವೇಶಯಂತಂ।*
*ವಟಸ್ಯ ಪತ್ರಸ್ಯ ಪುಟೇ ಶಯಾನಂ*
*ಬಾಲಂ ಮುಕುಂದಂ ಮನಸಾ ಸ್ಮರಾಮಿ"*

ಎಂಬ ಸ್ತುತಿ ಪದ್ಯವೊಂದು ಉಂಟಲ್ಲವೆ? ವಟ ಪತ್ರಶಾಯಿಯಾಗಿ ಕಾಲುಬೆರಳನ್ನು ಬಾಯಿಗಿಟ್ಟುಕೊಂಡು ಚೀಪುತ್ತಾ ಬಾಲಲೀಲೆಯಾಡುತ್ತಿರುವ ಈ ಹಸುಳೆ ಸದೃಶ್ಯ ನನ್ನ ದೇವರ ಪ್ರತೀಕವಾಗಿದ್ದಾನೆ! ದೇವರಿನ್ನೂ ಹಸುಳೆ! ಅವನ ಲೀಲೆ ಬಾಲಲೀಲೆ! ಮುರಿಯುತ್ತಾನೆ, ಕಟ್ಟುತ್ತಾನೆ, ಕೆಡಿಸುತ್ತಾನೆ, ಬೀಳಿಸುತ್ತಾನೆ ಎತ್ತುತ್ತಾನೆ. ತನ್ನ ಕೊನೆಯ ಗುರಿ ಇನ್ನೂ ಅವನಿಗೇ ಗೊತ್ತಿಲ್ಲ, ತನ್ನ ಕೈಯ ಬೊಂಬೆಗಳಿಗೆ ಎಷ್ಟು ನೋವಾಗಬಹುದೆಂಬುದರ ಅರಿವೂ ಅವನಿಗಿಲ್ಲ! ಅದಕ್ಕೇ ಜಗತ್ತಿನಲ್ಲಿ ಇಷ್ಟು ದುಃಖ, ನೋವು; ಅರ್ಥವಾಗದ ಸಂಕಟ! ಆದರೆ ದೇವರು ದುಷ್ಟನಲ್ಲ, ಅವನಿಗೆ ದುರುದ್ದೇಶವಿಲ್ಲ, ಹಸುಳೆ ಒಂದು ಬೊಂಬೆಯನ್ನು ಚಚ್ಚಿ ಒಡೆದು ಹಾಕುವಾಗಲೂ ಅದರ ಹೃದಯದಲ್ಲಿ ಕಲ್ಮಷ ಕಿಲ್ಬಿಷಗಳೇನೂ ಇರುವುದಿಲ್ಲ, ಈ ದೇವರು ಬೇಗ ಪ್ರಬುದ್ಧನಾಗಲಿ ಅವನ ಲೀಲೆ ಅಹಿಂಸಾತ್ಮಕವಾಗಲಿ!

ತೀನಂಶ್ರೀ ಅವರಿಗೆ ಎಲ್ಲವುದಕ್ಕಿಂತ ಶುಭ್ರ ಮತ್ತು ಶುಚಿಯಾದ ಜೀವನದಲ್ಲಿ ಹೆಚ್ಚಿನ ನಂಬಿಕೆ ಮತ್ತು ಗೌರವ ಇತ್ತು, ಇದರ ಮುಂದೆ ಜಾತಿ ಮತ ವಿಷಯಗಳು ಗೌಣ.

ಹೊಯ್ಸಳ ಕರ್ನಾಟಕ ಜನಾಂಗದ ಅನೇಕ ಹಿರಿಯರಲ್ಲಿ ತೀನಂಶ್ರೀ ಅವರಿಗೆ ಗೌರವವಿತ್ತು, ಅವರ ಕಾರ್ಯ ಸಾಧನೆಗಳನ್ನು ಮತ್ತು ಗಳಿಸಿದ್ದ ಗೌರವಗಳನ್ನು ತುಂಬಾ ಮೆಚ್ಚಿದ್ದರು. ಎ.ಆರ್. ಕೃಷ್ಣಶಾಸ್ತ್ರಿಗಳು ಅವರ ಗುರುಗಳು. ಎ.ಎನ್.ಮೂರ್ತಿರಾಯರು ಮತ್ತು ನಂ. ಶಿವರಾಮ ಶಾಸ್ತ್ರಿಗಳು ಅವರ ಆಪ್ತಮಿತ್ರರುಗಳು. ಎಂ.ಎಸ್. ಪುಟ್ಟಣ್ಣನವರು, ಎ.ಆರ್. ಕೃಷ್ಣಶಾಸ್ತ್ರಿಗಳು ಮತ್ತು ಎ.ಎನ್. ಮೂರ್ತಿರಾಯರು ಈ ಮೂರು ಹಿರಿಯರ ಬರೆವಣಿಗೆ ನಿಜವಾದ ಹೊಯ್ಸಳ ಕರ್ನಾಟಕ ಸೊಗಡಿನ ಕನ್ನಡ ಎಂದು ಅನೇಕಬಾರಿ ಹೇಳಿದ್ದರು.

ತೀನಂಶ್ರೀಯವರು 1966ರಲ್ಲಿ ನಿಧನಹೊಂದಿದಾಗ ದುಃಖ ಮತ್ತು ಸಂತಾಪಗಳ ಹೊಳೆಯೇ ಹರಿಯಿತು. ಅನಂತರ ಅದೇ ವರ್ಷ ಮೈಸೂರು ರಾಜ್ಯ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ ನೀಡಿತು. 1975ರಲ್ಲಿ ಅವರಿಗೆ ಸಂಸಾರ ಮತ್ತು ಅಭಿಮಾನಿಗಳಿಂದ ಎಂ. ಚಿದಾನಂದಮೂರ್ತಿಯವರ ನೇತೃತ್ವದಲ್ಲಿ "ಶ್ರೀಕಂಠತೀರ್ಥ" ಸ್ಮಾರಕಗ್ರಂಥ ಅರ್ಪಿತವಾಯಿತು. ಅದರಲ್ಲಿರುವ ಮೌಲಿಕ ಸಂಶೋಧನ ಲೇಖನಗಳಿಗಾಗಿ ಅದು ಶೀಘ್ರವೇ ಮರುಮುದ್ರಣವಾಯಿತು. ಈ ಸಮಾರಂಭದಲ್ಲಿ ಗ್ರಂಥವನ್ನು ಬಿಡುಗಡೆ ಮಾಡಿದ ಹಿರಿಯರಾದ ಮಾಸ್ತಿಯವರು ತೀನಂಶ್ರೀಯವರ ವ್ಯಕ್ತಿತ್ವ ಮತ್ತು ಪಾಂಡಿತ್ಯವನ್ನು ಮನಸಾರೆ ಹೊಗಳಿ

''ತೀನಂಶ್ರೀ ತನ್ನ ಜೀವನದಲ್ಲಿ ಅವನ ಆಟವನ್ನು ತುಂಬಾ ಶ್ಲಾಘ್ಯವಾಗಿ ಆಡಿದನು. ಅವನು ಎಷ್ಟು ಚೆಲುವನಾಗಿದ್ದನೆಂದರೆ, ನಾನು ಹುಡುಗಿಯಾದ್ದರೆ ಅವನನ್ನು ಮದುವೆಯಾಗುತ್ತಿದ್ದೆ'' ಎಂದು ಸಭೆಯಲ್ಲಿ ನಗೆಯ ಅಲೆ ಹರಿಸಿದ್ದರು! ಆ ಸಭೆಯಲ್ಲಿ ನಮ್ಮ ತಾಯಿಯವರೂ ಉಪಸ್ಥಿತರಾಗಿದ್ದರು!

1990ರಲ್ಲಿ ತೀನಂಶ್ರೀಯವರಿಗೆ ಅವರ ಆಚಾರ್ಯ ಕೃತಿ ''ಭಾರತೀಯ ಕಾವ್ಯಮೀಮಾಂಸೆ''ಗೆ ರಾಜ್ಯದ ಅತ್ಯುನ್ನತ ಸಾಹಿತ್ಯ ಪ್ರಶಸ್ತಿಯಾದ ''ಪಂಪ ಪ್ರಶಸ್ತಿ'' ಪ್ರದಾನವಾಯಿತು. ಅದನ್ನು ನಮ್ಮ ತಾಯಿ ಸ್ವೀಕರಿಸಿದರು.


1998ರಲ್ಲಿ ಬೆಂಗಳೂರಿನ ಸೌತ್‌ಎಂಡ್ ಸರ್ಕಲ್‌ನಲ್ಲಿ ತೀನಂಶ್ರೀ ಪ್ರತಿಮಾ ಸಮಿತಿಯವರು ಉಡುಗೊರೆಯಾಗಿ ನೀಡಿದ ತೀನಂಶ್ರೀ ಕಂಚಿನ ಪುತ್ಥಳಿಯನ್ನು ಬೆಂಗಳೂರು ಮಹಾನಗರ ಪಾಲಿಕೆಯವರು ಅನಾವರಣ ಮಾಡಿದರು. 2002ರಲ್ಲಿ ಈ ವೃತ್ತಕ್ಕೆ ''ಪ್ರೊಫೆಸರ್ ತೀ.ನಂ.ಶ್ರೀ ವೃತ್ತ'' ಎಂದು ನಾಮಕರಣ ಮಾಡಲಾಯಿತು.

2005–2006ರಲ್ಲಿ ನಾಡಿನ ಮತ್ತು ದೇಶದಾದ್ಯಂತ ತೀನಂಶ್ರೀಯವರ ಅರ್ಥಪೂರ್ಣ ಜನ್ಮಶತಮಾನೋತ್ಸವವನ್ನು ಬಹು ವಿಜೃಂಭಣೆಯಿಂದ ಆಚರಿಸಲಾಯಿತು. ವಿಶ್ವವಿದ್ಯಾನಿಲಯಗಳು, ಶಿಕ್ಷಣ ಸಂಸ್ಥೆಗಳು, ಸಾಂಸ್ಕೃತಿಕ ಸಂಘಗಳು, ರಾಷ್ಟ್ರೀಯ ಅಕಾಡೆಮಿಗಳ ಮೂಲಕ ಸುಮಾರು ಐವತ್ತು ಸಮಾರಂಭಗಳು, ವಿದ್ವತ್ ವಿಚಾರಗೋಷ್ಠಿ ಮುಂತಾದವುಗಳು ತೀನಂಶ್ರೀಯವರ ಸ್ಮರಣೆಯಲ್ಲಿ ನಡೆದವು. ಈ ವರ್ಷದಲ್ಲಿಯೇ ತೀನಂಶ್ರೀಯವರ ಸಮಗ್ರ ವ್ಯಕ್ತಿತ್ವ, ಜೀವನದರ್ಶನವನ್ನು ಬಿಂಬಿಸುವ ಸುಮಾರು ಸಾವಿರ ಪುಟಗಳ ಬೃಹತ್‌ಗ್ರಂಥ ''ತೀ.ನಂ.ಶ್ರೀ. ಪಥ–ಪರಿಸರ'' (ಸಂಪಾದಕ: ತೀ.ಶ್ರೀ. ನಾಗಭೂಷಣ) ಪ್ರಕಟವಾಯಿತು. ಕನ್ನಡ ಸಾಹಿತ್ಯಕ್ಕೆ ಇದು ಒಂದು ಅಪೂರ್ವವಾದ ಕೊಡುಗೆ ಎಂದು ಎಲ್ಲರ ಅಭಿಪ್ರಾಯವಾಗಿದೆ.

2005ರಲ್ಲಿ ಕರ್ನಾಟಕ ಸರ್ಕಾರ ತೀರ್ಥಪುರ ಗ್ರಾಮದಲ್ಲಿ ತೀ.ನಂ.ಶ್ರೀ. ಸ್ಮಾರಕ ಪದವಿಪೂರ್ವ ಕಾಲೇಜನ್ನು ಪ್ರಾರಂಭಮಾಡಿತು. ರಾಜ್ಯ ಸರ್ಕಾರ 2007ರಲ್ಲಿ ಚಿಕ್ಕನಾಯಕನಹಳ್ಳಿ ತಾಲ್ಲೂಕು ಸ್ಥಳದಲ್ಲಿ ''ತೀ.ನಂ.ಶ್ರೀ. ಸ್ಮಾರಕ ಸಾಂಸ್ಕೃತಿಕ ಭವನ''ವನ್ನು ನಿರ್ಮಿಸಲು ಒಂದೂವರೆ ಕೋಟಿ ರೂಪಾಯಿ ಅನುದಾನವನ್ನು ಕೊಟ್ಟಿದೆ.



ಸ್ವಂತ ಮನೆಯ ಕಿರುಉದ್ಯಾನದಲ್ಲಿ



ಈಜಿಪ್ಟ್‌ನಲ್ಲಿ ಒಂಟೆ ಸವಾರಿ

ಈ ರೀತಿ ತೀನಂಶ್ರೀಯವರ ಮೇಲೆ ಅವರ ಜೀವಿತಕಾಲದಲ್ಲೂ ಮತ್ತು ನಿಧನದ ನಂತರವೂ ನಾಡಿನ ಜನರ ಪ್ರೀತಿ, ವಿಶ್ವಾಸ ಮತ್ತು ಗೌರವಗಳು ಸತತವಾಗಿ ವ್ಯಕ್ತವಾಗುತ್ತಲೇ ಇದೆ. ಆದ್ದರಿಂದ ತೀನಂಶ್ರೀಯವರ ಬಗ್ಗೆ ಬರೆಯುವಾಗ ಕೊನೆಯ ಮಾತೆಂದು ಹೇಳುವುದು ಕಷ್ಟ. ಅದರ ಆವಶ್ಯಕತೆಯೂ ಇಲ್ಲ. ತೀನಂಶ್ರೀಯವರು ಅವರ ಜೀವಿತಕಾಲದಲ್ಲಿ ಮಾಡಿದ ಸಾಧನೆ ಮತ್ತು ಕೃತಿ ರಚನೆಗಳಿಗಿಂತ ಅವರಿಂದ ಮಾತ್ರ ಸಾಧ್ಯವೆಂದು ನಾಡು ನಿರೀಕ್ಷಿಸಿದ್ದ ಸಾಧನೆಗಳು ಮತ್ತು ಬರವಣಿಗೆಗಳೇ ಹೆಚ್ಚೆಂದು ಹೇಳಬಹುದು. ಆದರೆ ಅವರ ಅನಿರೀಕ್ಷಿತ ಮತ್ತು ಅಕಾಲಿಕ ನಿಧನ (ತೀನಂಶ್ರೀಯವರು ನಿಧನ ಹೊಂದಿದಾಗ ಅವರಿಗಿನ್ನೂ ಅರವತ್ತು ತುಂಬಿರಲಿಲ್ಲ. ಅವರ ಸನ್ಮಾನಗಳು ಕೂಡ ಇನ್ನೂ ಕಾಲಾವಕಾಶ ಇದೆಯೆಂದು ಭಾವಿಸಿದ್ದವು!) ಇವೆಲ್ಲವನ್ನು ದುಃಸಾಧ್ಯವನ್ನಾಗಿ ಮಾಡಿತು. ಈ ವಿಷಯದ ಬಗ್ಗೆ ತೀನಂಶ್ರೀ ಹೆಚ್ಚು ಹೇಳದಿದ್ದರೂ ಅವರಲ್ಲೂ ಈ ಬಗ್ಗೆ ವಿಷಾದದ ಛಾಯೆ ಆವರಿಸಿರಬೇಕು. ಅದಕ್ಕೆ ತಮ್ಮ ಬಗ್ಗೆ ಅವರು ಬರೆದಿಟ್ಟಿರುವ ಈ ಕೆಳಗಿನ ಚರಮ ಗೀತೆಯೇ ಸಾಕ್ಷಿ.

*ಪದ್ಯ ಹೋಯ್ತು ಗದ್ಯ ಬಂತು ಡುಂಡುಂ!*
*ಗದ್ಯ ಹೋಯ್ತು ಮಾತು ಬಂತು ಡುಂಡುಂ!*
*ಮಾತು ಹೋಯ್ತು ಮೌನ ಬಂತು ಡುಂಡುಂ!*

# ಕೃತಿಗಳು

ತೀನಂಶ್ರೀಯವರ ಪ್ರತಿಭೆ, ವಿದ್ವತ್ತುಗಳು, ಅವರ ಆಸಕ್ತಿಯ ಪರಿಧಿಯೊಳಗೆ ಬರುವ ವಿಷಯಗಳು ಮತ್ತು ಜೀವಿತಾವಧಿಯಲ್ಲಿ ಅವರಿಗಿದ್ದ ಪ್ರಸಿದ್ಧಿಗಳನ್ನು ಪರಿಗಣಿಸಿದರೆ ಅವರು ಬರೆದ ಗ್ರಂಥಗಳ ಸಂಖ್ಯೆ ಕಡಿಮೆ ಎಂದೇ ಎಲ್ಲರ ಅಭಿಪ್ರಾಯ ಮತ್ತು ಕೊರಗೂ ಆಗಿದೆ. ಆದರೆ ಅವರು ಬರೆದಷ್ಟೂ ಅಪ್ಪಟ ಬಂಗಾರ. ತೀನಂಶ್ರೀಯವರಿಗೆ ಮಾತ್ರ ಸಾಧ್ಯವಿದ್ದ ಭಾಷಾಶಾಸ್ತ್ರ, ಛಂದಸ್ಸು ಮತ್ತು ಇತರ ಶಾಸ್ತ್ರಗಳಿಗೆ ಸಂಬಂಧಿಸಿದ ಅನೇಕ ಗ್ರಂಥಗಳು ಮತ್ತು ಲೇಖನಗಳು ಬೆಳಕು ಕಾಣಲೇ ಇಲ್ಲ. ಅವರ ಕೃತಿಗಳನ್ನು ಸೃಜನ, ಶಾಸ್ತ್ರ, ಸಂಪಾದನೆ ಮತ್ತು ವಿಮರ್ಶೆ ಎಂದು ವಿಂಗಡಿಸಬಹುದು.

## ಸೃಜನ ಸಾಹಿತ್ಯ

**ಒಲುಮೆ** (ಮೊದಲ ಮುದ್ರಣ 1932): ಇದು ತೀನಂಶ್ರೀಯವರ ಮೊಟ್ಟಮೊದಲ ಪ್ರಕಟಿತ ಕೃತಿ. ಕನ್ನಡ ಸಾಹಿತ್ಯದಲ್ಲಿ ಇದೇ ಪ್ರಥಮ ಪ್ರೇಮ ಕವಿತೆಗಳ ಸಂಕಲನ. ತೀನಂಶ್ರೀಯವರು ಮದುವೆಯಾದನಂತರ ನಮ್ಮ ತಾಯಿಯವರು ಮನೆಗೆ ಬರಲು ಮೂರು ವರ್ಷಗಳಾದುದರಿಂದ ಮತ್ತು ನಮ್ಮ ತಂದೆಯವರ ಇಂಗ್ಲಿಷ್ ಮತ್ತು ಸಂಸ್ಕೃತ ಸಾಹಿತ್ಯ ಅಧ್ಯಯನ ಮುಂದುವರಿದಿದ್ದರಿಂದ ಈ ಕಾವ್ಯಗಳ ಪ್ರಭಾವ ಈ ಕವಿತೆಗಳಿಗೆ ಸ್ಫೂರ್ತಿ ನೀಡಿರಬಹುದು. ಹಿರಿಯರಾದ ಮಾಸ್ತಿಯವರು ''ಈ ಪದ್ಯಗಳು ನಮ್ಮ ಸಾಹಿತ್ಯ ಕ್ಷೇತ್ರದಲ್ಲಿ ಬಿಡುವಾಗಿ ಬಿಟ್ಟಿದ್ದ ಸ್ಥಳವನ್ನು ಫಲವತ್ತಾಗಿ ಮಾಡಿವೆ'' ಎಂದು ಆ ಕಾಲದಲ್ಲೇ ತಿಳಿಸಿದ್ದರು. 1942ರಲ್ಲಿ ಪ್ರಕಟವಾದ ಕೆ.ಎಸ್. ನರಸಿಂಹಸ್ವಾಮಿಯವರ ಸುಪ್ರಸಿದ್ಧ 'ಮೈಸೂರ ಮಲ್ಲಿಗೆ'ಗೆ ಈ 'ಒಲುಮೆ'ಯ ಪ್ರಭಾವ ಮತ್ತು ತೀನಂಶ್ರೀಯವರ ವೈಯಕ್ತಿಕ ಪ್ರೋತ್ಸಾಹ ಮತ್ತು ಪ್ರೇರಣೆಗಳೇ ಕಾರಣವೆಂದು ಸ್ವತಃ ಪ್ರೇಮ ಕವಿಗಳೇ ತಿಳಿಸಿದ್ದಾರೆ. ಅಷ್ಟೇ ಅಲ್ಲ ನಾನು ಕೆ.ಎಸ್. ನರಸಿಂಹಸ್ವಾಮಿಯವರನ್ನು ಭೇಟಿಮಾಡಿದ್ದಾಗ ಅವರು ಅದನ್ನು ಸದಾ ಸ್ಮರಿಸುತ್ತಿದ್ದರು. ತೀನಂಶ್ರೀಯವರ ಕವಿ ಪ್ರತಿಭೆ ಅವರು ಪ್ರೌಢಶಾಲೆಯಿಲ್ಲಾದ್ದಗಲೇ ವಿಕಸನವಾಗುತ್ತಿದ್ದರೂ, 'ಒಲುಮೆ'ಯ ನಂತರ ಕೆಲವು ಪದ್ಯಗಳನ್ನು ಮಾತ್ರ ತೀನಂಶ್ರೀ ಬರೆದರೆ ಹೊರತು ಈ ಕ್ಷೇತ್ರವನ್ನು

ಮುಂದುವರಿಸಲಿಲ್ಲ, ಆದರೆ ಅವರು ತಮ್ಮ ಕವಿಯ ಮನೋಭಾವವನ್ನು ತಮ್ಮ ಆಪ್ತಮಿತ್ರರಾದ ವರಕವಿ ಪು.ತಿ. ನರಸಿಂಹಾಚಾರ್ಯರ ಕವಿತಾ ಪ್ರತಿಭೆಯಲ್ಲಿ ಮಿಲನಗೊಳಿಸಿ ಪುತಿನ ಅವರ ಏಳಿಗೆಯಲ್ಲಿ ಅಪಾರ ಸಂತಸವನ್ನು ಪಡೆದರು. ಪುತಿನ ಅವರ ಯಾವ ಕವಿತೆಯೂ ತೀನಂಶ್ರೀಯವರ ಮೂಸೆಯಲ್ಲಿ ಹದಕಾಯದೆ ಹೊರಗೆ ಬರಲಿಲ್ಲ, ಅದಕ್ಕಾಗಿ ಪುತಿನ ಅವರು ತೀನಂಶ್ರೀಯವರನ್ನು ತಮ್ಮ ಕವಿತೆಗಳ 'ಸಾಕುತಾಯಿ' ಎಂದು ಕರೆದಿದ್ದಾರೆ. 'ಒಲುಮೆ'ಯ ಒಂದು ಪದ್ಯ ಹೀಗಿದೆ.

*ಮಿಕ್ಕವರಲಿ ನಗೆಗೂಡುತ ಬೆರೆವೆ,*
*ನನ್ನೊಂದಿಗೆ ಬರಿಗೋಳನೆ ಕರೆವೆ,*
*ಒಲವೋ ಹಗೆಯೋ–ಯಾವುದಿದು?*

*ಹೆರರೇನೆನ್ನಲಿ, ಕೇಳುತ ನಲಿವೆ,*
*ಸರಸವನಾಡಲು ನನ್ನಲಿ ಮುನಿವೆ;*
*ಒಲವೋ ಹಗೆಯೋ–ಯಾವುದಿದು?*

*ಕುಳಿತರೆ ನಿಂತರೆ ಹುಳುಕನೆ ಬಗೆವೆ,*
*ತುಸ ತಪ್ಪಾದರು ಕಲಹವ ತೆಗೆವೆ;*
*ಒಲವೋ ಹಗೆಯೋ–ಯಾವುದಿದು?*

*ಪ್ರಣಯವ ಬೀರಲು, ಕಪಟವಿದೆನುವೆ,*
*ಸುಮ್ಮನೆ ಸಾರಲು, ಒಲವಿಲ್ಲೆನುವೆ;*
*ಒಲವೋ ಹಗೆಯೋ–ಯಾವುದಿದು?*

*ದೂರಿದೆನಲ್ಲವೆ ನಿನ್ನನು ಹೆಚ್ಚು?*
*ನನಗಾದರೋ, ಈ ಹಗೆಯೂ ಮೆಚ್ಚು!*
*ಒಲವೋ ಹುಚ್ಚೋ–ಯಾವುದಿದು?*

**ನಂಟರು** (ಮೊದಲ ಮುದ್ರಣ 1963): ಇದು ತಡವಾಗಿ ಪ್ರಕಟವಾದ ತೀನಂಶ್ರೀಯವರ ಪ್ರಬಂಧಗಳ ಸಂಕಲನ. ತೀನಂಶ್ರೀಯವರು ''ಪ್ರಬಂಧವೆನ್ನುವುದು ಮಂದ್ರಶ್ರುತಿಯ ಭಾವಗೀತೆ'' ಎಂದು ಹೇಳಿದ್ದಾರೆ. 1928ರಲ್ಲಿ 'ಭಾರತೀದಾಸ' ಎಂಬ ಕಾವ್ಯನಾಮದಲ್ಲಿ ಬರೆದ 'ನಂಟರು' ಎನ್ನುವುದು ಅವರ ಮೊದಲ ಪ್ರಬಂಧವೆನ್ನಬಹುದು. ಇಲ್ಲಿಯ ಕೆಲವು ಪ್ರಬಂಧಗಳ ಶೀರ್ಷಿಕೆಗಳೇ ಆಕರ್ಷಣೀಯವಾಗಿವೆ. ನಂಟರು, ಮನೆಗಳು, ನೆಗಡಿ, ತಗುಣಿ,

ಕಾಸಿನ ಸಂಘ, ಪ್ರವಾಸಿಯ ಪೆಟ್ಟಿಗೆಗಳು, ಪ್ರವಾಸಿ ಇತ್ಯಾದಿ. 'ನೆಗಡಿ' ಪ್ರಬಂಧದ ಪ್ರಾರಂಭ ನೋಡಿ:

''ಒಂದು, ಎರಡು, ಮೂರು ನಾಲ್ಕು, ಐದು..... ಇಲ್ಲ, ಇನ್ನೂ ಮುಗಿದಿಲ್ಲ!–ಆರು, ಏಳು, ಎಂಟು, ಒಂಬತ್ತು–ಅಬ್ಬಬ್ಬಾ! ಹತ್ತು ಇನ್ನೂ ಒಂದು!....ಈಗ ಶಾಂತವಾಯಿತು?''

ಇದೇನು ಎಣಿಕೆ? ಮನೆಯಲ್ಲಿರುವ ಹುಡುಗರು ಹಿರಿಯರು ಎಲ್ಲರಿಗೂ ಈ ಬೆರಗೇಕೆ? ಹೊರಗಿನಿಂದ ಯಾರಾದರೂ ಸಂಸ್ಥಾನಾಧಿಪತಿಗಳು ಆಗಮಿಸಿದಾಗ ಆಗುವ ಗುಂಡುಗಳನ್ನು ಹೀಗೆ ಲೆಕ್ಕ ಹಾಕುತ್ತಿದ್ದಾರೆಯೆ?

ಅಲ್ಲ, ಅಲ್ಲ! ನನಗೆ ನೆಗಡಿ ಹಿಡಿದಾಗ ಭಾಂಕರಿಸುವ ಸೀನುಗಳ ಲೆಕ್ಕ ಇದು! ಹೊರಗಿನ ಪ್ರಭುಗಳ ಆಗಮನ ನಿರ್ಗಮನ ಕಾಲಗಳಲ್ಲಿ ಮಾತ್ರ ಗುಂಡಿನ ಮರ್ಯಾದೆ ನಡೆಯುವುದು ಸಂಪ್ರದಾಯ. ಆದರೆ ಈ ನನ್ನ ಪಟ್ಟದ ದೊರೆಗೆ ಅಷ್ಟರಲ್ಲೇ ತೃಪ್ತಿಯಿಲ್ಲ; ಇಷ್ಟೇ ಗುಂಡುಗಳೆಂಬ ಕ್ಷುಪ್ತವೂ ಇಲ್ಲ, ಸ್ವೇಚ್ಛೆಯಾಗಿ ಸ್ವತಂತ್ರವಾಗಿ ಎಣಿಕೆಯನ್ನು ಅಣಿಕಿಸಿ ಸೀನುಗಳು ಹೊರಬಿದ್ದು ಮನೆತುಂಬ ಪ್ರತಿಧ್ವನಿಸುತ್ತವೆ. ನಾಭಿಯಿಂದ ನೆತ್ತಿಯವರೆಗೆ ಅಂಗಾಂಗಳನ್ನು ಅಲ್ಲಾಡಿಸುತ್ತವೆ. ಡೈನಮೈಟುಗಳು ಸಾಲಾಗಿ ಸಿಡಿದಾಗ ಬಂಡೆಗಳು ಬಿರಿದು ಮಣ್ಣೆಲ್ಲ ಎರಚಾಡಿ ಉತ್ಕಂಪಿಸುವ ಭೂಭಾಗದಂತೆ ನಾನಿದ್ದರೆ ನಮ್ಮ ಮನೆಮಂದಿಯೆಲ್ಲರೂ ಸೀನಿನ ತುಂತುರುಗಳು ಎಟುಕದಷ್ಟು ದೂರದಲ್ಲಿ ನಿಂತು ಸ್ವಲ್ಪವೂ ಅಂಜಿಕೆಯಿಲ್ಲದೆ ಉತ್ಸಾಹದಿಂದ ಸೀನುಗಳನ್ನು ಎಣಿಸಲು ತೊಡಗುತ್ತಾರೆ. ಈ ಸಲ ಇಷ್ಟೇ ಬರುತ್ತದೆ ಎಂದು – ನನಗೆ ತಿಳಿಯದಂತೆ – ಒಬ್ಬರೊಡನೊಬ್ಬರು ಪಂತಗಳನ್ನು ಕೂಡ ಕಟ್ಟುತ್ತಾರೋ ಏನೋ. ನನಗೆ ಮೈಕೈ ನೋವೆಂದರೆ ಆತಂಕ ಪಡುವ ಕೈ ಹಿಡಿದಾಕೆ ಕೂಡ ಈ ಪ್ರಸಂಗದಲ್ಲಿ ಮಿಕ್ಕವರ ಜೊತೆಗೇ ಸೇರಿಬಿಡುತ್ತಾಳೆ. ರೇಗಿ ಪ್ರಯೋಜನವಿಲ್ಲ, ಗಂಟಲು ಚೆನ್ನಾಗಿ ಕಟ್ಟಿಕೊಂಡಿರುವುದರಿಂದ ಗಟ್ಟಿಯಾಗಿ ಆರ್ಭಟಿಸಲು ಕೂಡ ಆಗುವುದಿಲ್ಲ. ಹೋಯಿತು – ಈ ನೆಗಡಿ ಸೀನುಗಳಿಂದ ದರ್ಪ ಹೋಯಿತು. ಗೌರವ ಹೋಯಿತು!

ಇಲ್ಲಿಯ ಪ್ರಬಂಧಗಳು ಲಲಿತ ಪ್ರಬಂಧಗಳಷ್ಟೇ ಆಗಿರದೆ ಅದರ ಜೊತೆಯಲ್ಲೇ ಅವರಿಗಿದ್ದ ಸಾಹಿತ್ಯಗಳ ಮತ್ತು ಶಾಸ್ತ್ರಗಳ ಆಳವಾದ ಪಾಂಡಿತ್ಯವೂ, ಜೀವನದ ಮೇಲಿನ ಕಾಳಜಿಯೂ, ಸುಸಂಸ್ಕೃತ ಮನಸ್ಸೂ ಹೊರಹೊಮ್ಮುತ್ತವೆ. ''ತಗುಣೆ'' ಪ್ರಬಂಧದ ಕೊನೆಯನ್ನು ನೋಡಿ.

ತಗುಣೆಯ ಮುಖದಂತೆ ಅದರ ಕನ್ನಡ ಹೆಸರಿನ ಕಾಗುಣಿತವೂ ಕ್ಲೇಶವಾಗಿದೆ. ''ತಗುಣೆ'', ''ತಿಗುಣೆ'' – ಈ ಎರಡೂ ರೂಪಗಳು ಹಳೆಯ ಗ್ರಂಥಗಳಲ್ಲಿ ದೊರೆಯುತ್ತವೆ. ಇವುಗಳ ಜೊತೆಗೆ ''ತಗಣಿ, ತಗಣೆ, ತಿಗಣೆ'–ಈ ರೂಪಗಳನ್ನು

ಕಿಪ್ಲಿಲ್ ಉಲ್ಲೇಖಿಸುತ್ತಾನೆ. ಇಷ್ಟೇ ಕಾಲದಂತೆ "ತಗುಣಿ" ಕೂಡ ಒಪ್ಪೊಪ್ಪು ಗೋಚರವಾಗುತ್ತದೆ. ಇವುಗಳಲ್ಲಿ ಸದ್ಯಕ್ಕೆ ನಾನು "ತಗುಣಿ"ಯನ್ನು ಪುರಸ್ಕರಿಸಿದ್ದೇನೆ. ಈ ಪ್ರಾಣಿಯ ಕಾಟವನ್ನು ಮಾನವಕುಲಕ್ಕೆ ಖಚಿತವಾಗಿ ತಪ್ಪಿಸುವ ಭರವಸೆಯನ್ನು ಯಾರಾದರೂ ಕೊಡುವುದಾದರೆ ಆ ಮಹನೀಯರು ವಿಧಿಸುವ ಕಾಗುಣಿತವನ್ನು ಒಪ್ಪಿಕೊಳ್ಳಲು ಸಿದ್ಧವಾಗಿದ್ದೇನೆ.

**ಬಿಡಿ ಮುತ್ತು** (ಮೊದಲ ಮುದ್ರಣ 1970): ಅಮರು ಶತಕ ಮತ್ತು ಇತರ ಕೆಲವು ಪ್ರಸಿದ್ಧ ಸಂಸ್ಕೃತ ಸುಭಾಷಿತ ಸಂಕಲನಗಳಿಂದಲೂ ಕಾವ್ಯ ನಾಟಕಗಳಿಂದಲೂ ಆರಿಸಿದ 215 ಮುಕ್ತಕಗಳ ಕನ್ನಡ ಅನುವಾದ ಈ ಸಂಕಲನ. ತೀನಂಶ್ರೀಯವರು ಕಾಲಕಾಲಕ್ಕೆ ಸಂಗ್ರಹಿಸಿ ಅನುವಾದ ಮಾಡಿಟ್ಟುಕೊಂಡ ಪದ್ಯಗಳು ಇಲ್ಲಿವೆ. ಆದರೆ ತೀನಂಶ್ರೀಯವರು ಜೀವಿತಕಾಲದಲ್ಲಿ ಅವರ ಪರಿಪೂರ್ಣತೆಯ ಅನ್ವೇಷಣೆಯ ಕೋಟೆಯನ್ನು ಭೇದಿಸಲಾಗದೆ, ಇದರ ಪ್ರಕಟಣೆಗಾಗಿ ಅವರ ಒಪ್ಪಿಗೆಗಾಗಿ ಕಾದಿದ್ದ ಈ ಸಂಕಲನ ಬೆಳಕು ಕಂಡಿದ್ದು ತೀನಂಶ್ರೀಯವರು ನಿಧನರಾದ ನಾಲ್ಕು ವರ್ಷಗಳ ನಂತರವೇ!

ಹೆಣ್ಣು, ಸಂತಾನಭಾಗ್ಯ, ಋತುಸೌಂದರ್ಯ, ದಾರಿದ್ರ್ಯ, ವಿಡಂಬನ ಪ್ರೇಯಸಿ, ಮಾನಿನಿ, ಭಕ್ತಿ ವಿದ್ವತ್ತು ಮುಂತಾದ ವಿಷಯ ವೈವಿಧ್ಯದಿಂದ ಕೂಡಿದ 42 ಶೀರ್ಷಿಕೆಗಳಡಿಯಲ್ಲಿ ಅಚ್ಚಾಗಿರುವ ಈ ಸುಂದರ ಸುಭಾಷಿತಗಳು ಕನ್ನಡಕ್ಕೆ ತೀನಂಶ್ರೀಯವರ ಒಂದು ವಿಶೇಷ ಕೊಡುಗೆ. ನವದಂಪತಿಗಳಿಗೆ ಅವರ ವಿವಾಹದ ಸಂದರ್ಭದಲ್ಲಿ ಕೊಡಬಹುದಾದ ಒಂದು ಸೂಕ್ತವಾದ ಉಡುಗೊರೆ ಈ 'ಬಿಡಿಮುತ್ತು' ಎಂದು ತೀನಂಶ್ರೀಯವರು ಭಾವಿಸಿದ್ದರು.

'ಮೂದಲಿಕೆ' ಶೀರ್ಷಿಕೆಯಲ್ಲಿರುವ ಈ ಅನುವಾದವನ್ನು ನೋಡಿ:

*'ಬಾಲೆ'! 'ಏನದು ನಾಥ?' 'ಮುನಿಸ ತೊರೆ ಮಾನಿನಿ!'*
*'ಮುನಿದು ಮಾಡಿರುವುದೇನು?'*

*'ಎದೆಬೇಗೆ ನಮ್ಮಲ್ಲಿ' 'ತಮ್ಮ ತಪ್ಪೇನಿಲ್ಲ*
*ತಪ್ಪೆಲ್ಲವೂ ನನ್ನದು'*

*'ಅಂತಿರಲು ನುಡಿವಾಗ ಬಿಕ್ಕಳಿಸುತೇಕಳುವೆ?'*
*'ಆರ ಮುಂದಳುತಿರುವುದು?*

*'ನನ್ನ ಮುಂದಿದೊ!' 'ನಿನಗೆ ನಾನಾರು?' 'ನಲ್ಲೆ.' 'ನಾ*
*ನಲ್ಲವೆಂದಳುತಿರುವುದು!'*

'ವಿಡಂಬನ' ಶೀರ್ಷಿಕೆಯಡಿ ಇನ್ನೊಂದು ಅನುವಾದ ನೋಡಿ:

ಉರಿವ ಚಿತೆಯನು ಕಂಡು
ಬೆರಗುಗೊಂಡನು ವೃದ್ಧ:
'ನಾನು ಹೋಗಿರಲಿಲ್ಲ
ಅಣ್ಣನೂ ಇರಲಿಲ್ಲ –
ಇದು ಯಾರ ಕೈಯ ಚಳಕ!'

**ರಾಕ್ಷಸನ ಮುದ್ರಿಕೆ** (ಮೊದಲ ಮುದ್ರಣ 1942): ಇದು ವಿಶಾಖದತ್ತನ ಪ್ರಸಿದ್ಧವಾದ ಸಂಸ್ಕೃತ ನಾಟಕ ''ಮುದ್ರಾರಾಕ್ಷಸ''ದ ರೂಪಾಂತರ. ಮೂಲದ ಯಥಾವತ್ತಾದ ಅನುವಾದ ಹಿಂದೆ ಬಂದಿತ್ತಾದರೂ, ಹೊಸ ರಂಗಭೂಮಿಯ ಮೇಲೆ ಪ್ರದರ್ಶಿಸುವುದಕ್ಕೆ ಯೋಗ್ಯವಾಗುವಂತೆ ತಮ್ಮ ಪ್ರಿಯಗುರುಗಳಾದ ಪ್ರೊ. ಟಿ.ಎಸ್. ವೆಂಕಣ್ಣಯ್ಯನವರ ಸಲಹೆಯಂತೆ ತೀನಂಶ್ರೀಯವರು ಇದನ್ನು ಕನ್ನಡಕ್ಕೆ ರೂಪಾಂತರಿಸಿದರು. 'ಮುದ್ರಾರಾಕ್ಷಸ' ಸಂಸ್ಕೃತ ಸಾಹಿತ್ಯದಲ್ಲಿ ಒಂದು ಗಂಡು ನಾಟಕ. ಕಥಾ ನಾಯಕಿಯ ಅಥವಾ ಶೃಂಗಾರರಸದ ನೆರವಿಲ್ಲದೆ ರಚಿತವಾದ ಏಕೈಕ ಪ್ರಸಿದ್ಧ ನಾಟಕ ಎನ್ನುವುದರ ಜೊತೆಗೆ ಐತಿಹಾಸಿಕವೆನ್ನಬಹುದಾದ ರಾಜಕೀಯ ವಿದ್ಯಮಾನಗಳನ್ನು ಅವಲಂಬಿಸಿ ಕಟ್ಟಿದ ಕಥೆ ಇದರ ವಸ್ತು. ರಾಜಕೀಯ ಕುಟಿಲತೆಯ ನಡುವೆಯೂ ಅಕುಟಿಲ, ಸ್ನೇಹದ ಮೌಲ್ಯವನ್ನು ಎತ್ತಿ ಹಿಡಿಯುವ 'ಮೈತ್ರಿಯ ವಿಜಯ' ಎನ್ನಬಹುದಾದ ಈ ಕೃತಿ ವಿಶೇಷ ರೀತಿಯ ವೀರ ರಸವನ್ನು ಪ್ರತಿಪಾದಿಸುತ್ತದೆ. ವಿಪುಲವಾದ ಸಂಸ್ಕೃತ ನಾಟಕ ಸಾಹಿತ್ಯದಿಂದ ತೀನಂಶ್ರೀಯವರು ಅನುವಾದಕ್ಕೆ ಇದನ್ನೇ ಆಯ್ಕೆ ಮಾಡಿಕೊಂಡಿದ್ದರಲ್ಲಿ, ಅನುವಾದಿತ ಪದ್ಯ ಗದ್ಯ ಭಾಗಗಳ ಸಹಜ ಮನೋಹರತೆಗಳಲ್ಲಿ ಅವರ ಸದಭಿರುಚಿಯನ್ನು ವಿದಗ್ಧತೆಯನ್ನು ಕಾಣಬಹುದು.

## ಶಾಸ್ತ್ರ ಸಾಹಿತ್ಯ

**ಕನ್ನಡ ಮಧ್ಯಮ ವ್ಯಾಕರಣ** (ಮೊದಲ ಮುದ್ರಣ 1939): ಸುಮಾರು 182 ಪುಟಗಳ ಈ ಗ್ರಂಥ ಹೊಸಗನ್ನಡ ಭಾಷೆಯ ಅಭ್ಯಾಸ ಮತ್ತು ಬೆಳವಣಿಗೆಗೆ ಪೂರಕವಾಗಿ ಉದ್ದೇಶಿಸಿ ರಚಿತವಾದ ವ್ಯಾಕರಣ ಗ್ರಂಥಗಳಲ್ಲಿ ಅತ್ಯಂತ ಜನಪ್ರಿಯವಾದ ಪುಸ್ತಕ. ಮೈಸೂರು ಸರ್ಕಾರದವರು ತೀನಂಶ್ರೀಯವರಿಂದ ವಿಶೇಷವಾಗಿ ಬರೆಸಿದ ಈ ಪುಸ್ತಕ ಸುಮಾರು 20–25 ವರ್ಷಗಳ ಕಾಲ ರಾಜ್ಯದಾದ್ಯಂತ ಮಾಧ್ಯಮಿಕ ಶಾಲೆಗಳಲ್ಲಿ ಪಠ್ಯಪುಸ್ತಕವಾಗಿ ನಿಯಮಿತವಾಗಿತ್ತು

ಸುಮಾರು ದಶಲಕ್ಷ ಪ್ರತಿಗಳು ಮುದ್ರಣವಾಗಿರಬಹುದಾದ ಈ ಪುಸ್ತಕವನ್ನು ಅಧ್ಯಯನ ಮಾಡದಿರುವ ಆ ಕಾಲದ ಮಾಧ್ಯಮಿಕ ಶಾಲೆಯ ವಿದ್ಯಾರ್ಥಿಯೇ ಇಲ್ಲವೆನ್ನಬಹುದು. (ಇದಕ್ಕಾಗಿ ತೀನಂಶ್ರೀಯವರಿಗೆ ಸರ್ಕಾರ ಒಂದು ಸಾರಿ ಮಾತ್ರಕೊಟ್ಟ ಸಂಭಾವನೆ ಕೇವಲ ಮುನ್ನೂರು ರೂಪಾಯಿ ಎನ್ನುವುದು ಬೇರೆ ಮಾತು! ಇಷ್ಟು ಪ್ರತಿಗಳು ಮಾರಾಟವಾದರೂ "ನಿಮಗೆ ಯಾವ ಸಂಭಾವನೆಯೂ ಬರುತ್ತಿಲ್ಲವಲ್ಲ?" ಎಂದು ಯಾರಾದರೂ ತೀನಂಶ್ರೀಯವರನ್ನು ಕೇಳಿದರೆ "ಸರ್ಕಾರ ಒತ್ತಾಯ ಮಾಡದಿದ್ದರೆ ನಾನು ಈ ಪುಸ್ತಕವನ್ನೇ ಬರೆಯುತ್ತಿರಲಿಲ್ಲವಲ್ಲ!" ಎಂದು ಹೇಳಿ ಎಲ್ಲರೊಡನೆ ತಾವೂ ನಗುತ್ತಿದ್ದರು!) ಇದರ ಜನಪ್ರಿಯತೆಗೆ ಕಾರಣ ಈ ಗ್ರಂಥದ ಹಿನ್ನೆಲೆಗಿದ್ದ ಭಾಷಾಶಾಸ್ತ್ರೀಯ ದೃಷ್ಟಿ. ವ್ಯಾಕರಣ ಗ್ರಂಥದಲ್ಲಿ ಸೂತ್ರಗಳಿಗಿಂತ ಹೆಚ್ಚಾಗಿ ವಿವರಣೆಗಳು, ವಿವರಣೆಗಿಂದ ಹೆಚ್ಚಾಗಿ ಉದಾಹರಣೆಗಳು ಬಂದರೆ ವಿದ್ಯಾರ್ಥಿಗಳಿಗೆ ಕ್ಲೇಶ ಕಡಿಮೆಯಾಗಿ ಆಸಕ್ತಿ ಹೆಚ್ಚಾಗುತ್ತದೆ ಎಂಬ ಆದರ್ಶವನ್ನಿಟ್ಟುಕೊಂಡು ಉದಾಹರಣೆಯ ವಾಕ್ಯಗಳಲ್ಲಿ ಸ್ವಾರಸ್ಯ ವೈವಿಧ್ಯಗಳನ್ನು ಕಾಯ್ದುಕೊಂಡು ಬರೆದಂಥ ವ್ಯಾಕರಣ ಇದು. ಇದಕ್ಕಾಗಿ ತೀನಂಶ್ರೀ ಇದರಲ್ಲಿನ ಸಾವಿರಾರು ಉದಾಹರಣೆಗಳನ್ನು ಸಂಯೋಜಿಸಿದರು. ಈ ಪುಸ್ತಕಕ್ಕೆ ಈಗಲೂ ಬೇಡಿಕೆ ಇದೆ. ಈ ಮಧ್ಯಮ ವ್ಯಾಕರಣವನ್ನು ಪದವಿ ಮತ್ತು ಸ್ನಾತಕೋತ್ತರ ಕನ್ನಡ ಸಾಹಿತ್ಯ ವಿದ್ಯಾರ್ಥಿಗಳು ಈಗಲೂ ಪರಾಮರ್ಶನ ಗ್ರಂಥವಾಗಿ ಅಭ್ಯಾಸಮಾಡುತ್ತಾರೆಂದರೆ ಇದರಲ್ಲಿ ವ್ಯಾಕರಣದಂತಹ ಕ್ಲೇಶಕರವಾದ ವಿಷಯ ಎಷ್ಟು ಸರಳವಾಗಿಯೂ ಮತ್ತು ಅಷ್ಟೇ ಪ್ರೌಢವಾಗಿಯೂ ವಿಶ್ಲೇಷಣೆಗೊಳಗಾಗಿದೆಯೆನ್ನುವುದು ಮನದಟ್ಟಾಗುತ್ತದೆ.

**ಭಾರತೀಯ ಕಾವ್ಯಮೀಮಾಂಸೆ** (ಮೊದಲ ಮುದ್ರಣ 1953): ಇದನ್ನು ತೀನಂಶ್ರೀಯವರು ತಮ್ಮ 35ನೆಯ ವಯಸ್ಸಿನಲ್ಲಿ 1942ರಲ್ಲಿ ಬರೆದು ಮುಗಿಸಿದ್ದರು. ದ್ವಿತೀಯ ಮಹಾಯುದ್ಧದ ಬಿಸಿ ಈ ಗ್ರಂಥಕ್ಕೂ ತಟ್ಟಿ. ಅಚ್ಚಿನ ಮನೆಯಲ್ಲಿ ಹನ್ನೊಂದು ವರ್ಷಗಳ ಸೆರೆಮನೆವಾಸವನ್ನು ಅನುಭವಿಸಿ 1953ರಲ್ಲಿ ಪ್ರಕಟವಾಯಿತು. ಶಾಸ್ತ್ರಗಳ ಅಭ್ಯಾಸಕ್ಕೆ ತೀನಂಶ್ರೀಯವರು ಕೊಟ್ಟ ಅಪೂರ್ವ ಸಾರ್ಥಕ ಕೊಡುಗೆ ಇದು. ಕನ್ನಡ ಸಾರಸ್ವತ ಲೋಕದಲ್ಲಿ ಚಿರಕಾಲ ಉಳಿಯುವ ಅದ್ವಿತೀಯ ಕೃತಿ. ಈ ಕೃತಿಯಿಂದಾಗಿ ತೀನಂಶ್ರೀ ಮತ್ತು ಭಾರತೀಯ ಕಾವ್ಯ ಮೀಮಾಂಸೆ ಪರ್ಯಾಯ ಪದಗಳಾದವು. ರಾಷ್ಟ್ರಕವಿ ಕುವೆಂಪು ಅವರು ಈ ಗ್ರಂಥದ ಮುನ್ನುಡಿಯಲ್ಲಿ "ಮುಂಬರಲಿರುವ ಕನ್ನಡ ಕಾವ್ಯಮಿಮಾಂಸೆಯ ಮತ್ತು ಸಾಹಿತ್ಯ ವಿಮರ್ಶೆಯ ಸಾಹಸಕ್ಕೆ ಶ್ರೀಮಾನ್ ಶ್ರೀಕಂಠಯ್ಯನವರು

ಸುಸಮೃದ್ಧವೂ ಮಾರ್ಗದರ್ಶಕವೂ ಆಗಿರುವ ಒಂದು ಆಚಾರ್ಯ ಕೃತಿಯನ್ನು ಒದಗಿಸಿದ್ದಾರೆ'' ಎಂದು ತಿಳಿಸಿದ್ದಾರೆ. ಇನ್ನೊಬ್ಬ ರಾಷ್ಟ್ರಕವಿ ಗೋವಿಂದ ಪೈ ಅವರು "In one word it is a superb work. There cannot be two opinions about it. The word "superb" must be written on the bottom of every page." ಎಂದು ತಿಳಿಸಿದ್ದಾರೆ. ಪ್ರಸಿದ್ಧ ವಿದ್ವಾಂಸರಾದ ಪ್ರೊ|| ಡಿ.ಎಲ್. ನರಸಿಂಹಾಚಾರ್ ಅವರು "No Indian language has a book that can even distantly approach ಭಾರತೀಯರ ಕಾವ್ಯಮೀಮಾಂಸೆ'' ಎಂದಿರುವ ಮಾತು ಉತ್ಪ್ರೇಕ್ಷೆಯಲ್ಲ. ಕನ್ನಡ ಸಾಹಿತ್ಯವನ್ನು ನಾಡು, ದೇಶ ಮತ್ತು ವಿಶ್ವದ ಯಾವುದೇ ಭಾಗದಲ್ಲಿ ವ್ಯಾಸಂಗ ಮಾಡಿದ ವ್ಯಕ್ತಿ ಈ ''ಭಾರತೀಯ ಕಾವ್ಯಮೀಮಾಂಸೆ'' ಗ್ರಂಥವನ್ನು ಅಧ್ಯಯನ ಮಾಡದೆ ಆ ವ್ಯಾಸಂಗ ಪರಿಪೂರ್ಣವಾಗಿರುವುದಿಲ್ಲ. ಸಂಸ್ಕೃತ ಸಾಹಿತ್ಯದ ವಿದ್ಯಾರ್ಥಿಗಳು ಇದನ್ನೇ ಪರಮಾರ್ಶನ ಗ್ರಂಥವಾಗಿ ಅಧ್ಯಯನ ಮಾಡುತ್ತಾರೆ. 60 ವರ್ಷಗಳ ನಂತರ ಇಂದಿಗೂ ಇದು ಪರಾಮರ್ಶನ ಗ್ರಂಥವಾಗಿ ನಿಯಮಿತವಾಗಿದೆ.

ಸುಮಾರು 475 ಪುಟಗಳ ಈ ಗ್ರಂಥ ಭಾರತೀಯ ಕಾವ್ಯ ಲಕ್ಷಣ ಗ್ರಂಥಗಳ ಪರಂಪರೆಯನ್ನು ಸಾವಿರ ಪುಟಗಳಲ್ಲಿ ಹೇಳಲಾರದಷ್ಟು ಸಮಗ್ರವಾಗಿ ಪರಿಚಯ ಮಾಡಿಕೊಡುತ್ತದೆ. ತೌಲನಿಕ ಕಾವ್ಯಮೀಮಾಂಸೆ ಶಾಸ್ತ್ರಕ್ಕೆ ಭರತಖಂಡದ ಕೊಡುಗೆ ರಸ–ಧ್ವನಿ–ಔಚಿತ್ಯ ತತ್ವಗಳು. ಇವುಗಳ ಸಾರವನ್ನು ವಿಸ್ತಾರವಾಗಿ ಪ್ರತಿಪಾದಿಸುವ ಆಧುನಿಕ ಗ್ರಂಥ ಕನ್ನಡದಲ್ಲಿರಲಿಲ್ಲ. ಈ ಕೊರತೆಯನ್ನು ತೀನಂಶ್ರೀಯವರ ಗ್ರಂಥ ತುಂಬಿತು. ಇದು ಹೊರಬಂದ ಕಾಲಕ್ಕೆ ಇಂಗ್ಲಿಷ್ ಭಾಷೆಯಲ್ಲಿ ಕೂಡ ಈ ವಿಷಯವನ್ನು ಕುರಿತ ಒಂದು ಸಮಗ್ರ ಕೃತಿ ಇರಲಿಲ್ಲವೆಂದು ಇಲ್ಲಿ ಬಳಸಿಕೊಂಡಿರುವ ಪರಾಮರ್ಶನ ಗ್ರಂಥಗಳ ಪಟ್ಟಿಯಿಂದಲೇ ತಿಳಿಯುತ್ತದೆ. ಗ್ರಂಥದ ಮನೋಹರತೆಯನ್ನು ಹೆಚ್ಚಿಸಿರುವ ಇನ್ನೊಂದು ವಿಶೇಷವೆಂದರೆ ಇದನ್ನು ಓದಿ ಮುಗಿಸಿದಾಗ ಭಾರತೀಯ ಕಾವ್ಯಮೀಮಾಂಸೆಯ ಪರಿಚಯವಾದ ಅನುಭವದ ಜೊತೆಗೆ ಕನ್ನಡ ಸಾಹಿತ್ಯವನ್ನು ದಿಗ್ದರ್ಶನಮಾಡಿದ ಅನುಭವವಾಗುತ್ತದೆ. ಏಕೆಂದರೆ ಇಲ್ಲಿ ಬರುವ ಅನೇಕ ಕಾವ್ಯ ಲಕ್ಷಣಗಳಿಗೆ ಲಕ್ಷ್ಯವಾಗಿ ಅಲ್ಲಿಯವರೆಗೆ ಬಂದಿರುವ ಕನ್ನಡ ಶ್ರೇಷ್ಠ ಕಾವ್ಯಗಳಿಂದ (ಪ್ರಾಚೀನ, ಆಧುನಿಕ, ಜನಪದ ಎಲ್ಲವೂ ಇಲ್ಲಿ ಸೇರಿವೆ) ಅನರ್ಘ್ಯವಾದ ರಸಬಿಂದುಗಳನ್ನು ಕೊಟ್ಟಿದ್ದಾರೆ. ಈ ಗ್ರಂಥವನ್ನು ಕಾದಂಬರಿಯಂತೆ ಓದಿ ಸವಿದಿದ್ದೇನೆ ಎಂದು

ಕುವೆಂಪು ಒಮ್ಮೆ ಹೇಳಿದ್ದರಂತೆ! ತೀನಂಶ್ರೀಯವರ ಕೃತಿಗಳಲ್ಲಿ ಇದೇ ಅವರ magnum opus ಆಗಿರುವ ಗ್ರಂಥ.

ವಾಚ್ಯಾರ್ಥಕ್ಕೆ ಮೀರಿದ, ಅದಕ್ಕೆ ಎಷ್ಟೋ ಮಿಗಿಲಾಗಿ ಮನೋಹರವಾದ, ಬೇರೊಂದು ಅರ್ಥವು ಶಬ್ದದ ವ್ಯಂಜನಾವೃತ್ತಿಯ ಮೂಲಕ ಸ್ಫುರಿಸುತ್ತದೆ ಎನ್ನುವುದಕ್ಕೆ ತೀನಂಶ್ರೀಯವರು ಕೊಡುವ ಉದಾಹರಣೆ ಮತ್ತು ವ್ಯಾಖ್ಯಾನವನ್ನು ನೋಡಿ. ಇದು ಮೂಲಕ್ಕಿಂತ ಎಷ್ಟು ಪರಿಣಾಮಕಾರಿಯಾಗಿದೆ, ಎಷ್ಟು ಧ್ವನಿಪೂರ್ಣವಾಗಿದೆ ಎಂದು ವಿವರಿಸುವುದು ಅನಗತ್ಯ.

''ಪಂಪ ಭಾರತ''ದಲ್ಲಿ ಭೀಷ್ಮನಿಗೆ ಸೇನಾಧಿಪತಿ ಪಟ್ಟವನ್ನು ಕಟ್ಟಿದ ಸಂದರ್ಭದಲ್ಲಿ ಈ ಮುಪ್ಪಿನ ಮುದುಕನು ಎಂತು ಕಾದಾಡಿಯಾನು ಎಂಬ ತಿರಸ್ಕಾರಭಾವದಿಂದಲೂ ಸಮರ್ಥನಾದ ತನಗೆ ಪಟ್ಟಕಟ್ಟಲಿಲ್ಲವೆಂಬ ಅಸಮಾಧಾನದಿಂದಲೂ ಕರ್ಣನು ಆಕ್ಷೇಪಿಸುತ್ತಾನೆ. ಮಾತು ಬಿರುಸಾಗಿ ಬೆಳೆಯುತ್ತದೆ. ದ್ರೋಣನು ತನ್ನ ಕುಲವನ್ನು ಅಲ್ಲಗಳೆದನೆಂದು ರೇಗಿ, ಭೀಷ್ಮನು ಬಿದ್ದ ಹೊರತು ತಾನು ಬಿಲ್ಲನ್ನು ಹಿಡಿಯುವುದಿಲ್ಲವೆನ್ನುವಷ್ಟು ದೂರ ಹೋಗುತ್ತಾನೆ. ಆಗ ಭೀಷ್ಮನು ''ನಿನ್ನ ಶಕ್ತಿ ಯೌವನಾದಿಗಳು ನನಗಿಲ್ಲ, ನಿಜ; ಕರ್ಣ, ಇದು ಭಾರತಯುದ್ಧ; ಎದುರಾಳು ಅರ್ಜುನ. ಇಷ್ಟೊಂದೇಕೆ ಹಾರಾಡುವೆಯಣ್ಣ! ಸೂಟ್ಟೆಡೆಯಲಪ್ಪುದು ಕಾಣ ಮಹಾಜಿರಂಗದೊಳ್'' ಎನ್ನುತ್ತಾನೆ. ಸೂಟ್ ಎಂದರೆ ಸರದಿ ಎಂದು ಅರ್ಥ. ''ಈ ಮಹಾಭಾರತದಲ್ಲಿ ನಿನಗೆ ಸರದಿ ದೊರೆಯುವುದು ಕಾಣಯ್ಯ'' ಎಂದು ಭರವಸೆ ಹೇಳಿದಷ್ಟಕ್ಕೆ ಇಲ್ಲಿಯ ವಾಚ್ಯಾರ್ಥ ಮುಗಿಯಿತು. ಆದರೆ ಭೀಷ್ಮನ ಮನಸ್ಸಿನಲ್ಲಿದ್ದ ಎಲ್ಲ ಅರ್ಥವೂ ಮುಗಿಯಲಿಲ್ಲ. ಇಲ್ಲಿ ಸೂಟ್ ಎಂಬ ಪದ ಪ್ರಯೋಗದಿಂದ ಹೊರಡುವ ಅರ್ಥ ಸ್ವಾರಸ್ಯವನ್ನೆಲ್ಲ ಗಮನಿಸಿ. ಈ ಸಮರದಲ್ಲಿ ಅರ್ಜುನನನ್ನು ಎದುರಿಸಿ ನಿಲ್ಲುವ ಕೌರವ ಪಕ್ಷದ ವೀರರಿಗೆಲ್ಲ ದೊರೆಯುವುದು ಪಟ್ಟಕಟ್ಟಿಸಿಕೊಳ್ಳುವ ಸರದಿಯೇ ಹೊರತು ವಿಜಯವೆಂದಿಗೂ ಅಲ್ಲ. ಭೀಷ್ಮನ ಸರದಿ ಮೊದಲು ಬಂದಿತು. ಅವನು ಬಿದ್ದ ಮೇಲೆ ಮತ್ತೊಬ್ಬನದು, ಬಳಿಕ ಕರ್ಣನ ಸರದಿ. ಆದರೆ ಕರ್ಣನಿಗೂ ಸರದಿ ಮಾತ್ರವೇ. ಯುದ್ಧ ಅಲ್ಲಿಗೂ ನಿಲ್ಲದೆ ಕರ್ಣನ ಅನಂತರವೂ ಮುಂದೆ ಸಾಗುತ್ತದೆ....! ಇಲ್ಲಿ ಸನ್ನಿವೇಶದಿಂದ ಸೂಟ್ ಎಂಬ ಪದವು ವ್ಯಂಜನಾವೃತ್ತಿಯ ಮೂಲಕ ಎಷ್ಟೊಂದು ಅರ್ಥವನ್ನು ನಮಗೆ ಅರಿವು ಮಾಡಿಕೊಡಬಲ್ಲದು!

'ಧ್ವನಿಪ್ರಭೇದಗಳು' ಪ್ರಕರಣದಲ್ಲಿ ತೀನಂಶ್ರೀಯವರ ಇನ್ನೊಂದು ಉದಾಹರಣೆಯನ್ನು ನೋಡಿ.

ಅಂಬಿಕಾತನಯದತ್ತ (ದ.ರಾ. ಬೇಂದ್ರೆ)ರ 'ಮೂವತ್ತು ಮೂರು ಕೋಟಿ' ಎಂಬ ಕವನದಲ್ಲಿ, ಭರತಮಾತೆ ಕೆಲಸಕ್ಕೆ ಬಾರದ ಕೋಟ್ಯಂತರ ಮಕ್ಕಳನ್ನು ಹಡೆದ ತನ್ನ ದುಃಖವನ್ನು ತೋಡಿಕೊಳ್ಳುತ್ತಾ ಹೀಗೆ ಹೇಳುತ್ತಾಳೆ:

*ಮೂವತ್ತು ಮೂರು ಕೋಟಿ ಮೂವತ್ತು ಮೂರು ಕೋಟಿ!*
*ಬಯಕೆಗಳು ಬಸಿರುಗಳು ಹಡೆದದ್ದು ಹಿಂಗಿದ್ದು*
*ಮೂವತ್ತು ಮೂರು ಕೋಟಿ !*
*ಸೂಲಗಳು*
*ಮೂವತ್ತು ಮೂರು ಕೋಟಿ !!*

ಇಲ್ಲಿ "ಸೂಲಗಳು" ಎಂಬ ಶಬ್ದವನ್ನು ಗಮನಿಸಿ. ಇದು ಹೆತ್ತ ತಾಯಿಯ ಮಾತಾಗಿರುವುದರಿಂದಲೂ ಬಯಕೆ, ಬಸಿರು ಮೊದಲಾದವುಗಳ ಸಾಹಚರ್ಯವಿರುವುದರಿಂದಲೂ, "ಸೂಲಗಳು" ಎಂಬುದಕ್ಕೆ "ಹೆರಿಗೆಗಳು" ಎಂದು ಥಟ್ಟನೆ ಅರ್ಥವಾಗುತ್ತದೆ. ಮೂವತ್ತು ಮೂರು ಕೋಟಿ ಮಕ್ಕಳನ್ನು ನಾನು ಹೆತ್ತೆನು ಎಂಬುದೇ ಇಲ್ಲಿಯ ವಾಚ್ಯಾರ್ಥ. ಹೀಗೆ ಪ್ರಕರಣ ಬಲದಿಂದ ಶಬ್ದದ ವಾಚ್ಯಾರ್ಥವು ನಿಯಂತ್ರಿತವಾದ ಬಳಿಕ ಸೂಲಗಳು ಎಂಬ ಶಬ್ದಕ್ಕಿರುವ ಇನ್ನೊಂದು ಅರ್ಥ "ಶೂಲಗಳು" ಎಂಬ ಅರ್ಥ – ಸ್ಫುರಿಸುತ್ತದೆ; ಆದರೆ ಅಲ್ಲಿಗೇ ಅದು ನಿಂತಿದ್ದರೆ ಸಂದರ್ಭಕ್ಕೆ ಅಸಂಬದ್ಧವಾಗುತ್ತಿತ್ತು. ಇದನ್ನು ತಪ್ಪಿಸಲು "ಹೆರಿಗೆಗಳು" ಎಂಬ ವಾಚ್ಯಾರ್ಥಕ್ಕೂ "ಸೂಲಗಳು" ಎಂಬುದಕ್ಕೂ ಇಲ್ಲಿ ಸಾದೃಶ್ಯ ಸಂಬಂಧವು ಏರ್ಪಟ್ಟು, ಈ ಮೂವತ್ತು ಮೂರು ಕೋಟಿ ಹೆರಿಗೆಗಳು ಹೆತ್ತ ತಾಯಿಯನ್ನು ಇರಿಯುವ ಮೂವತ್ತು ಮೂರು ಕೋಟಿ ಶೂಲಗಳು ಎಂಬ ರೂಪಾಲಂಕಾರ ಧ್ವನಿ ಇಲ್ಲಿ ಪ್ರತೀತವಾಗುತ್ತದೆ. ಇದು ಪದ್ಯದ ವಿಷಯಕ್ಕೆ ಎಷ್ಟು ಚೆನ್ನಾಗಿ ಹೊಂದುತ್ತದೆ. ಮನಸ್ಸು ಇದರ ಭಾವನೆಯಲ್ಲೇ ಹೇಗೆ ಮಗ್ನವಾಗುತ್ತದೆ ಎಂಬುದನ್ನು ಭಾವುಕರು ಬಲ್ಲರು.

ಈ ಗ್ರಂಥಕ್ಕೆ ತಕ್ಕ ಪುರಸ್ಕಾರ ತೀನಂಶ್ರೀಯವರ ಜೀವಿತ ಕಾಲದಲ್ಲಿ ಬರಲಿಲ್ಲ. ತೀನಂಶ್ರೀಯವರ ನಿಧನದ ಸುಮಾರು 25 ವರ್ಷಗಳ ನಂತರ 1990ರಲ್ಲಿ ಇದಕ್ಕೆ ಕರ್ನಾಟಕ ಸರ್ಕಾರದ 'ಪಂಪ ಪ್ರಶಸ್ತಿ' ದೊರೆಯಿತು. ಪ್ರಶಸ್ತಿ ಪೀಠಿಕೆಯಲ್ಲಿ ಹೀಗೆ ಹೇಳಲಾಗಿದೆ:

........

ಬಹುಶ್ರುತ ಪಾಂಡಿತ್ಯ, ಸೌಜನ್ಯಪೂರ್ಣ ಮನಸ್ಸು, ವಿಷಯಾಂತರಾಳಗಳನ್ನು ಒಳಹೊಕ್ಕು ರಸಗ್ರಹಣ ಹಾಗೂ ಸತ್ಯದರ್ಶನ ಮಾಡಬಲ್ಲ ಸಹೃದಯನ ವಿಮರ್ಶನ

ಪ್ರಜ್ಞೆ, ಸಂಶೋಧನ ಸಮತೂಕ, ಅತ್ಯಂತ ಆಳವಾಗಿ, ಅಚ್ಚುಕಟ್ಟಾಗಿ ಮತ್ತು ನಿಶ್ಚಿತವಾಗಿ ವಿಷಯ ನಿರೂಪಣೆ ಮಾಡಬಲ್ಲ ಸಾಮರ್ಥ್ಯ – ಈ ಸಮಗ್ರ ಲಕ್ಷಣಗಳಿಂದ ಕೂಡಿದ ತೀ.ನಂ.ಶ್ರೀಕಂಠಯ್ಯನವರು ಮಾತಿನಲ್ಲಾಗಲೀ, ಬರಹದಲ್ಲಾಗಲೀ ಅಪೂರ್ವವಾದ ಸಂಯಮವನ್ನು ಸಾಧಿಸಿಕೊಂಡವರು. ಕನ್ನಡದ ಮೊದಲ ಮಹಾಕವಿಯಾದ ಪಂಪ ತನ್ನನ್ನು 'ಹಿತಮಿತ ಮೃದು ವಚನ' ಎಂದು ಕರೆದುಕೊಂಡಿದ್ದಾನೆ. ಪಂಪನ ಈ ಮಾತಿಗೆ ನವೋದಯ ಸಾಹಿತ್ಯ ಸಂದರ್ಭದಲ್ಲಿ ನಿದರ್ಶನವಾಗಬಲ್ಲವರು ಯಾರಾದರೂ ಇದ್ದರೆ ಅವರು ಬಹುಶಃ ಶ್ರೀ|| ತೀ.ನಂ.ಶ್ರೀಕಂಠಯ್ಯನವರು ಮಾತ್ರವೇ ಎಂದು ಧಾರಾಳವಾಗಿ ಹೇಳಬಹುದು.

ಇದೀಗ ಕರ್ನಾಟಕ ಸರ್ಕಾರದ ಪಂಪ ಪ್ರಶಸ್ತಿಯ ಗೌರವಕ್ಕೆ ಅರ್ಹವಾಗಿರುವ "ಭಾರತೀಯ ಕಾವ್ಯಮೀಮಾಂಸೆ" ತೀ.ನಂ.ಶ್ರೀಕಂಠಯ್ಯನವರ ಸಾಹಿತ್ಯ ಹಾಗೂ ವಿದ್ವತ್ತಿನ ಶಿಖರವಾಗಿದೆ.

........

ಭಾರತದ ಬೇರೆ ಯಾವ ಭಾಷೆಯಲ್ಲೂ ಇಂಥ ಕೃತಿ ಬಂದಿಲ್ಲ. ತೀ.ನಂ.ಶ್ರೀ. ಅವರ ಸಾಹಿತ್ಯೋಪಾಸನೆಯ ಪಕ್ವಫಲ. ಈ ಕೃತಿ 'ಪಂಪ ಪ್ರಶಸ್ತಿ'ಗೆ ಎಲ್ಲ ದೃಷ್ಟಿಯಿಂದಲೂ ಅರ್ಹ.

## ಸಂಪಾದನೆ

**ಹೆಣ್ಣುಮಕ್ಕಳ ಪದಗಳು** (ಮೊದಲ ಮುದ್ರಣ 1941): ಇಲ್ಲಿ ಆಯ್ದು ಸಂಪಾದಿಸಿದ ಜನಪದ ಗೀತೆಗಳ ಸಂಗ್ರಹವನ್ನು ತೀನಂಶ್ರೀಯವರು "ಹೆಣ್ಣುಮಕ್ಕಳ ಪದಗಳು" ಎಂದು ಕರೆದಿರುವುದು ಉಚಿತವಾಗಿದೆ. ಈ ಗೀತೆಗಳನ್ನು ಓದುವವರ ಮನಸ್ಸಿನಲ್ಲಿ ಅಚ್ಚೊತ್ತಿ ನಿಲ್ಲುವ ವಸ್ತು ಹೆಣ್ಣಿನ ಹೃದಯ. ಕನ್ನಡ ನಾಡಿನ ಗ್ರಾಮೀಣ ಮಹಿಳೆಯ ನಲಿವು ನೋವುಗಳು. ಅವಳನ್ನು ಬಾಧಿಸಿದ ಸಮಸ್ಯೆಗಳು ಈ ತ್ರಿಪದಿಗಳಲ್ಲಿ ಜೀವಸ್ರೋತವಾಗಿ ಹರಡಿವೆ. ಅವರ ಕಾವ್ಯಮೀಮಾಂಸೆ ಗ್ರಂಥದಲ್ಲಿ ಕಾವ್ಯದ ಅತ್ಯಂತ ಶ್ರೇಷ್ಠವಾದ ಮಾದರಿಗಳಿಗೆ ಇವುಗಳಲ್ಲಿ ಕೆಲವನ್ನು ಉದಾಹರಣೆಗಳಾಗಿ ಕೊಟ್ಟಿದ್ದಾರೆ. ಗರತಿಯ ಹಾಡುಗಳೆಂದು ಪ್ರಸಿದ್ಧವಾಗಿದ್ದ ಈ ಗೀತೆಗಳನ್ನು ತೀನಂಶ್ರೀಯವರು ಬಹುವಾಗಿ ಮೆಚ್ಚಿಕೊಂಡಿದ್ದರು.

ನಿರಾಭರಣವಾದ ಕಾವ್ಯ ಸೌಂದರ್ಯಕ್ಕೆ, ತೌರುಮನೆಯಲ್ಲಿ ಬಾಣಂತನ ನಡೆದ ಬಳಿಕ ಮಗುವಿನೊಂದಿಗೆ ಅತ್ತೆಯ ಮನೆಗೆ ಹೊರಟ ಹಳ್ಳಿಯ ಹುಡುಗಿ ಚಿತ್ರ ಹೀಗಿದೆ:

*ತೊಟ್ಟಿಲ ಹೊತ್ಕೊಂಡು ತೌರುಬಣ್ಣ ಉಟ್ಕೊಂಡು*
*ಅಪ್ಪ ಕೊಟ್ಟೆಮ್ಮ ಹೊಡಕೊಂಡು – ತಂಗ್ಯಮ್ಮ*
*ತಿಟ್ಹತ್ತಿ ತಿರುಗಿ ನೋಡ್ಯಾಳು.*

''ದಾರಿಯಲ್ಲಿ ಸಿಕ್ಕಿದ ತಿಟ್ಟನ್ನು ಹತ್ತಿ ಇಳಿಯುವ ಮುಂಚೆ ತೌರೂರಿನ ಕೊನೆಯ ದರ್ಶನ ತೆಗೆದುಕೊಳ್ಳಲು ಈ ಹುಡುಗಿ ತಿರುಗಿ ನೋಡುತ್ತಾಳೆ. ಆ ನೋಟದಲ್ಲಿ ಎಷ್ಟು ಆಸೆ, ಎಷ್ಟು ಖೇದ! ಪದ್ಯದ ಮಾತು ಎಷ್ಟು ಸರಳ''

ಎಂದು ತೀನಂಶ್ರೀ ವ್ಯಾಖ್ಯಾನಿಸುತ್ತಾರೆ.

**ಹರಿಹರ ಕವಿಯ ನಂಬಿಯಣ್ಣನ ರಗಳೆ** (ಮೊದಲ ಮುದ್ರಣ 1942): ತೀನಂಶ್ರೀಯವರು ತಮ್ಮ ವಿದ್ವತ್ತು ಮತ್ತು ಗ್ರಂಥ ಸಂಪಾದನಾ ಶಾಸ್ತ್ರದ ಜ್ಞಾನವನ್ನು ಧಾರೆ ಎರೆದು ಸಂಪಾದಿಸಿದ ಪ್ರಾಚೀನ ಕನ್ನಡ ಕಾವ್ಯ ಇದು. ಹರಿಹರ ಕವಿಯ ಅತ್ಯುತ್ಕೃಷ್ಟ ಕಾವ್ಯಗಳಲ್ಲಿ ಒಂದನ್ನು ಮೊಟ್ಟಮೊದಲು ಸಂಪಾದಿಸಿದ ಕೀರ್ತಿ ತೀನಂಶ್ರೀ ಅವರದು. ಈ ಗ್ರಂಥವನ್ನು ಅವರ ಗುರುಗಳಾದ ಪ್ರೊ. ಟಿ.ಎಸ್. ವೆಂಕಣ್ಣಯ್ಯನವರಿಗೆ ಅರ್ಪಿಸಿದ್ದಾರೆ. ಈ ಸಂಪಾದನಾ ಕಾರ್ಯಕ್ಕೆ ಪೂರಕವಾಗಿ ಬರಬೇಕಾಗಿದ್ದ ಸಂಪಾದನ ಕಾರ್ಯದ ಸಮಸ್ಯೆಗಳು, ಈ ಗ್ರಂಥದ ವಿಮರ್ಶೆ, ಪೀಠಿಕೆ ಟಿಪ್ಪಣಿಗಳೊನ್ನೊಳಗೊಂಡ ಸಂಪುಟ ಅವರಿಂದ ಬರಲೇ ಇಲ್ಲ.

**ರನ್ನ ಕವಿಯ ಗದಾಯುದ್ಧ ಸಂಗ್ರಹಂ** (ಮೊದಲ ಮುದ್ರಣ 1949): ತೀನಂಶ್ರೀಯವರು ಸಂಪಾದಿಸಿದ ಇನ್ನೊಂದು ವಿದ್ವತ್ಪೂರ್ಣ ಕೃತಿ ಇದಾಗಿದೆ. 92 ಪುಟಗಳಷ್ಟು ಪಠ್ಯಭಾಗವಿರುವ ಈ ಸಂಗ್ರಹಕ್ಕೆ ಕೊಟ್ಟಿರುವ ಟಿಪ್ಪಣಿ 116 ಪುಟಗಳಷ್ಟು. ಈ ಟಿಪ್ಪಣಿಗಳು ಹಳಗನ್ನಡ ಭಾಷೆ ಮತ್ತು ಕಾವ್ಯಗಳನ್ನು ಅಭ್ಯಾಸ ಮಾಡುವವರಿಗೆ ಒಂದು ಅನನ್ಯವಾದ ವಸ್ತುಕೋಶವಾಗಿರುವುದಲ್ಲದೆ ಹಳೆಯ ಕಾವ್ಯಗಳಿಗೆ ಬರೆಯಬೇಕಾದ ಟಿಪ್ಪಣಿಗಳಿಗೆ ಒಂದು ಮಾದರಿಯಾಗಿದೆ. ಈ ಕೃತಿಯನ್ನು ತೀನಂಶ್ರೀಯವರು ರನ್ನನು ಜನ್ಮವೆತ್ತಿ ಒಂದು ಸಾವಿರ ವರ್ಷಗಳು ಸಂದ ಸಮಯ (1949)ದಲ್ಲಿ ಆಚಾರ್ಯ ಬಿ.ಎಂ. ಶ್ರೀಕಂಠಯ್ಯನವರ ನೆನಪಿಗೆ ಭಕ್ತಿಯಿಂದ ನಿವೇದಿಸಿದ್ದಾರೆ.

## ವಿಮರ್ಶೆ

ತೀನಂಶ್ರೀಯವರ ವಿಮರ್ಶಾ ಸಾಹಿತ್ಯ "Admire and do otherwise" ಎಂಬ ಉದಾರದೃಷ್ಟಿಯದು. ಕಾವ್ಯಮೀಮಾಂಸೆ ತಜ್ಞರಾದ

ತೀನಂಶ್ರೀಯವರು ಸಹೃದಯ ವಿಮರ್ಶೆ ಮತ್ತು ವಸ್ತುನಿಷ್ಠತೆಗೆ ಪ್ರಸಿದ್ಧರಾಗಿದ್ದು ಅವರ ಕಾವ್ಯ ಮತ್ತು ಗ್ರಂಥ ವಿಮರ್ಶೆಗಳು ಬಹುತೂಕವಾದ ವಿಮರ್ಶೆಗಳಾಗಿದ್ದವು. ತೀನಂಶ್ರೀಯವರ ವಿಮರ್ಶೆಗಳು ಪ್ರಕಟವಾದನಂತರ ತಮ್ಮ ಕೆಲವು ಪುಸ್ತಕಗಳಿಗೆ ಹೆಚ್ಚಿನ ಮೌಲ್ಯ ದೊರಕಿತೆಂದು ದ.ರಾ. ಬೇಂದ್ರೆ, ಪು.ತಿ.ನರಸಿಂಹಾಚಾರ್, ವಿ.ಕೃ. ಗೋಕಾಕ್ ಅವರುಗಳು ಹೇಳಿದ್ದರು. ಕೆಲವು ಜನಪದಗೀತೆಗಳಂತೂ ತೀನಂಶ್ರೀಯವರ ವಿಮರ್ಶೆ ಮತ್ತು ಭಾಷಣಗಳಿಂದಲೇ ಪ್ರಚಾರಕ್ಕೆ ಬಂದವು.

**ಪಂಪ** (ಮೊದಲನೆಯ ಮುದ್ರಣ 1939): ಇದು ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರೋಪನ್ಯಾಸ ಮಾಲೆಗಾಗಿ ಮಾಡಿದ ಭಾಷಣ. 64 ಪುಟಗಳ ಚಿಕ್ಕಪುಸ್ತಕವಾಗಿ ಹೊರಬಂದಿದೆ. ಪಂಪನ ಬಗ್ಗೆ ಹೆಚ್ಚಲ್ಲದಿದ್ದರೂ ಕೆಲವು ದೊಡ್ಡಪುಸ್ತಕಗಳು ಪ್ರಕಟವಾಗಿದ್ದರೂ ಪಂಪನ ಬಗೆಗೆ ತತ್‌ಕ್ಷಣದ ಪರಿಚಯ ಬೇಕೆಂದರೆ ಇದನ್ನೇ ಓದಬೇಕು ಮತ್ತು ಮಿಕ್ಕ ಪುಸ್ತಕಗಳನ್ನು ಓದಿದ ಮೇಲೂ ಈ ಪುಸ್ತಕವನ್ನು ಮತ್ತೆ ಓದಬೇಕು ಅನಿಸದೆ ಇರದು. ನಮಗೆ ದೂರವಾದ ಹಳೆಗನ್ನಡದಲ್ಲಿ ಬರೆದ, ಅದರಿಂದಲೇ ಕಠಿಣವಾದ ಪಂಪನ ಕಾವ್ಯ ಕನ್ನಡ ಸಾರಸ್ವತ ಲೋಕದಲ್ಲಿ ಜನಪ್ರೀತಿಯನ್ನು ಸಂಪಾದಿಸಿದ್ದರೆ ಅದು ತೀನಂಶ್ರೀಯವರಂಥ ಪ್ರವಚನಕಾರರು ಮತ್ತು ಲೇಖಕರಿಂದ. ಈ ಪುಸ್ತಕದಲ್ಲಿ ತೀನಂಶ್ರೀಯವರು ಮೊದಲಬಾರಿಗೆ ಪ್ರಸ್ತಾಪಿಸಿರುವ ಪಾತ್ರಗಳು, ಪ್ರಸಂಗಗಳು ಮತ್ತು ವರ್ಣನೆಗಳು ಶ್ರೇಷ್ಠವೆಂದು ಇಂದಿಗೂ ವಿಮರ್ಶಕರು ಮತ್ತು ಸಹೃದಯರು ಒಪ್ಪಿಕೊಂಡಿರುವುದೇ ಈ ಕೃತಿಯ ಮಹತ್ವಕ್ಕೆ ಸಾಕ್ಷಿಯಾಗಿದೆ. ಈ ಪುಸ್ತಿಕೆಯಲ್ಲಿ ಪಂಪನ ವ್ಯಕ್ತಿತ್ವದ ದರ್ಶನವಾದಂತೆಯೇ ತೀನಂಶ್ರೀಯವರ ಮನೋಧರ್ಮ ಮತ್ತು ವ್ಯಕ್ತಿತ್ವಗಳ ದರ್ಶನವೂ ಆಗುತ್ತದೆ.

**ಕಾವ್ಯ ಸಮೀಕ್ಷೆ** (ಮೊದಲ ಮುದ್ರಣ 1947): ಈ ಪುಸ್ತಕ ಐದು ಸಮೀಕ್ಷಾ ಲೇಖನಗಳ ಸಂಕಲನ. 1947ರಲ್ಲಿ ಇದು ಪ್ರಕಟವಾಗಿದ್ದರೂ ಈ ಲೇಖನಗಳನ್ನು ಬರೆದಿದ್ದು 1933 ರಿಂದ 1942ರ ನಡುವಿನ ಕಾಲದಲ್ಲಿ. ಈ ಎಲ್ಲಾ ಲೇಖನಗಳಲ್ಲೂ ತೀನಂಶ್ರೀಯವರ ಆರಂಭದ ಬರವಣಿಗೆಯ ಲಕ್ಷಣಗಳೆನ್ನಬಹುದಾದ ವಿದ್ವತ್ತಿನ ಭಾರವನ್ನು ಕಾಣಬಹುದು. ಇದರಲ್ಲಿ ಕಾಳಿದಾಸ, ಕುಮಾರವ್ಯಾಸ, ಕುಮಾರವ್ಯಾಸ ಮತ್ತು ಅಕ್ಕಮಹಾದೇವಿಯ ಕಾವ್ಯಗಳು ಚರ್ಚಿತವಾಗಿವೆ. ತೀನಂಶ್ರೀಯವರ ವಿದ್ವತ್ತು ಮತ್ತು ಬಹುಶ್ರುತತ್ವಗಳು ಮತ್ತು ಈ ಕಾವ್ಯಗಳನ್ನು ನೋಡುವ ಹೊಸದೃಷ್ಟಿ ಇಲ್ಲಿ ಪ್ರಕಾಶಕ್ಕೆ ಬರುತ್ತವೆ.

**ಸಮಾಲೋಚನ** (ಮೊದಲ ಮುದ್ರಣ 1958): ತೀನಂಶ್ರೀಯವರು ಮೊದಲಿನಿಂದ ಆಗಾಗ ಬರೆದ ಹಲವು ಬಗೆಯ ಇಪ್ಪತ್ತೈದು ಲೇಖನಗಳನ್ನು ಒಟ್ಟುಗೂಡಿಸಿರುವ ಸಂಕಲನ ಇದು. ಇದರಲ್ಲಿನ ಹತ್ತು ಲೇಖನಗಳು ಭಾಷೆ, ವ್ಯಾಕರಣ ಮತ್ತು ಛಂದಸ್ಸನ್ನು ಕುರಿತಂಥವು. ಇನ್ನುಳಿದವು ವಿದ್ವತ್ ಪತ್ರಿಕೆಗಳಿಗೆ ಬರೆದ ಲೇಖನಗಳು, ವಿಶೇಷ ಸಮಾರಂಭಗಳಿಗೆ ಮಾಡಿದ ಉಪನ್ಯಾಸಗಳು ಮತ್ತು ಗ್ರಂಥಗಳಿಗೆ ಬರೆದ ಪ್ರಸ್ತಾವನೆಗಳು, ವಿಮರ್ಶೆಗಳು ಇತ್ಯಾದಿ. ಇಲ್ಲಿಯ ಲೇಖನಗಳು ತೀನಂಶ್ರೀಯವರಿಗೆ ವಿಶಿಷ್ಟವಾದ ಸಹೃದಯತೆ ಮತ್ತು ವಿದ್ವತ್ತುಗಳ ಹದವಾದ ಮಿಶ್ರಣದಿಂದ ಕೂಡಿವೆ. 'ಇಂಗ್ಲಿಷ್ ಗೀತೆಗಳು' ಮತ್ತು 'ಅಹಲ್ಯೆ' ಲೇಖನಗಳು ಈ ಕೃತಿಗಳನ್ನು ಕುರಿತ ತಟಸ್ಥರೀತಿಯಾದ ಲೇಖನಗಳಾಗಿದ್ದು ಆ ಬಗೆಗೆ ಇಲ್ಲಿ ಬಂದಿರುವುದಕ್ಕಿಂತ ಹೆಚ್ಚು ವಿವರವಾದ ಪರಿಶೀಲನೆ ಬೇರೆಯವರಿಂದ ಇದುವರೆಗೆ ನಡೆದಿಲ್ಲ. ಭಾಷೆ ಮತ್ತು ವ್ಯಾಕರಣಕ್ಕೆ ಸಂಬಂಧಿಸಿದ ಲೇಖನಗಳ ಬಗೆಗೆ ಹೇಳುವುದಾದರೆ, ಅವು ವಿದ್ವತ್ತಿನ ನಿಷ್ಕೃಷ್ಟತೆಯೊಂದಿಗೆ ಮನೋರಂಜಕತೆಯನ್ನು ಪಡೆದಿವೆ. ಈ ವಿಷಯಗಳನ್ನು ಕುರಿತು ತೀನಂಶ್ರೀಯವರಷ್ಟು ತಿಳಿಯಾಗಿ ಹೇಳಬಲ್ಲವರು ವಿರಳ. ಇಲ್ಲಿಯ ಛಂದಸ್ಸಿಗೆ ಸಂಬಂಧಪಟ್ಟ ಲೇಖನಗಳು ತೀನಂಶ್ರೀಯವರು ಛಂದಸ್ಸಿನ ಅಧ್ಯಯನಕ್ಕೆ ಕೊಟ್ಟ ಮಹತ್ವದ ಕೊಡುಗೆ ಎನ್ನುವುದರ ಜೊತೆಗೆ ಇವುಗಳನ್ನು ಓದಿದಾಗ ಅಲ್ಲಿಯ ತನಕ ಬಂದಿರುವ ಕನ್ನಡ ನವೋದಯ ಕಾವ್ಯವನ್ನೆಲ್ಲಾ ಪರಿವೀಕ್ಷಿಸಿದ ತೃಪ್ತಿಯುಂಟಾಗುತ್ತದೆ.

**ಸಂಕೀರ್ಣ**

ಮೇಲೆ ಉಲ್ಲೇಖಿಸಿರುವ ಪುಸ್ತಕಗಳಲ್ಲಿ 'ಬಿಡಿಮುತ್ತು' ಹೊರತಾಗಿ ಉಳಿದ ಹನ್ನೊಂದು ಪುಸ್ತಕಗಳು ತೀನಂಶ್ರೀಯವರ ಜೀವಿತಕಾಲದಲ್ಲಿ ಪ್ರಕಟವಾಗಿದ್ದವು. ಅದಲ್ಲದೆ ಕೆಲವು ಸಂಶೋಧನ ಲೇಖನಗಳು ವಿದ್ವತ್ಪತ್ರಿಕೆಗಳಲ್ಲಿ ಮತ್ತು ಇನ್ನು ಕೆಲವು ಲೇಖನಗಳು ಹಾಗೂ ಕವಿತೆಗಳು ಇತರ ಪತ್ರಿಕೆಗಳಲ್ಲಿ, ನಿಯತಕಾಲಿಕಗಳಲ್ಲಿ ಪ್ರಕಟವಾಗಿದ್ದವು.

'ಬಿಡಿಮುತ್ತು' ಪುಸ್ತಕವನ್ನು ತೀನಂಶ್ರೀಯವರೇ ಪ್ರಕಟಣೆಗೆ ಸಿದ್ಧಪಡಿಸಿದ್ದರು. ಅದು ಅವರ ಪ್ರಿಯ ಸ್ನೇಹಿತರಾದ 'ಕಾವ್ಯಾಲಯ'ದ ಕೂಡಲಿ ಚಿದಂಬರಂ ಅವರಿಂದ ತೀನಂಶ್ರೀಯವರಿಗೆ ಶ್ರದ್ಧಾಂಜಲಿ ರೂಪದಲ್ಲಿ 1970ರಲ್ಲಿ ಪ್ರಕಟವಾಯಿತು.

ತೀನಂಶ್ರೀಯವರ ಪ್ರಿಯಶಿಷ್ಯರಾಗಿದ್ದ ಎಚ್.ಎಂ. ಶಂಕರನಾರಾಯಣ ರಾಯರು ತಮ್ಮ ಗುರುಗಳ ಮೇಲಿನ ಭಕ್ತಿಯಿಂದ ತೀನಂಶ್ರೀಯವರ ಕೆಲವು ಸಂಶೋಧನೆ, ವಿಮರ್ಶೆ ಮತ್ತು ಬಿಡಿಲೇಖನಗಳನ್ನು ಸಂಕಲಿಸಿ 'ಕಾವ್ಯಾನುಭವ' ಎನ್ನುವ ಶೀರ್ಷಿಕೆಯಲ್ಲಿ 1970ರಲ್ಲಿ ಪ್ರಕಟಿಸಿದರು.

ತೀನಂಶ್ರೀಯವರು 1966ರಲ್ಲಿ ತಾವು ಹಿಂದಿರುಗದ ದೀರ್ಘ ಪ್ರವಾಸ ಹೊರಡುವ ಮೊದಲು ದೇಶ ಮತ್ತು ವಿದೇಶಗಳಲ್ಲಿ ಪ್ರಕಟವಾದ ತಮ್ಮ ಇಂಗ್ಲಿಷ್ ಲೇಖನಗಳನ್ನು ಅವಶ್ಯ ತಿದ್ದುಪಡಿಗಳೊಡನೆ ಸಂಕಲಿಸಿ ಅದನ್ನು "Literary and Linguistic Studies" ಎನ್ನುವ ಶೀರ್ಷಿಕೆಯೊಡನೆ ಪ್ರಕಟಿಸುವುದಕ್ಕೆ ಪ್ರಕಾಶಕರೊಬ್ಬರ ಕೋರಿಕೆಯಂತೆ ಕೊಟ್ಟು ಹೋಗಿದ್ದರು. ಆದರೆ ತೀನಂಶ್ರೀ ಹಿಂತಿರುಗದೆ, ಅದು ದೀರ್ಘಕಾಲಿಕ ಅಜ್ಞಾತವಾಸವನ್ನು ಅನುಭವಿಸುವಂತಾಯಿತು. ಅನಂತರ ಅದು ಎರಡು ಭಾಗಗಳಲ್ಲಿ ಪ್ರಕಟವಾಗಿದೆ. "Imagination in Indian Poetics" and Other Literary Studies ಎನ್ನುವ ಪುಸ್ತಕ ಸಾಹಿತ್ಯಕ್ಕೆ ಸಂಬಂಧಪಟ್ಟ ಎಲ್ಲ ಇಂಗ್ಲಿಷ್ ಲೇಖನಗಳ ಸಂಕಲನವಾಗಿ 1980ರಲ್ಲಿ ಪ್ರಕಟವಾಯಿತು. ಭಾಷಾಶಾಸ್ತ್ರಕ್ಕೆ ಸಂಬಂಧಪಟ್ಟ ಅವರ ಉಳಿದ ಲೇಖನಗಳು "Affricates in Kannada Speech" and Other Linguistic Papers ಎನ್ನುವ ಶೀರ್ಷಿಕೆಯಲ್ಲಿ 1994ರಲ್ಲಿ ಪ್ರಕಟವಾಯಿತು. ಈ ಲೇಖನಗಳ ಸಂಕಲನದಲ್ಲಿ 1935ರಲ್ಲಿ ತೀನಂಶ್ರೀಯವರು ಅಂತರರಾಷ್ಟ್ರೀಯ ವಿದ್ವತ್ ಪತ್ರಿಕೆಗಳಾಗಿ ಬರೆದ ಲೇಖನದಿಂದ ಪ್ರಾರಂಭಿಸಿ ಅವರು ಬರೆದ ಎಲ್ಲ ಇಂಗ್ಲಿಷ್ ಲೇಖನಗಳೂ ಸೇರಿವೆ.

ಇದಲ್ಲದೆ 'ಒಲುಮೆ'ಯನ್ನು ಒಳಗೊಂಡು – 'ಬಿಡಿಮುತ್ತು'ವನ್ನು ಹೊರತುಪಡಿಸಿ–ಅವರು ಬರೆದ ಎಲ್ಲ ಕವಿತೆಗಳನ್ನು ಸಂಕಲಿಸಿ ''ತೀ.ನಂ.ಶ್ರೀ. ಸಮಗ್ರ ಕವಿತೆಗಳು'' 1996ರಲ್ಲಿ ಪ್ರಕಟವಾಗಿದೆ. ಮತ್ತು 'ಭಾರತೀಯ ಕಾವ್ಯಮೀಮಾಂಸೆ'ಯನ್ನು ಹೊರತುಪಡಿಸಿ ಅವರ ನಂಟರು, ಕಾವ್ಯಸಮೀಕ್ಷೆ, ಕಾವ್ಯಾನುಭವ, ಸಮಾಲೋಕನ, ಪಂಪ ಮತ್ತು ಇನ್ನು ಕೆಲವು ಪ್ರಕಟವಾಗದಿದ್ದ ಬಿಡಿ ಲೇಖನಗಳನ್ನು ಸೇರಿಸಿ ''ತೀ.ನಂ.ಶ್ರೀ. ಸಮಗ್ರ ಗದ್ಯ'' 2006ರಲ್ಲಿ ಪ್ರಕಟವಾಗಿದೆ.

ತೀನಂಶ್ರೀಯವರು ಭಾಷಾಶಾಸ್ತ್ರದಲ್ಲಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದ ವಿದ್ವಾಂಸರು. ಆದ್ದರಿಂದ ಅಂದಿನ ಆಧುನಿಕ ಭಾಷಾಶಾಸ್ತ್ರದ ಪಾಂಡಿತ್ಯದ

ಹಿನ್ನೆಲೆಯಲ್ಲಿ ತೀನಂಶ್ರೀಯವರು "ಕನ್ನಡ ಭಾಷಾ ಚರಿತ್ರೆ" (History of Kannada Language) ಗ್ರಂಥವನ್ನು ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳಲ್ಲಿ ಬರೆಯುವ ಸಿದ್ಧತೆ ಮಾಡಿಕೊಳ್ಳುತ್ತಿದ್ದರು. ಇದಕ್ಕಾಗಿ ಪುಣೆಯ ಡೆಕ್ಕನ್ ಕಾಲೇಜಿನಲ್ಲಿ 1967ರಲ್ಲಿ ಒಂದು ವರ್ಷಕಾಲ ಸಂದರ್ಶಕ ಪ್ರಾಧ್ಯಾಪಕರಾಗಿ ಹೋಗಲು ಒಪ್ಪಿಗೆ ನೀಡಿದ್ದರು. ಆದರೆ ವಿಧಿಯ ವಿಲಾಸ! ತೀನಂಶ್ರೀಯವರಿಗೆ ಮಾತ್ರ ಸಾಧ್ಯವಿದ್ದ ಮತ್ತು ಅವರಿಂದ ಇನ್ನೊಂದು ಆಚಾರ್ಯ ಕೃತಿಯಾಗಿ ನಿರೀಕ್ಷಿಸಲಾಗಿದ್ದ ಈ ಪಾಂಡಿತ್ಯಪೂರ್ಣ ಗ್ರಂಥ ಪ್ರಕಾಶವಾಗಲ್ಲೇ ಇಲ್ಲ, ಇದು ಭಾಷಾಶಾಸ್ತ್ರಕ್ಕೆ ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಮಟ್ಟದಲ್ಲಿ ತುಂಬಲಾಗದ ನಷ್ಟ ಎಂದು ವಿದ್ವಾಂಸರುಗಳ ಅಭಿಪ್ರಾಯವಾಗಿದೆ.

ಕನ್ನಡ ಭಾಷೆಗೆ ತೀನಂಶ್ರೀಯವರ ಇನ್ನೊಂದು ಮೌಲಿಕವಾದ ಕೊಡುಗೆ ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿರುವ 'ಕನ್ನಡ ನಿಘಂಟು'. ಇದರ ಯೋಜನೆಯಲ್ಲಿ ಅದರ ಪ್ರಾರಂಭವಾದ 1943ನೇ ಇಸವಿಯಿಂದಲೂ ತಮ್ಮ ಜೀವನ ಕೊನೆಯಾದ 1966ರವರೆಗೂ ವಿವಿಧ ಘಟ್ಟಗಳಲ್ಲಿ ಮತ್ತು ಸುಮಾರು ಹತ್ತು ವರ್ಷಗಳ ಅದರ ಸಂಪಾದಕ ಸಮಿತಿಯ ಅಧ್ಯಕ್ಷರಾಗಿ ಗೌರವ ಸೇವೆಯನ್ನು ಸಲ್ಲಿಸಿದ್ದರು. ಇದಕ್ಕಾಗಿ ತಮ್ಮ ಜೀವನವನ್ನೇ ತೇದಿದ್ದರು ಎನ್ನುವುದು ಎಲ್ಲರಿಗೂ ತಿಳಿದಿರುವ ವಿಷಯ. ಈ ನಿಘಂಟಿನ ರೂಪುರೇಷೆಗಳನ್ನು ನಿರ್ಧರಿಸುವಲ್ಲಿ ಮತ್ತು ಅದಕ್ಕೆ ವಿದ್ವತ್ತಿನ ಮೌಲ್ಯ ಮತ್ತು ಪಾಂಡಿತ್ಯದ ಆಳವನ್ನು ಅಳವಡಿಸುವುದರಲ್ಲಿ ತೀನಂಶ್ರೀ ಮತ್ತು ಡಿ.ಎಲ್.ಎನ್ ಅವರ ಕೊಡುಗೆ ಅಪಾರ ಮತ್ತು ಅನನ್ಯ. ತೀನಂಶ್ರೀಯವರು ಕನ್ನಡ ನಿಘಂಟಿನ ಆಧಾರ ಸ್ತಂಭದಂತಿದ್ದು ಅದಕ್ಕೆ ಭದ್ರವಾದ ಬುನಾದಿಯನ್ನು ನಿರ್ಮಿಸಿದರು. ಅವರ ಅಕಾಲಿಕ ನಿಧನದಿಂದ ಈ ನಿಘಂಟು ತೀನಂಶ್ರೀಯವರ ಭಾಷಾಶಾಸ್ತ್ರದ ಪಾಂಡಿತ್ಯದ ಹಿನ್ನೆಲೆಯಿಂದ ಸದಾಕಾಲಕ್ಕೂ ವಂಚಿತವಾಯಿತೆಂದು ಸಮಿತಿಯ ಸದಸ್ಯರೆಲ್ಲರ ಮತ್ತು ವಿದ್ವಾಂಸರುಗಳ ಅಭಿಪ್ರಾಯವಾಗಿದೆ.

ತೀನಂಶ್ರೀಯವರು ಬರೆಯಬೇಕೆಂದು ಯೋಚಿಸಿದ್ದ ಲೇಖನಗಳು ಮತ್ತು ಗ್ರಂಥಗಳ ಒಂದು ಬಾಕಿ ಪಟ್ಟಿಯೇ ಅವರ ಮೇಜಿನ ಮೇಲೆ ಇದ್ದು, ಅದು ಬೆಳೆಯುತ್ತಲೇ ಹೋಯಿತು. ಈಗ ಅದು ಅವರ 'ಚರಮ ಗೀತೆ'ಯ ಭಾಗವಾಗಿ ಉಳಿದಿದೆ ಎಂದು ವಿಷಾದಪಡಬೇಕಾಗಿದೆ.

## ತೀ.ನಂ.ಶ್ರೀ ಕೃತಿಗಳ ಸಮಗ್ರ ಪಟ್ಟಿ

ಕವಿತೆ : ಒಲುಮೆ
ತೀ.ನಂ.ಶ್ರೀ. ಸಮಗ್ರ ಕವಿತೆಗಳು

ವಿಮರ್ಶೆ : ಪಂಪ
ಕಾವ್ಯ ಸಮೀಕ್ಷೆ
ಸಮಾಲೋಕನ
ಕಾವ್ಯಾನುಭವ
ತೀ.ನಂ.ಶ್ರೀ. ಸಮಗ್ರ ಗದ್ಯ

ಕಾವ್ಯಮೀಮಾಂಸೆ : ಭಾರತೀಯ ಕಾವ್ಯಮೀಮಾಂಸೆ

ಲಲಿತ ಪ್ರಬಂಧಗಳು : ನಂಟರು

ಅನುವಾದ : ಬಿಡಿಮುತ್ತು
(ರೂಪಾಂತರ) : ರಾಕ್ಷಸನ ಮುದ್ರಿಕೆ

ವ್ಯಾಕರಣ : ಕನ್ನಡ ಮಧ್ಯಮ ವ್ಯಾಕರಣ

ಸಂಪಾದನೆ : ಹೆಣ್ಣುಮಕ್ಕಳ ಪದಗಳು
ಹರಿಹರ ಕವಿಯ 'ನಂಬಿಯಣ್ಣನ ರಗಳೆ'
ರನ್ನ ಕವಿ 'ಗದಾಯುದ್ಧ ಸಂಗ್ರಹಂ'

ಇಂಗ್ಲಿಷಿನಲ್ಲಿ : "Imagination in Indian Poetics" and Other Literary Studies

"Affricates in Kannada Speech" and Other Linguistic Papers

## ತೀ.ನಂ.ಶ್ರೀ. ಜೀವನದ ಘಟನೆಗಳು

| | |
|---|---|
| 1906 | ನವೆಂಬರ್ 26: ತೀರ್ಥಪುರದಲ್ಲಿ ಜನನ.<br>ತಂದೆ: ತೀರ್ಥಪುರದ ನಂಜುಂಡಯ್ಯ<br>ತಾಯಿ: ಬಳುವನೇರಲಿನ ಭಾಗೀರಥಮ್ಮ |
| 1915 | ತಾಯಿ ಭಾಗೀರಥಮ್ಮನವರ ನಿಧನ |
| 1918 | ಉಪನಯನ |
| 1923 | ತುಮಕೂರಿನಲ್ಲಿ ಎಂಟ್ರೆನ್ಸ್ ಪರೀಕ್ಷೆ ತೇರ್ಗಡೆ |
| 1926 | ತುರುವೇಕೆರೆಯ ಜಯಲಕ್ಷ್ಮಿಯೊಡನೆ ವಿವಾಹ.<br>ಮೈಸೂರು ಮಹಾರಾಜ ಕಾಲೇಜಿನಲ್ಲಿ ಬಿ.ಎ. ಪರೀಕ್ಷೆ ತೇರ್ಗಡೆ |
| 1928 | ಮೈಸೂರು ಸಿವಿಲ್ ಸರ್ವೀಸ್ (ಎಂ.ಸಿ.ಎಸ್) ಪರೀಕ್ಷೆ ತೇರ್ಗಡೆ<br>ಶ್ರೀರಂಗಪಟ್ಟಣದಲ್ಲಿ ಎರಡು ತಿಂಗಳು ಪ್ರೊಬೇಶನರಿ ಅಮಲ್ದಾರ್ ಕೆಲಸ<br>ಮೈಸೂರು ಇಂಟರ್‌ಮೀಡಿಯಟ್ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ನೇಮಕ |
| 1929 | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇಂಗ್ಲಿಷ್ ಎಂ.ಎ. ಪರೀಕ್ಷೆ ತೇರ್ಗಡೆ<br>ಮಹಾರಾಜ ಕಾಲೇಜಿಗೆ ಕನ್ನಡ ಅಧ್ಯಾಪಕರಾಗಿ ವರ್ಗ |
| 1930 | ತಂದೆ ನಂಜುಂಡಯ್ಯನವರ ನಿಧನ |
| 1931 | ಕನ್ನಡ ಎಂ.ಎ. ಪರೀಕ್ಷೆ ತೇರ್ಗಡೆ<br>ಮಗಳು ವಿಶಾಲಾಕ್ಷಿ ಜನನ |
| 1936 | ಮಗಳು ನಾಗರತ್ನಳ ಜನನ |
| 1942 | ಮಗ ನಾಗಭೂಷಣನ ಜನನ |

1943 ಕನ್ನಡ ಉಪ ಪ್ರಾಧ್ಯಾಪಕರಾಗಿ ಬೆಂಗಳೂರು ಇಂಟರ್‌ಮೀಡಿಯೆಟ್ ಕಾಲೇಜಿಗೆ ವರ್ಗ

ಮಾತೃ ಸಮಾನರಾದ ಸೋದರತ್ತೆ ಲಕ್ಷ್ಮೀದೇವಮ್ಮನವರ ನಿಧನ

ಮಗಳು ವಿಶಾಲಾಕ್ಷಿಯ ನಿಧನ

1948 ಮೈಸೂರು ಸಂವಿಧಾನ ಪರಿಷತ್ತಿನಲ್ಲಿ ಭಾಷಾಂತರಕಾರ

–50 ದಾವಣಗೆರೆ ಧ.ರಾ.ಮ. ಇಂಟರ್‌ಮೀಡಿಯೆಟ್ ಕಾಲೇಜಿನಲ್ಲಿ ಕೆಲವು ತಿಂಗಳು (ಎರಡು ಸಾರಿ) ಸೂಪರಿಂಟೆಂಡೆಂಟ್

ಕೋಲಾರ ಇಂಟರ್‌ಮೀಡಿಯೆಟ್ ಕಾಲೇಜಿನಲ್ಲಿ ಕೆಲವು ತಿಂಗಳು ಸೂಪರಿಂಟೆಂಡೆಂಟ್

1950 ಭಾರತ ಸಂವಿಧಾನ ಪರಿಷತ್ತಿನ ಭಾಷಾತಜ್ಞರ ಸಮ್ಮೇಳನದ ಪ್ರತಿನಿಧಿ

1952 ಧಾರವಾಡದ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಪ್ರಥಮ ಕನ್ನಡ ಪ್ರಾಧ್ಯಾಪಕರಾಗಿ ನೇಮಕ

1953 ಆಚಾರ್ಯರ ಕೃತಿ "ಭಾರತೀಯ ಕಾವ್ಯಮೀಮಾಂಸೆ" ಪ್ರಕಟಣೆ

1954 ಪುಣೆಯ ಡೆಕ್ಕನ್ ಕಾಲೇಜು ಛಳಿಗಾಲದ ಭಾಷಾವಿಜ್ಞಾನ ಶಾಲೆಯಲ್ಲಿ ಗೌರವ ಪ್ರಾಧ್ಯಾಪಕ

1955 ರಾಕ್‌ಫೆಲ್ಲರ್ ಪ್ರತಿಷ್ಠಾನದ ಗೌರವ ಫೆಲೋಶಿಪ್ ಮೇಲೆ

–56 ಅಮೆರಿಕ ಸಂಯುಕ್ತ ಸಂಸ್ಥಾನದ ಮಿಚಿಗನ್ ಮತ್ತು ಪೆನ್ಸಿಲ್ವೇನಿಯಾ ವಿಶ್ವವಿದ್ಯಾನಿಲಯಗಳಲ್ಲಿ ಭಾಷಾಶಾಸ್ತ್ರದ ಉನ್ನತ ವ್ಯಾಸಂಗ

ಅಮೆರಿಕ, ಇಂಗ್ಲೆಂಡ್, ಫ್ರಾನ್ಸ್, ಸ್ವಿಟ್ಜರ್ಲೆಂಡ್, ಹಾಲಂಡ್, ಇಟಲಿ ದೇಶಗಳಲ್ಲಿ ಪ್ರವಾಸ

1957 ಮೈಸೂರು ಮಹಾರಾಜ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ನೇಮಕ.

ದೆಹಲಿಯಲ್ಲಿ ನಡೆದ ಅಖಿಲ ಭಾರತ ಪ್ರಾಚ್ಯ ವಿದ್ವತ್ಸಮ್ಮೇಳನದ ದ್ರಾವಿಡ ಭಾಷಾವಿಜ್ಞಾನ ಶಾಖೆಯ ಅಧ್ಯಕ್ಷ

1958 ಕನ್ನಡ ಸಾಹಿತ್ಯ ಪರಿಷತ್ತಿನ "ಕನ್ನಡ ನಿಘಂಟು ಸಂಪಾದಕ ಸಮಿತಿ" ಅಧ್ಯಕ್ಷರಾಗಿ ನೇಮಕ

1960 ಮೈಸೂರು ಮಾನಸಗಂಗೋತ್ರಿಯ ಕನ್ನಡ ಸ್ನಾತಕೋತ್ತರ ವ್ಯಾಸಂಗ ಮತ್ತು ಸಂಶೋಧನ ವಿಭಾಗದ ಪ್ರಾಧ್ಯಾಪಕರಾಗಿ ನೇಮಕ

ಅಖಿಲ ಭಾರತ ಭಾಷಾವಿಜ್ಞಾನಿಗಳ ಸಂಘದ ಅಧ್ಯಕ್ಷ

1961 ಮಗಳು ನಾಗರತ್ನಳ ವಿವಾಹ

ಗದಗಿನಲ್ಲಿ ನಡೆದ 43ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಭಾಷಾ ಬಾಂಧವ್ಯ ಗೋಷ್ಠಿಯ ಅಧ್ಯಕ್ಷ

1962 ಮಾರ್ಚ್ 31: ಸೇವೆಯಿಂದ ನಿವೃತ್ತಿ

1963 ಮಗ ನಾಗಭೂಷಣನ ಉಪನಯನ

1966 ಸೆಪ್ಟೆಂಬರ್ 7: ಕಲ್ಕತ್ತೆಯಲ್ಲಿ ನಿಧನ


## ನಿಧನಾನಂತರ ಘಟನೆಗಳು

| | |
|---|---|
| 1966 | ಮೈಸೂರು ರಾಜ್ಯ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ |
| 1972 | ಮಗ ನಾಗಭೂಷಣನ ವಿವಾಹ |
| 1975 | ''ಶ್ರೀಕಂಠತೀರ್ಥ'' ಸ್ಮಾರಕ ಗ್ರಂಥ ಸಮರ್ಪಣೆ |
| 1981 | ತಂಗಿ ಸಾವಿತ್ರಮ್ಮನವರ ನಿಧನ |
| 1990 | ''ಭಾರತೀಯ ಕಾವ್ಯಮೀಮಾಂಸೆ''ಗೆ ''ಪಂಪ ಪ್ರಶಸ್ತಿ'' ಪ್ರದಾನ |
| 1998 | ಬೆಂಗಳೂರಿನಲ್ಲಿ ತೀ.ನಂ.ಶ್ರೀ. ಪ್ರತಿಮೆ ಅನಾವರಣ |
| 2001 | ಪತ್ನಿ ಜಯಲಕ್ಷ್ಮಮ್ಮನವರ ನಿಧನ |
| 2002 | ಬೆಂಗಳೂರಿನಲ್ಲಿ ''ಪ್ರೊಫೆಸರ್ ತೀ.ನಂ.ಶ್ರೀ. ವೃತ್ತ'' ನಾಮಕರಣ |
| 2005 | ತೀರ್ಥಪುರದಲ್ಲಿ ತೀ.ನಂ.ಶ್ರೀ. ಸ್ಮಾರಕ ಸರ್ಕಾರಿ ಪದವಿಪೂರ್ವ ಕಾಲೇಜು ಪ್ರಾರಂಭ |
| 2005–06 | ಪ್ರೊ॥ ತೀ.ನಂ.ಶ್ರೀ. ಜನ್ಮಶತಮಾನೋತ್ಸವ ವರ್ಷ ಆಚರಣೆ |
| 2006 | ''ತೀ.ನಂ.ಶ್ರೀ. ಪಥ–ಪರಿಸರ'' ಪ್ರಕಟಣೆ |
| 2007 | ಚಿಕ್ಕನಾಯಕನಹಳ್ಳಿಯಲ್ಲಿ ''ತೀ.ನಂ.ಶ್ರೀ ಸ್ಮಾರಕ ಸಾಂಸ್ಕೃತಿಕ ಭವನ'' ನಿರ್ಮಾಣಕ್ಕಾಗಿ ರಾಜ್ಯ ಸರ್ಕಾರದಿಂದ ಒಂದೂವರೆ ಕೋಟಿ ರೂಪಾಯಿ ಅನುದಾನ ಬಿಡುಗಡೆ |

## ತೀ.ನಂ.ಶ್ರೀ ಅವರ ಬಗ್ಗೆ ಪ್ರಕಟವಾಗಿರುವ ಕೃತಿಗಳು

1. ತೀ.ನಂ.ಶ್ರೀ : ದೇ. ಜವರೇಗೌಡ (1967)
2. ಶ್ರೀಕಂಠತೀರ್ಥ: (ಸಂ.) ಎಂ. ಚಿದಾನಂದಮೂರ್ತಿ, ತೀ.ಶ್ರೀ. ನಾಗಭೂಷಣ, ತೀ.ನಂ. ಶಂಕರನಾರಾಯಣ (1976, 1980)
3. ತೀ.ನಂ. ಶ್ರೀಕಂಠಯ್ಯ: ಎಚ್.ಜಿ. ಸಣ್ಣಗುಡ್ಡಯ್ಯ (1992, 2004)
4. 'ಆಚಾರ್ಯ ತೀ.ನಂ.ಶ್ರೀ.' ಒಂದು ಅಧ್ಯಯನ : ಎಂ.ವಿ. ಶ್ರೀನಿವಾಸ ಮೂರ್ತಿ (1997)
5. ತೀ.ನಂ.ಶ್ರೀ.: ತ್ರಿಮುಖ : ಸಿ.ಪಿ.ಕೆ. (2005)
5. ಶ್ರೀಕಂಠ ದರ್ಶನ : (ಸಂ.) ದೇ. ಜವರೇಗೌಡ, ಕೆ. ಭೈರವಮೂರ್ತಿ, ತ.ಚಿ. ಚಲುವೇಗೌಡ (2006)
6. ತೀ.ನಂ.ಶ್ರೀ. ಪಥ–ಪರಿಸರ : (ಸಂ) ತೀ.ಶ್ರೀ. ನಾಗಭೂಷಣ (2006)
7. ತೀ.ನಂ. ಶ್ರೀಕಂಠಯ್ಯ : ತೀ.ನಂ. ಶಂಕರನಾರಾಯಣ (2007)

# ಹೊಯ್ಸಳ ಮಾಲೆ




## ಪುಸ್ತಕಗಳು ದೊರೆಯುವ ಸ್ಥಳ

1. **ಹೊಯ್ಸಳ ಕರ್ನಾಟಕ ಸಂಘ (ರಿ.)**
   3ನೇ ಅಡ್ಡ ರಸ್ತೆ, ಹೊಂಬೇಗೌಡನಗರ,
   ಬೆಂಗಳೂರು-560 027
   ಫೋನ್: 080-2227 4411

2. **ಹೊಯ್ಸಳ ಕರ್ನಾಟಕ ಸಂಘ (ರಿ.)**
   888, ನಾರಾಯಣಶಾಸ್ತ್ರಿ ರಸ್ತೆ,
   ಲಕ್ಷ್ಮಿಪುರಂ, ಮೈಸೂರು-570 008.
   ಫೋನ್: 0821-2330995

3. **ಹೊಯ್ಸಳ ಕರ್ನಾಟಕ ಸಂಘ (ರಿ.)**
   309, ಎಲ್.ಐ.ಜಿ. 21ನೇ ಅಡ್ಡ ರಸ್ತೆ,
   ಕುವೆಂಪುನಗರ, ಹಾಸನ-573 201
   ಫೋನ್: 08172-268848

4. **ಜ್ವಾಲಾಮುಖಿ ಮುದ್ರಣಾಲಯ ಪ್ರೈವೇಟ್ ಲಿಮಿಟೆಡ್**
   44/1, ಕೆ.ಆರ್. ರಸ್ತೆ,
   ಬಸವನಗುಡಿ, ಬೆಂಗಳೂರು-560 004
   ಫೋನ್: 080-26617243 / 2660 1064



# ಹೊಯ್ಸಳ ಕರ್ನಾಟಕ ಸಂಘ (ರಿ.)

3ನೇ ಅಡ್ಡರಸ್ತೆ, ಹೊಂಬೇಗೌಡನಗರ, ಬೆಂಗಳೂರು - 560 027
ಫೋನ್ : +91-80-2227 4411

## ಹೊಯ್ಸಳ ಮಾಲೆ

ಹೊಯ್ಸಳ ಕರ್ನಾಟಕ ಜನಾಂಗವು ಸ್ಮಾರ್ತಬ್ರಾಹ್ಮಣ ಸಂಪ್ರದಾಯದ ಒಂದು ಪುಟ್ಟ ಪಂಗಡ. ಕರ್ನಾಟಕ ರಾಜ್ಯದ ಚಿಕ್ಕಮಗಳೂರು, ಶಿವಮೊಗ್ಗ, ಹಾಸನ, ಮೈಸೂರು, ಮಂಡ್ಯ, ತುಮಕೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ವಿಶೇಷವಾಗಿ ಇವರ ಇರುವು. ವಿಜಯನಗರದ ಕಾಲದಲ್ಲಿ ಕೆಲವು ಕುಟುಂಬಗಳು ತಮಿಳುನಾಡಿನ ತಂಜಾವೂರು ಪ್ರದೇಶಕ್ಕೆ ತೆರಳಿ, ಇಂದಿಗೂ ಕೆಲವು ಕುಟುಂಬಗಳು ಅಲ್ಲಿಯೇ ನೆಲೆಸಿವೆ. ಸಮಾಜದ ನಾನಾ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುವ ನಮ್ಮ ಜನ ಇಂದು ವಿಶ್ವದ ನಾನಾ ಭಾಗಗಳಲ್ಲಿದ್ದಾರೆ.

ನಮ್ಮ ಪಂಗಡ ಪುಟ್ಟದಾದರೂ ನಮ್ಮ ಅನೇಕ ಜನರು ಪ್ರಖ್ಯಾತರಾಗಿ ಸಮಾಜಕ್ಕೆ ವಿಶಿಷ್ಟವಾದ ಕೊಡುಗೆಯನ್ನು ನೀಡಿ ಕೀರ್ತಿಶಾಲಿಗಳಾಗಿದ್ದಾರೆ. ಜನತೆಯ ವಿಶ್ವಾಸ, ಗೌರವ ಮನ್ನಣೆಗೆ ಪಾತ್ರರಾಗಿರುವ ಅನೇಕರೂ, ಉದಯೋನ್ಮುಖ ಪ್ರತಿಭಾವಂತರೂ ಇಂದು ನಮ್ಮೊಡನೆಯೇ ಇದ್ದಾರೆ.

ಈ ಎಲ್ಲಾ ಪ್ರತಿಭಾಸಂಪನ್ನರನ್ನು ನಮ್ಮ ಇಂದಿನ ಪೀಳಿಗೆಗೂ, ಸಮಾಜಕ್ಕೂ, ಪರಿಚಯಿಸಿ, ಪ್ರಚರಿಸಿ, ದಾಖಲಿಸುವ ಸದುದ್ದೇಶದಿಂದ ಬೆಂಗಳೂರಿನ ಹೊಯ್ಸಳ ಕರ್ನಾಟಕ ಸಂಘವು ಈ ಹೊಯ್ಸಳ ಮಾಲೆಯ ಪ್ರಕಟಣಾ ಕಾರ್ಯವನ್ನು ಕೈಗೊಂಡಿದೆ.

